ದೇವಿ ಎಂಬುವರ ಅಂಗಡಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ. ಆಕೆಯ ಸಂಗಡ ಜಗಳ ತೆಗೆದು ಆಕೆಯನ್ನು ಅವಾಚ್ಯ ಶಬ್ದಗಳಿಂದ ಬೈದು ಆಕೆಯನ್ನು ಅಪಮಾನ ಮಾಡಲು ಪ್ರಯತ್ನಿಸಿರುತ್ತಾರೆ. ಅಂಗಡಿಯಲ್ಲಿದ್ದ ಸಾಮಾನುಗಳನ್ನು ಚೆಲ್ಲಾಪಿಲ್ಲಿ ಎಸೆದು ನಷ್ಟವನ್ನುಂಟು ಮಾಡಿರುತ್ತಾರೆ. ಇದನ್ನು ಕಂಡ ಸಾರ್ವಜನಿಕರು ಉದ್ರೇಕಗೊಂಡರು, ತಕ್ಷಣವೇ ವೃತ್ತ ಅರಕ್ಷಕ ನಿರೀಕ್ಷಕರು ಮತ್ತು ಅರಕ್ಷಕ ಉಪನಿರೀಕ್ಷಕರು ಸ್ಥಳಕ್ಕೆ ಧಾವಿಸಿದರು, ಪೋಲೀಸ್ ಪೇದೆಗಳನ್ನು ಹಿಡಿದುಕೊಂಡು ಪರಿಸ್ಥಿತಿಯನ್ನು ತಹಬಂದಿಗೆ ತಂದರು. ಇದರ ಸಂಬಂಧವಾಗಿ ಸ್ಟೇಷನ್ ಬಜಾರ್ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೩೫/೮೬ ಕಲಂ ೪೪೮, ೩೫೪. ೪೨೭. ೫೦೪, ೫೦೬ ಭಾರತೀಯ ದಂಡ ಸಂಹಿತೆಯ ಪ್ರಕಾರ ಗುನ್ನೆಯೊಂದನ್ನು ನೋಂದಾಯಿಸಲಾಗಿದೆ. ಅಪರಾಧಿಯಾದ ರಫೀಕನು ತಲೆತಪ್ಪಿಸಿಕೊಂಡಿದ್ದಾನೆ. ದಸ್ತಗಿರಿ ಮಾಡಿದ ಪೋಲೀಸ್ ಪೇದೆಗಳು ಪಾನಮತ್ತರಾಗಿದ್ದ ಕಾರಣ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಅವರಿಬ್ಬರನ್ನು ಅಮಾನತ್ತಿನಲ್ಲಿ ಇಡಲಾಗಿದೆ. ಈ ಪ್ರಕರಣದಲ್ಲಿ ದೋಷಾರೋಪಣ ಪತ್ರವನ್ನು ಶೀಘ್ರದಲ್ಲಿಯೇ ಸಲ್ಲಿಸಲಾಗುವುದು. ಪರಿಸ್ಥಿತಿಯು ಈಗ ಶಾಂತಿಯುತವಾಗಿದೆ.

ರಾಜ್ಯದಲ್ಲಿ ತಲೆದೋರಿರುವ ಬರಗಾಲದ ಬಗ್ಗೆ ಚರ್ಚೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಹಿಂದೆಂದೂ ಕಾಣದ ಒಂದು ಭೀಕರ ಬರಗಾಲ ಇವತ್ತು ರಾಜ್ಯದ ಜನತೆಯನ್ನು ಕಾಡುತ್ತಿದೆ. ಈ ಸಂದರ್ಭದಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದು ಅವಶ್ಯಕ. ಅದರ ಬಗ್ಗೆ ಈಗಾಗಲೇ ನಮ್ಮ ಕೈಲಾದ ಮಟ್ಟಿಗೆ ಮಾನ್ಯ ವಿರೋಧ ಪಕ್ಷದ ನಾಯಕರನ್ನೂ ಸೇರಿದಂತೆ ಎಲ್ಲ ಸದಸ್ಯರೂ ಅಲ್ಲಿರುವಂತಹ ನ್ಯೂನತೆಗಳನ್ನು, ಆಗಿರುವಂತಹ ಕೆಲಸದ ಬಗ್ಗೆ ವಿವರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಬಹುಶಃ ಈ ಜಾಗದಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಇದ್ದುಕೊಂಡು ಬರಗಾಲದ ಕಾಮಗಾರಿಯಲ್ಲಿ, ಆ ಒಂದು ಕಾಮಗಾರಿ ನಡೆಯುವಂತಹ ಸಂದರ್ಭದಲ್ಲಿ ಜನಗಳಿಗೆ ಏನು ತೊಂದರೆಯಾಗಿದೆ, ಏನು ನ್ಯೂನತೆಗಳಿವೆ ಅದನ್ನು ಸರ್ಕಾರದ ಗಮನಕ್ಕೆ ತರುವಂತಹದ್ದು ನಮ್ಮ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಬಹಳ ಒಳ್ಳೆಯ ಕೆಲಸಗಳಾಗಿದ್ದರೂ ಸಹಿತ, ಇನ್ನೂ ಆಗಬೇಕಾದ ಕೆಲಸಗಳೂ ಏನಿವೆ. ಅವುಗಳ ಕಡೆಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಭೀಕರ ಬರಗಾಲವನ್ನು ಎದುರಿಸುವಂತಹ ಸಂದರ್ಭದಲ್ಲಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕಾಗಿದೆ, ಜಾನುವಾರುಗಳಿಗೆ ಮೇವಿನ ವ್ಯವಸ್ಥೆಯಾಗಬೇಕಾಗಿದೆ, ಕೂಲಿಗಾರರಿಗೆ ಕೆಲಸವನ್ನು ಕೊಡಬೇಕಾಗಿದೆ. ಅದನ್ನು ಮಾಡುವಂತಹ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಬಹುಶಃ ಈ ಹಿಂದೆ ವಿಧಾನ ಸಭೆಯ ಕಾರ್ಯಕಲಾಪಗಳು ಮುಗಿಯುವಂತಹ ಸಂದರ್ಭದಲ್ಲಿ ಭೀಕರ ಬರಗಾಲವನ್ನು ಮುಂದೆ ಎದುರಿಸುವುದಕ್ಕೆ ಆಗಬೇಕಾದಂತಹ ಸಿದ್ಧತೆಯ ಬಗ್ಗೆ ಕೊನೆ ದಿವಸ ಮಾತನಾಡಿದೆವು. ಅದು ಆದ ಮೇಲೆ ೩ ತಿಂಗಳು ಕಳೆದ ನಂತರ ನಾವು ಇಲ್ಲಿ ಸೇರುತ್ತಿದ್ದೇವೆ ಒಂದೊಂದು ತಾಲ್ಲೂಕಿನಲ್ಲೂ ಒಂದು ಲಕ್ಷ ರೂಪಾಯಿಗಳ ಬರಗಾಲ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಆ ರೀತಿಯ ಸಿದ್ಧತೆಯ ಬಗ್ಗೆ ಸೂಕ್ತ ಕಾರ್ಯಕ್ರಮ ಹಾಕಬೇಕಾಗಿತ್ತು. ಆ ರೀತಿಯ ಕಾರ್ಯಕ್ರಮವನ್ನು ಇನ್ನೂ ಹಾಕಿರಲಿಕ್ಕಿಲ್ಲ ಬಹುಶಃ ಜೂನ್ ತಿಂಗಳಲ್ಲಿ ಮಳೆ ಬಂದ ನಂತರವೂ ಮತ್ತೊಮ್ಮೆ ಚಿಂತನೆ ಮಾಡಿದಾಗಲೂ ಪುನರ್ವ್ಯವಸ್ಥೆ ಮಾಡುವ ಬಗ್ಗೆ ಚಿಂತನೆ ಮಾಡಬೇಕಾಗಬಹುದು. ಸನ್ಮಾನ್ಯ ಮುಖ್ಯಮಂತ್ರಿಗಳು ಈಗಿರುವ ಭೀಕರ ಬರಗಾಲವನ್ನು ಎದುರಿಸುವುದರ ಜೊತೆಗೆ ಮುಂದೆಯೂ ಪುನರ್ವ್ಯವಸ್ಥೆಯ ಕಾರ್ಯಕ್ರಮದ ಬಗ್ಗೆ ಯೋಚನೆ ಮಾಡಿದ್ದಾರಾ? ನಮ್ಮ ಭಾಗದಲ್ಲಿ ವಾಸ ಮಾಡುವ ಜನರು ಯಾವ ಸ್ಥಿತಿಗೆ ಬಂದಿದ್ದಾರೆಂದರೆ. ಅವರಲ್ಲಿರುವಂತಹ ಜಾನುವಾರುಗಳನ್ನೂ ಸಾಕುವುದಕ್ಕಾಗದೆ ೧೦೦-೨೦೦ ರೂಪಾಯಿಗಳಿಗೆ ತಮ್ಮಲ್ಲಿರುವ ಜಾನುವಾರುಗಳನ್ನು ಸಂತೆಗಳಲ್ಲಿ ಮಾರುವಂತಹ ಸ್ಥಿತಿಗೆ ಬಂದಿದ್ದಾರೆ. ಮತ್ತೆ ಅವರ ಮನೆಗಳಲ್ಲಿರುವ ವ್ಯವಸಾಯ ಉಪಕರಣಗಳಾದ ನೇಗಿಲು, ನೊಗ, ಇವುಗಳನ್ನು ೨೦-೩೦ ರೂಪಾಯಿಗಳಿಗೆಲ್ಲಾ ಮಾರಿಕೊಂಡು ನಗರ ಪ್ರದೇಶಗಳ ಕಡೆಗೆ ಕೂಲಿ ಹುಡುಕಿಕೊಂಡು ಬರುವಂತಹ ವಿಚಿತ್ರ ಪರಿಸ್ಥಿತಿ ಇದೆ. ಕಳೆದ ಮೂರು ವರ್ಷಗಳಿಂದಲೂ ಭೀಕರ ಬರಗಾಲ ಇರುವಂತಹ ವಾಸ್ತವಿಕ ಸಂದಿಗ್ಧ ಪರಿಸ್ಥಿತಿಯಲ್ಲಿ ಶ್ರೀಮಾನ್ ಜಾಲಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ರೀತಿಯ ಭೀಕರ ಬರಗಾಲ ಇದೆ ಎಂಬುದನ್ನು ಸರ್ಕಾರ ಕೂಡ ಒಪ್ಪಿಕೊಂಡಿದೆ. ಕೆಲವು ಕಡೆ ೫ ಚೀಲ ರಾಗಿ, ಜೋಳ, ಭತ್ತ ಆಗಿದ್ದರೂ, ಬೀಜಕ್ಕೂ ಬಿಡದೆ ತಿಂದು ಹಾಕುವಂತಹ ಪರಿಸ್ಥಿತಿಗೆ ಜನರು ಬಂದು ಮುಟ್ಟಿದ್ದಾರೆ. ಆದ್ದರಿಂದ

ಮಳೆ ಬಂದ ಮೇಲೂ ಜೀವನ ಮಾಡುವುದು ಹೇಗೆ ಎಂಬುದನ್ನು ಕೂಡ ವಿಚಾರ ಮಾಡಬೇಕಾಗುತ್ತದೆ. ಮತ್ತೆ ಮುಂದೆ ಬಿತ್ತನೆಗಾಗಿ ಬೇಕಾಗುವಷ್ಟು ಬೀಜವನ್ನು ವ್ಯವಸ್ಥೆ ಮಾಡುವುದರ ಜೊತೆಗೆ ರೈತರು ತೆಗೆದುಕೊಂಡಿರತಕ್ಕಂತಹ ಬೆಳೆ ಸಾಲವನ್ನು ಮನ್ನಾ ಮಾಡುವುದರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ ? ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಹೇಳಿದಾಕ್ಷಣ, ರೈತರ ಪರವಾಗಿ ಹೋರಾಟ ಮಾಡುವಂತಹ ರೈತರ ನಾಯಕರ ಸದ್ದನ್ನು ಅಡಗಿಸುವಂತಹ ಕೆಲಸವನ್ನು ಈ ಸರ್ಕಾರ ಮಾಡಿದ ಮೇಲೆ ಆ ರೈತರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ನಿಮ್ಮ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಭೀಕರ ಬರಗಾಲಕ್ಕೆ ತುತ್ತಾದಂತಹ ಸಂದರ್ಭದಲ್ಲಿ ಈ ವರ್ಷವೂ ವಿಶೇಷ ಸಹಕಾರಿ ಸಾಲವನ್ನು ರೈತರು ಪಡೆದಿದ್ದಾರೆ, ಆ ಹಣವನ್ನು ಮನ್ನಾ ಮಾಡಿ, ಅವರಿಗೆ ಬೇಕಾದ ವ್ಯವಸ್ಥೆ ಮಾಡುತ್ತೇವೆ, ನಾವು ಇದ್ದೇವೆ ಎನ್ನುವ ಕೆಲಸವನ್ನು ಸರ್ಕಾರ ಮಾಡದಿದ್ದರೆ ಬಹುಶ: ರೈತರು ನೆಮ್ಮದಿಯಿಂದ ಜೀವನ ಮಾಡುವುದು ಕಷ್ಟವಾಗಬಹುದು. ತಕ್ಷಣವೇ ಈ ವರ್ಷ ಇರುವಂತಹ ಭೀಕರ ಬರಗಾಲವನ್ನು ಎದುರಿಸುವುದಕ್ಕೆ ಯಾವ ರೀತಿಯ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ ಎಂಬುದನ್ನು ಹೇಳಬೇಕೆಂದು ಮೊಟ್ಟಮೊದಲ ಬಾರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ, ಈ ಒಂದು ವಿಚಿತ್ರ ಪರಿಸ್ಥಿತಿಯೊಳಗೆ ರೈತ ತಾನು ಬೆಳೆದಂತಹ ಬೆಳೆಯ ಬಗ್ಗೆ ಸರ್ಕಾರದ ಹೇಳಿಕೆಯ ಪ್ರಕಾರ ವಿಮೆಯನ್ನು ಮಾಡಿಸಿದ್ದಾನೆ. ೧೦೦ ರೂಪಾಯಿಗಳ ಸುಮಾರು ರೈತರು ವಿಮೆಯನ್ನು ಮಾಡಿಸಿದ್ದಾರೆ. ಈ ಸಾರಿ ಹಾಕಿದಂತಹ ಬೆಳೆ ನಷ್ಟವಾಗಿದೆ ಎಂದು ಮಾಡಿಸಿರತಕ್ಕಂತಹ ವಿಮೆಯನ್ನು ಕೇಳುವುದಕ್ಕೆ ಬ್ಯಾಂಕಿನ ಅಧಿಕಾರಿಗಳ ಹತ್ತಿರ ಹೋದರೆ, ಬ್ಯಾಂಕಿನ ಅಧಿಕಾರಿಗಳು, ಕೇವಲ ನಿಮ್ಮ ಗ್ರಾಮದಲ್ಲಿ ಬೆಳೆ ನಷ್ಟವಾದರೆ ವಿಮೆಯನ್ನು ಕೊಡುವುದಕ್ಕಾಗುವುದಿಲ್ಲ, ಎಲ್ಲ ಕಡೆಯೂ ಬೆಳೆ ನಷ್ಟವಾಗಬೇಕು. ಆಗ ಮಾತ್ರ ವಿಮೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದಾಗಿ ಹೇಳುತ್ತಿದ್ದಾರೆ, ಇದು ಕೇಂದ್ರ ಸರ್ಕಾರದ ನೀತಿಯೇ ಆಗಿರಬಹುದು. ನಬಾರ್ಡಿನವರು ಈ ವಿಚಾರವನ್ನು ಹೇಳಿದ ಮೇಲೆ ರೈತರು ವಿಮೆಯನ್ನು ಮಾಡಿಸಿದ್ದಾರೆ. ರೈತರಿಗೆ ಈ ರೀತಿ ವಿವರ ಅರ್ಥವಾಗುತ್ತಿಲ್ಲ. ಆದ್ದರಿಂದ ಸಾಲ ಸೋಲ ಮಾಡಿ, ವಿಮೆಯನ್ನು ಮಾಡಿಸಿರುವಂತಹ ರೈತರ ಪರಿಸ್ಥಿತಿ ಏನು? ಅವರಿಗೆ ಪರಿಹಾರದ ಹಣವನ್ನು ತಲುಪಿಸುವ ಬಗ್ಗೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಕೇಂದ್ರ ಸರ್ಕಾರಕ್ಕೂ ಆ ಬಗ್ಗೆ ಮನವಿ ಮಾಡಿಕೊಳ್ಳಿ. ಸರ್ಕಾರ ಕೂಡ ನಬಾರ್ಡಿನವರ ಜೊತೆಗೆ ಚರ್ಚೆ ಮಾಡಿ, ವಿಚಿತ್ರವಾಗಿರತಕ್ಕಂತಹ ಈ ಭೀಕರ ಬರಗಾಲದಲ್ಲಿ ವಿಮೆಯನ್ನು ಯಾರು ಮಾಡಿಸಿದ್ದಾರೆ. ಅವರುಗಳ ಬೆಳೆ ಸಂಪೂರ್ಣವಾಗಿ ನಾಶವಾಗಿದ್ದರೆ, ಅವರ ಬೆಳೆಗೆ ಆಗಿರುವಂತಹ ನಷ್ಟವನ್ನು ಸಂಪೂರ್ಣವಾಗಿ ತುಂಬಿಸಿಕೊಡುವುದಕ್ಕೆ ಏನಾದರೂ ಯೋಚನೆಯನ್ನು ಸರ್ಕಾರ ಮಾಡಿದೆಯೇ ಎಂದು ನಾನು ಕೇಳುತ್ತಿದ್ದೇನೆ.

ಮತ್ತೆ ಕುಡಿಯುವ ನೀರಿನ ವಿಷಯದಲ್ಲಿ ಸದನದಲ್ಲಿ ಚರ್ಚೆ ನಡೆದಿದೆ. ಅದನ್ನು ನಾನೂ ನೋಡಿದ್ದೇನೆ. ೩–೪ ದಿವಸಗಳ ಹಿಂದೆ ನಾನು ತುಮಕೂರಿಗೆ ಹೋಗಿದ್ದೆ. ಅಲ್ಲೂ ಕೂಡ ಕೊಳವೆ ಬಾವಿಗಳನ್ನು ತೆಗೆಯುತ್ತಿರುವುದನ್ನು ನೋಡಿದ್ದೇನೆ. ಅದೇ ರೀತಿ ಬೆಂಗಳೂರು ನಗರದಲ್ಲೂ ಕೊಳವೆ ಬಾವಿಗಳನ್ನು ತೆಗೆಯುತ್ತಿದ್ದಾರೆ. ಆದರೆ ಅಂತರ್ಜಲದ ಮಟ್ಟ ಕೆಳಕ್ಕೆ ಹೋಗುತ್ತಿದೆ. ಕೊಳವೆ ಬಾವಿಯನ್ನು ತೆಗೆದರೂ ನೀರು ಬರುತ್ತಿಲ್ಲ ಎಂಬುದನ್ನು ಸರ್ಕಾರವೇ ಒಪ್ಪಿಕೊಂಡಿದೆ, ಅದನ್ನು ಅವರೇ ಕೊಟ್ಟಿರುವಂತಹ ವರದಿಯಲ್ಲಿ ಒಪ್ಪಿಕೊಂಡಿದ್ದಾರೆ. ೩೦೦ ಅಡಿ ಆಳದವರೆಗೂ ಕೊರೆಯುವಂತಹ ರಿಗ್‌ಗಳು ನಮ್ಮಲ್ಲಿವೆ. ಆದರೆ ೩೦೦ ಅಡಿಯ ಮೇಲೆ ಕೊರೆಯುವಂತಹ ಹೈಡ್ರಾಲಿಕ್ ರಿಗ್‌ಗಳನ್ನು ಕೊಳ್ಳುವುದರ ಬಗ್ಗೆ ತೀವ್ರವಾಗಿ ವಿಚಾರ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಅಂತರ್ಜಲದ ಮಟ್ಟ ಕೆಳಕ್ಕೆ ಹೋಗುತ್ತಿರುವುದರಿಂದ ಸೈಕ್ಲೋನ್ ರಿಗ್‌ಗಳನ್ನು ಕೊಳ್ಳುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆ ಎಂದು ಹೇಳಿದ್ದಾರೆ. ೩ ತಿಂಗಳ ಹಿಂದೆಯೇ ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಿದಾಗಲೂ, ಅಂತರ್ಜಲದ ಮಟ್ಟ ಕೆಳಕ್ಕೆ ಹೋಗುತ್ತಿದೆ ಎಂದು ಹೇಳಿದ್ದಾಗ್ಯೂ, ಅದಕ್ಕೆ ಬೇಕಾದಂತಹ ರಿಗ್‌ಗಳ ವ್ಯವಸ್ಥೆಯನ್ನು ಮಾಡದೆ, ಇವತ್ತು ಆ ಬಗ್ಗೆ ಯೋಚನೆ ಮಾಡುತ್ತಿದ್ದೇವೆಂದು ಹೇಳುವುದಾದರೆ, ಇನ್ನೂ ಏಪ್ರಿಲ್–ಮೇ ತಿಂಗಳುಗಳಿಗೆ ಮುಟ್ಟಿದಾಗ ಜನಗಳ ಪರಿಸ್ಥಿತಿ ಏನು ? ಸನ್ಮಾನ್ಯ ಲಕ್ಷ್ಮೀಸಾಗರ್‌ರವರು ಪ್ರಾಮಾಣಿಕ ಪ್ರಯತ್ನ ಮಾಡಿ ನಗರ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆ

ಯನ್ನು ಮಾಡುವುದರ ಕಡೆ ಗಮನ ಹರಿಸಿದ್ದಾರೆ. ಆದರೆ ಇಂತಹ ಭೀಕರ ಬರಗಾಲ ಇರುವಂತಹ ಪ್ರದೇಶಗಳಲ್ಲಿ ಅಂತರ್ಜಲದ ಮಟ್ಟ ಕೆಳಗೆ ಹೋಗುತ್ತಿರುವ ಸಂದರ್ಭದಲ್ಲಿ ಅದನ್ನು ಎದುರಿಸುವುದಕ್ಕೆ ಮಾಡಿರುವಂತಹ ವ್ಯವಸ್ಥೆಯಾದರೂ ಏನು ಎಂದರೆ ಎರಡು ಸೈಕ್ಲೋನ್ ರಿಗ್‌ಗಳು. ಅದರಲ್ಲೂ ಒಂದು ಬೀದರ್‌ನಲ್ಲಿದೆ, ಇನ್ನೊಂದು ಬೆಂಗಳೂರು ನಗರದಲ್ಲಿದೆ. ಹೈಡ್ರಾಲಿಕ್ ರಿಗ್‌ಗಳನ್ನು ಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ನಮ್ಮ ದೇಶದಲ್ಲೇ ಹೈಡ್ರಾಲಿಕ್ ರಿಗ್‌ಗಳನ್ನು ತಯಾರು ಮಾಡತಕ್ಕಂತಹ ಜನರು ಇದ್ದಾರೆ. ಒಂದೊಂದು ರಿಗ್‌ಗಳು ಎಷ್ಟು ದಿವಸ ಒಂದೇ ಕಡೆ ಇರಬೇಕು ? ಅಲ್ಲಿರುವ ಕೆಲಸವನ್ನು ಮುಗಿಸಿ ಮತ್ತೊಂದು ಕಡೆಗೆ ಕಳುಹಿಸುವಂತಹ ವ್ಯವಸ್ಥೆ ಮಾಡಿದ್ದೀರಾ ? ನೀವು ಹತ್ತಾರು ರಿಗ್‌ಗಳನ್ನು ಕೊಳ್ಳುವುದಕ್ಕೆ ಪ್ರಯತ್ನ ಮಾಡಿರಬಹುದು. ಆದರೆ ಆ ರೀತಿ ಕೊಳ್ಳುವಂತಹ ರಿಗ್‌ಗಳು ಯಾವ ವರ್ಷಕ್ಕೆ ? ಜಾನುವಾರುಗಳಿಗೇ ಆಗಲಿ, ಮನುಷ್ಯರಿಗೇ ಆಗಲಿ ಬೇಕಾಗಿರುವಂತಹದ್ದು ನೀರು. ಆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕಾಗಿ ಇಡೀ ರಾಜ್ಯದಲ್ಲಿ ಎರಡು ರಿಗ್‌ಗಳನ್ನು ಇಟ್ಟುಕೊಂಡಿದ್ದೇವೆಂದು ಹೇಳುವುದಾದರೆ, ೧೮ ಜಿಲ್ಲೆಗಳಲ್ಲಿ ೮ ಜಿಲ್ಲೆಗಳಲ್ಲಂತೂ ಭೀಕರ ಬರಗಾಲವನ್ನು ಎದುರಿಸುವುದಕ್ಕೆ ಮಾಡಬೇಕಾಗಿರುವಂತಹ ಸಿದ್ಧತೆಯ ಬಗ್ಗೆ ಮಾಡಿರುವಂತಹ ತಪ್ಪನ್ನು ಯಾರ ಮೇಲೆ ಹೇಳಬೇಕು ? ಕೊಳವೆ ಬಾವಿಗಳನ್ನು ಶ್ರೀಮಾನ್ ನಜೀರ್ ಸಾಬ್ ರವರು ಸಾಕಷ್ಟು ತೆಗೆಸಿದ್ದಾರೆ. ಆದರೆ ಆ ರೀತಿ ತೆಗೆದಿರುವಂತಹ ಕೊಳವೆ ಬಾವಿಗಳು ಕೆಟ್ಟು ಹೋದಾಗ ಆ ಗ್ರಾಮದವರು ಹತ್ತಿರದ ತಾಲ್ಲೂಕು ಕಚೇರಿಗೆ ಪತ್ರ ಬರೆದು ತಿಳಿಸುತ್ತಾರೆ. ಆದರೆ ಆ ಗ್ರಾಮದ ಮುಖ್ಯಸ್ಥನಿಗೆ ಕೊಳವೆ ಬಾವಿಯಲ್ಲಿ ಯಾವ ಬಿಡಿ ಭಾಗ ಹೋಗಿದೆ ಎಂಬುದು ಗೊತ್ತಿರುವುದಿಲ್ಲ. ಅವರಿಂದ ಪತ್ರ ಬಂದ ತಕ್ಷಣ ಲಾರಿಯನ್ನು ತೆಗೆದುಕೊಂಡು ಮೆಕ್ಯಾನಿಕ್ ೧೫–೨೦ ಮೈಲಿ ಹೋಗುತ್ತಾನೆ. ಆದರೆ ಆ ಕೊಳವೆ ಬಾವಿಯಲ್ಲಿ ಯಾವ ಬಿಡಿ ಭಾಗ ಹೋಗಿದೆ ಎಂಬುದು ಅವನು ಅದನ್ನು ನೋಡಿದ ಮೇಲೆ ಗೊತ್ತಾಗುವುದು. ಆವಾಗ ಅವನು ಆ ಗ್ರಾಮದ ಮುಖ್ಯಸ್ಥನಿಗೆ ಹೇಳುತ್ತಾನೆ. ಇಂತಿಂಥ ಬಿಡಿ ಭಾಗಗಳು ಹೋಗಿವೆ ಎಂದು ಏಕೆ ತಿಳಿಸಲಿಲ್ಲ ಅಂತ; ಕೇಳಿ ಹೋಗಿದಂತಹ ಲಾರಿ ಯಾವುದೇ ರಿಪೇರಿ ಕೆಲಸವನ್ನು ಮಾಡದೆ ವಾಪಸ್ಸು ಹೋಗುತ್ತದೆ. ಈ ವಿಚಾರವನ್ನು ನಮ್ಮ ಶಿವಮೊಗ್ಗ ಜಿಲ್ಲಾ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಚರ್ಚೆ ಮಾಡಿದಾಗ ತಿಳಿಸಿದ್ದೇನೆ. ಶಿವಮೊಗ್ಗ ಪರಿಸ್ಥಿತಿಯೇ ಈ ರೀತಿಯಾಗಿರಬೇಕಾದರೆ, ಬಾಕಿ ಕಡೆ ಇರುವಂತಹ ಪ್ರದೇಶಗಳ ಪರಿಸ್ಥಿತಿ ಏನು ಎಂಬುದನ್ನು ಯೋಚನೆ ಮಾಡಬೇಕು.

ಶಿಕಾರಿಪುರ ತಾಲ್ಲೂಕನ್ನು ಉದಾಹರಣೆಗೆ ತೆಗೆದುಕೊಂಡು ಒಂದು ಸಲಹೆ ಕೊಡುತ್ತೇನೆ. ಅಲ್ಲಿ ಮಲ್ಲೇನಹಳ್ಳಿ ಎಂಬ ಗ್ರಾಮ ಇದೆ. ಆ ಊರಿನಲ್ಲಿರತಕ್ಕ ಬೋರ್‌ವೆಲ್‌ಗಳಲ್ಲಿ ಸಾಕಷ್ಟು ನೀರಿದೆ. ಅಲ್ಲಿರತಕ್ಕ ಕೆರೆ ಇವತ್ತಿನ ದಿವಸ ಬತ್ತಿ ಹೋಗಿದೆ. ಆದ್ದರಿಂದ ಅಲ್ಲಿರತಕ್ಕ ಬೋರ್‌ವೆಲ್‌ಗಳಿಗೆ ಸಬ್ ಮರ್ಸಿಬಲ್ ಪಂಪನ್ನು ಅಳವಡಿಸಿ ಆ ನೀರನ್ನು ಎತ್ತಿ ಕೆರೆಗೆ ಬಿಡುವ ಪ್ರಯತ್ನ ಮಾಡಿದೆವು. ಹೀಗೆ ಮಾಡಿ ಈಗ ಸುಮಾರು ಎರಡು ತಿಂಗಳಿಗೆ ಆಗುವಷ್ಟು ನೀರನ್ನು ತುಂಬಿಸಿದ್ದೇವೆ ಸರ್ಕಾರವನ್ನು ಆಶ್ರಯಿಸದೆ ನಾವು ಈ ಕೆಲಸವನ್ನು ಮಾಡುತ್ತಿದ್ದೇವೆ. ಈ ಸಲಹೆಯನ್ನು ನಾನು ಏತಕ್ಕೆ ಕೊಡುತ್ತಿದ್ದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿ ಸಾಕಷ್ಟು ನೀರು ಇದೆ ಅದನ್ನು ಸಬ್‌ಮರ್ಸಿಬಲ್ ಪಂಪ್‌ನ ಸಹಾಯದಿಂದ ಅಕ್ಕಪಕ್ಕದ ಕೆರೆಗಳಿಗೆ ಬಿಟ್ಟು ಕೆರೆ ಕಟ್ಟೆಗಳನ್ನು ತುಂಬಿಸುವ ಕಾರ್ಯವನ್ನು ಮಾಡಬಹುದು ನಾವು ಇದನ್ನು ಪ್ರಾಯೋಗಿಕವಾಗಿ ಮಾಡಿ ಸಲಹೆ ಕೊಡುತ್ತಿದ್ದೇನೆ ದಯವಿಟ್ಟು ಸರ್ಕಾರ ಇದನ್ನು ಪರಿಶೀಲಿಸಬೇಕು. ಇತ್ತೀಚಿನ ದಿನಗಳಲ್ಲಿ ನೀರಿನ ಮಟ್ಟ ಕೆಳಕ್ಕೆ ಹೋಗಿರುವ ಕಡೆ ಬೋರ್‌ವೆಲ್‌ಗಳನ್ನು ಹಾಕುವಂತೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆಂದು ತಾವು ಹೇಳಿದ್ದೀರಿ ಆದರೆ ನಾನು ಶಿವಮೊಗ್ಗ ಜಿಲ್ಲೆಯಿಂದ ಬಂದವನಾಗಿ ಹೇಳುತ್ತಿದ್ದೇನೆ. ನಮ್ಮ ಜಿಲ್ಲಾಧಿಕಾರಿಗಳಿಗೆ ಒಂದೂವರೆ ತಿಂಗಳ ಹಿಂದೆ ಮನವಿ ಕೊಟ್ಟರೂ ಇದುವರೆಗೆ ಒಂದು ಗ್ರಾಮಕ್ಕೂ ಬೋರ್‌ವೆಲ್ ಹಾಕಿಲ್ಲ. ಅಂದಾಗ ನಿಮ್ಮ ವ್ಯವಸ್ಥೆ ಎಲ್ಲಿದೆ ? ಕೇವಲ ಪ್ರಚಾರದಿಂದ ಹೊಟ್ಟೆ ತುಂಬುವುದಿಲ್ಲ ಬಾಯಾರಿಕೆ ಇಂಗುವುದಿಲ್ಲ. ದಯವಿಟ್ಟು ಗ್ರಾಮಾಂತರ ಪ್ರದೇಶದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸಮಸ್ಯೆಯನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿ ಕೂಲಿಗಾರರಿಗೆ ಕೆಲಸ ಕೊಡುತ್ತೇವೆಂದು ಹೇಳಿದ್ದೀರಲ್ಲ ಎಲ್ಲಿ ಮಾಡಿದ್ದೀರಿ ? ಕೂಲಿಗಾರರು ಇವತ್ತು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ನಾನು

ಗುಲ್ಬರ್ಗ ಜಿಲ್ಲೆಯಲ್ಲಿ ಜೇವರ್ಗಿ, ಅಫಜಲ್‌ಪುರ ಮುಂತಾದ ಪ್ರದೇಶಗಳಿಗೆ ಹೋಗಿ ನೋಡಿದ್ದೇನೆ. ಅಲ್ಲಿ ಜನರು ಇಲ್ಲ. ಅವರೆಲ್ಲ ಶಿವಮೊಗ್ಗ, ಹೊನ್ನಾಳಿ, ಚನ್ನಗಿರಿ ತಾಲ್ಲೂಕು, ಚಿಕ್ಕ ಮಂಗಳೂರು ಜಿಲ್ಲೆಗೆ ಬಂದಿದ್ದಾರೆ. ಬೆಳಗಾಂ ಜಿಲ್ಲೆಯ ಅಥಣಿ, ರಾಮದುರ್ಗದ ಜನರು ಕೆಲಸವನ್ನು ಹುಡುಕಿಕೊಂಡು ಬೇರೆ ಕಡೆ ಹೊರಟಿದ್ದಾರೆ. ಇಂಥ ವಿಚಿತ್ರ ಪರಿಸ್ಥಿತಿ ಇರುವ ಸಂದರ್ಭದಲ್ಲಿ ಕೂಲಿ ಮಾಡುವ ಜನ ನಗರಕ್ಕೆ ಬಂದ ಮೇಲೆ ನಗರದ ಜೀವನವನ್ನು ಅರ್ಥ ಮಾಡಿಕೊಂಡು, ಕೆಲವು ದುಶ್ಚಟಗಳನ್ನು ಕಲಿತುಕೊಂಡು ಇಲ್ಲಿಹೇಗಾದರೂ ಜೀವನ ಮಾಡುವುದಕ್ಕೆ ಸಾಧ್ಯವೆಂದು ವಲಸೆ ಬರುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ಶ್ರೀ ಐ. ಬಿ. ಶಂಕರ್.—ಚಿಕ್ಕಮಂಗಳೂರು ಜಿಲ್ಲೆಗೆ ಯಾರೂ ವಲಸೆ ಬಂದಿಲ್ಲ. ಅಲ್ಲಿ ಕೂಡ ಬರಗಾಲ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಶಾಸಕರಲ್ಲಿ ವಿನಂತಿಸುತ್ತೇನೆ. ನಿಮ್ಮಲ್ಲಿ ಬರಗಾಲ ಇಲ್ಲವೆಂದು ಹೇಳುತ್ತಿಲ್ಲ. ಕಾಫಿ ಪ್ಲಾಂಟರ್ಸ್ ಹತ್ತಿರ ಶಿಕಾರಿಪುರ ತಾಲ್ಲೂಕಿನ ಜನರು ಶೇಕಡ ೫೦ ಮಂದಿ ಇದ್ದಾರೆ. ಅಲ್ಲಿ ಕೆಲಸ ಇದೆಯೋ ಇಲ್ಲವೇ ಗೊತ್ತಿಲ್ಲ. ಗದಗ್ ತಾಲ್ಲೂಕಿನ ಹುಂಚಕಿ ಎಂಬ ಗ್ರಾಮದಲ್ಲಿ ಕೂಲಿಗಾರರು ೧೫ ದಿವಸ ಕೆಲಸ ಮಾಡಿದರೂ ಕೂಲಿ ಸಿಗದ ಕಾರಣ ಅವರು ೨೩-೧೨-೧೯೮೫ರಂದು ಎರಡೂವರೆ ಗಂಟೆಗಳ ಕಾಲ ಬಸ್ಸನ್ನು ತಡೆದರು. ಏತಕ್ಕೆ ನೀವು ಬಸ್ಸನ್ನು ತಡೆಯುತ್ತಿದ್ದೀರಿ ಎಂದರೆ ಕೆಲಸ ಮಾಡಿ ೧೫ ದಿನವಾದರೂ ಕೂಲಿ ಕೊಟ್ಟಿಲ್ಲ, ಅದಕ್ಕೋಸ್ಕರ ತಡೆಯುತ್ತಿದ್ದೇವೆಂದು ಹೇಳಿದರು. ಮುಖ್ಯ ಮಂತ್ರಿಗಳು ೨೬ರಂದು ಅಲ್ಲಿಗೆ ಹೋಗಿದ್ದಾರೆ. ಅವರು ಬರುತ್ತಾರೆಂದು ತಿಳಿದ ಬಳಿಕ ೨೫ರಂದು ಪೇಮೆಂಟ್ ಮಾಡಿದ್ದಾರೆ. ಆ ಕೂಲಿಗಾರರಿಂದ ಬಂದ ಪತ್ರಗಳು ಇವೆ. ಅವರು ಬಹಳ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ನಿಮ್ಮ ಕಾರ್ಯಕ್ರಮಗಳನ್ನು ಏನಿದ್ದರೂ, ಕೂಲಿಗಾರರು ಊರು ಬಿಟ್ಟ ಮೇಲೆ, ಜಾನುವಾರುಗಳು ಸತ್ತ ಮೇಲೆ ಮಾಡುತ್ತೀರಿ. ನಿಮ್ಮ ಲೆಕ್ಕದ ಪ್ರಕಾರ ಲಕ್ಷಾಂತರ ಜನರಿಗೆ ಕೆಲಸ ಒದಗಿಸಬೇಕಾಗಿದೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಭೀಕರ ಬರಗಾಲ ಕಾಡುತ್ತಿದೆ. ನಾನು ೧೦-೧೨ ದಿನಗಳ ಹಿಂದೆ ಪ್ರವಾಸಕ್ಕೆ ಹೋಗಿದ್ದೆ. ಸರ್ಕಾರದ ಲೆಕ್ಕದ ಪ್ರಕಾರ ೨೨ ದಿನಗಳ ಕಾಮಗಾರಿಗಳ ಕೆಲಸ ನಡೆಯುತ್ತಿದೆ ಎಂದು ವರದಿ ಕೊಟ್ಟರೂ ಅದು ಕೇವಲ ಎರಡು ಜಾಗಗಳಲ್ಲಿ ಮಾತ್ರ ನಡೆಯುತ್ತಿದೆ. ಇದರ ಪರಿಣಾಮವಾಗಿ ೭ ದಿನ ತಾಲ್ಲೂಕು ಕಛೇರಿಯಲ್ಲಿ ಸತ್ಯಾಗ್ರಹ ಮಾಡಿದೆವು. ಸಾವಿರಾರು ಮಂದಿ ಕೂಲಿಗಾರರು ತಾಲ್ಲೂಕು ಕಛೇರಿಯ ಮುಂದೆ ಕುಳಿತರು. ಒಂದು ವಾರ ಕಾಲ ಸತ್ಯಾಗ್ರಹ ಮಾಡಿದರೂ ಇನ್ನೂ ಕೆಲಸ ಒದಗಿಸಿಕೊಟ್ಟಿಲ್ಲ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ತಿಳಿದುಕೊಳ್ಳಿ. ನಿಮ್ಮ ವರದಿಗೂ, ಅಲ್ಲಿ ಆಗುತ್ತಿರುವ ಕೆಲಸಕ್ಕೂ ಸಂಬಂಧ ಇಲ್ಲವೆಂಬುದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಎಲ್ಲ ಮಾನ್ಯ ಸದಸ್ಯರಲ್ಲಿ ನನ್ನದೊಂದು ವಿನಂತಿ ಏನೆಂದರೆ ಭೀಕರ ಬರಗಾಲ ಇರುವಾಗ ರಾಜಕಾರಣ ಮಾಡುವುದು ಬೇಡ, ಎಲ್ಲರೂ ಒಟ್ಟಿಗೆ ಸೇರಿ ಬರಗಾಲವನ್ನು ಎದುರಿಸೋಣ ಎಂದು. ಪ್ರತಿ ತಿಂಗಳೂ ಎಲ್ಲ ಮುಖಂಡರು ಮಾತ್ರವಲ್ಲ, ಎಲ್ಲ ಶಾಸಕರು ಒಂದೆಡೆ ಸೇರೋಣ ಎಲ್ಲಿ ಅವಶ್ಯಕತೆ ಇದೆ, ಎಲ್ಲಿ ಕೂಲಿಗಾರರು ಇದ್ದಾರೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡೋಣ. ಯಾರೂ ದೋಷಾರೋಪಣೆ ಮಾಡುವ ಪ್ರಯತ್ನ ಮಾಡುವುದು ಬೇಡ. ಇಂಥ ಒಳ್ಳೆಯ ಕೆಲಸ ಮಾಡುವಾಗ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಆದರೂ ಇದನ್ನು ಮಾಡುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ. ಇದಕ್ಕೆ ಕಾರಣವೇನು ? ಇದರ ಸತ್ಯಾಸತ್ಯತೆ ಗೊತ್ತಿಲ್ಲ ಅವರಲ್ಲಿ ಒಂದು ಬಗೆಯ ಅತೃಪ್ತಿ ಇದಕ್ಕೆ ಕಾರಣ ಎನ್ನಬಹುದು. ಇದರ ಹಿಂದೆ ಕಾಂಗ್ರೆಸ್‌ನವರು ಇದ್ದಾರೆ. ಬಹುಶಃ ಅವರಿಗೆ ಲೀಡರ್‌ಷಿಪ್ ಸಿಗುತ್ತದೆಂಬ ಭಾವನೆ ಇರಬಹುದು. ಬರಗಾಲದಲ್ಲಿ ಏತಕ್ಕೆ ಈ ರೀತಿ ಯೋಚಿಸುತ್ತಿದ್ದಾರೆಂದು ಗೊತ್ತಿಲ್ಲ. ಎಲ್ಲ ಪಕ್ಷದವರು ಒಟ್ಟಿಗೆ ಸೇರಿಕೊಂಡು ಎಲ್ಲಿ ಅವಶ್ಯಕತೆ ಇದೆ. ಅಲ್ಲಿ ಕೆಲಸ ಮಾಡಲು ಹಿಂದು ಮುಂದು ನೋಡುವುದನ್ನು ನೋಡಿದರೆ ಏನೋ ಒಳ ವ್ಯವಹಾರ ನಡೆಯುತ್ತಿದೆ ಎಂಬ ಅನುಮಾನ ಬರುತ್ತದೆ. ಇದಕ್ಕೆ ದಯವಿಟ್ಟು ಯಾರೂ ಆಸ್ಪದ ಕೊಡಬೇಡಿ. ಎಲ್ಲ ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳು ಪ್ರತಿಯೊಂದು ತಾಲ್ಲೂಕಿನಲ್ಲಿ ಎಲ್ಲರನ್ನು ಸೇರಿಸಿ ಅವಶ್ಯಕತೆ ಇರುವ ಕಡೆ ಕೆಲಸ ಮಾಡಿ. ಆಗ ರಾಜಕೀಯ ಆರೋಪಗಳಿಂದ ದೂರವಾಗಿ ಬರಗಾಲವನ್ನು ಎದುರಿಸುವುದಕ್ಕೆ ಸಾಧ್ಯವಾಗಬಹುದು. ಈ ಬಗ್ಗೆ ಪರಿಶೀಲನೆ ಮಾಡಬೇಕೆಂದು ವಿನಂತಿಸುತ್ತೇನೆ.

ಇನ್ನು ಜಾನುವಾರಿನ ಮೇವಿನ ಬಗ್ಗೆ ಬಹಳಷ್ಟು ಚರ್ಚೆಗಳು ನಡೆಯುತ್ತಿವೆ. ಜಾನುವಾರುಗಳ ಮೇವನ್ನು ಬೆಳೆದಂಥ ರೈತರಿಂದ ಮೇವನ್ನು ಕೊಂಡುಕೊಳ್ಳುತ್ತೇವೆಂದು

ಹೇಳಿದ್ದಿರಲ್ಲ ಎಂದು ಶಿವಮೊಗ್ಗದಲ್ಲಿ ನಡೆದ ಜಿಲ್ಲಾ ಮಂತ್ರಿಗಳ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದೆ ಅದಕ್ಕೆ ಅವರು ಮೇವನ್ನು ಬೆಳೆಯುತ್ತೇವೆ ಬೇರೆ ಬೇರೆ ಕಡೆಯಿಂದ ಜೋಳ ತಂದಿದ್ದೇವೆ. ಸಾಲ ಕೊಡುವ ವ್ಯವಸ್ಥೆ ಮಾಡಿದ್ದೇವೆ. ರೈತರು ಬೆಳೆದಂಥ ಮೇವನ್ನು ಕೊಂಡುಕೊಳ್ಳುವ ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳಿದರು. ಆದ್ದರಿಂದ ಯಾವ ರೈತನೇ ಆಗಲಿ ಆತ ಬೆಳೆದಂಥ ಮೇವನ್ನು ಕೊಂಡು ಕೊಳ್ಳುತ್ತೇವೆಂದು ಭರವಸೆ ಕೊಟ್ಟು ಗೆಜೆಟ್ ನೋಟಿಫಿಕೇಶನ್ ಮಾಡಿ........

ಶ್ರೀ ಎಸ್. ಆರ್ ಬೊಮ್ಮಾಯಿ.—ರೈತರಿಂದ ಆ ರೀತಿ ಬರವಣಿಗೆಯಲ್ಲಿ ತೆಗೆದುಕೊಂಡು ಸಾಲ ಕೊಡತಕ್ಕ, ಬೀಜ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಅನೇಕ ಕಡೆ ರೈತರು ಆ ರೀತಿ ಬರೆದುಕೊಟ್ಟು ಬೀಜ ಬಿತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತ ಬರವಣಿಗೆಯಲ್ಲಿ ಕೊಡುತ್ತಾನೆ, ಸಾಲ ಸಿಗುತ್ತದೆ. ರೈತ ಬೆಳೆದಂಥ ಮೇವನ್ನು ಕೊಂಡುಕೊಳ್ಳುವುದರ ಬಗ್ಗೆ ಅಗ್ರಿಮೆಂಟ್ ಆಗಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೊಂಡುಕೊಳ್ಳುವುದರ ಬಗ್ಗೆ ಅದರಲ್ಲಿದೆ. ಆ ರೀತಿ ನೋಟಿಫಿಕೇಷನ್ ಇಶ್ಯೂ ಮಾಡಿದ್ದೇವೆ. ಕೊಂಡುಕೊಳ್ಳುವ ದರವನ್ನೂ ಸಹ ಅದರಲ್ಲಿ ಸೂಚಿಸಿದ್ದೇವೆ. ಅವರು ಬೆಳೆದದ್ದನ್ನೆಲ್ಲ ಕೊಂಡುಕೊಳ್ಳುತ್ತೇವೆ.

ಶ್ರೀ ಬಿ ಎಸ್. ಯಡಿಯೂರಪ್ಪ.—ನೀವು ಆ ರೀತಿ ಕೊಂಡುಕೊಳ್ಳುವ ಸಂದರ್ಭದಲ್ಲಿ ಹಸಿರು ಮೇವಿಗೆ ಟನ್ ಒಂದಕ್ಕೆ ೨೦೦ ರೂಪಾಯಿ ಎಂದು ನಿಗದಿ ಮಾಡಿದ್ದೀರಿ. ಅದು ಏನೇನೂ ಸಾಲುವುದಿಲ್ಲ. ಹುಲ್ಲನ್ನು ಬೆಳೆಯುವಂಥ ರೈತನಿಗೆ ರಾಗಿ, ಜೋಳ, ನೆಲಗಡಲೆ ಬೆಳೆಯುವುದಕ್ಕಿಂತ ಹೆಚ್ಚು ಬೆಲೆ ಸಿಗುತ್ತದೆಂದರೆ ಅವನು ಹುಲ್ಲು ಬೆಳೆಯಲು ಮುಂದೆ ಬರಬಹುದು. ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶಗಳಿಂದ ಮೇವನ್ನು ತರುವ ಬಗ್ಗೆಯೂ ಯೋಚನೆ ಮಾಡಿ. ಆದರೆ ಈ ಒಂದು ವಿಚಿತ್ರ ಪರಿಸ್ಥಿತಿ ಇರುವ ಸಂದರ್ಭದಲ್ಲಿ ತಾವು ಸರ್ಕಾರದಿಂದ ಆದೇಶ ಹೊರಡಿಸಿ ಘಟಪ್ರಭ, ಹೇಮಾವತಿ, ಕೃಷ್ಣ ಮೇಲ್ದಂಡೆ ಯೋಜನೆ, ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿರುವ ಎಲ್ಲಾ ರೈತರು ಹುಲ್ಲನ್ನು ಬೆಳೆಯಬೇಕು. ಮೇವನ್ನು ಬೆಳೆಯಬೇಕು ಎಂದು.

೧೧–೩೦ ಎ. ಎಂ.

ಸುಗ್ರೀವಾಜ್ಞೆಯನ್ನು ಹೊರಡಿಸಿ ಮೇವು ಬೆಳೆದರೆ ಅನುಕೂಲವಾಗುತ್ತದೆ. ಪಂಜಾಬ್ ಹರಿಯಾಣ, ಹಿಮಾಚಲ ಪ್ರದೇಶ ಎಲ್ಲಿಂದಲಾದರೂ ಸಹ ಮೇವು ತಂದರೆ ಕೇಂದ್ರ ಸರ್ಕಾರ ಪುಕ್ಕಟೆಯಾಗಿ ಟ್ರಾನ್ಸ್‌ಪೋರ್ಟ್ ಮಾಡಬಹುದು. ಆದರೆ ನಾವು ಕೂಡ ಬೆಳೆಯುವುದಕ್ಕೆ ಸಾಧ್ಯವಿರುವುದರಿಂದ ಈ ಬಗ್ಗೆಯೂ ಗಮನ ಹರಿಸಬೇಕು. ಅಚ್ಚುಕಟ್ಟುದಾರರು ಮೇವು ಬೆಳೆಯಬೇಕೆಂದು ಸುಗ್ರೀವಾಜ್ಞೆ ಹೊರಡಿಸಿ ನಮ್ಮಲ್ಲೂ ಕೂಡ ಮೇವು ಬೆಳೆಯುವ ವ್ಯವಸ್ಥೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಜಾನುವಾರುಗಳ ಬಗ್ಗೆ ಹೇಳಬೇಕೆಂದರೆ, ಸಂತೆಯಲ್ಲಿ ಅದನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಶಿಕಾರಿಪುರ ತಾಲ್ಲೂಕು ಹುಲುಗಿಣಿಯಲ್ಲಿ ದೊಡ್ಡ ಸಂತೆ ನಡೆಯುತ್ತದೆ. ಅದೇ ರೀತಿ ಹುಬ್ಬಳ್ಳಿ, ಗುಲ್ಬರ್ಗ ಜಿಲ್ಲೆ ಶಹಪುರ ಮುಂತಾದ ಕಡೆ ಕಡಿಮೆ ಬೆಲೆಯಲ್ಲಿ ಜಾನುವಾರುಗಳನ್ನು ಮಾರಾಟ ಮಾಡುತ್ತಿದ್ದಾರೆ. ಸಿಲುಗೊಪ್ಪದಲ್ಲಿ ಸಂತೆ ದಿವಸ ನಾನು ತಹಸೀಲ್ದಾರರಿಗೆ ತೋರಿಸಿದೆ. ಸಾಯಂಕಾಲ ೫೦, ೧೦೦, ೨೦೦ ರೂಪಾಯಿಗೆ ಜಾನುವಾರುಗಳನ್ನು ಕೊಂಡುಕೊಂಡು ಕಸಾಯಿಖಾನೆಗಳಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇದೇರೀತಿ ಇಡೀ ರಾಜದಲ್ಲಿ ನಡೆಯುತ್ತಿದೆ, ಗೋಶಾಲೆಗಳನ್ನು ತೆರೆಯುತ್ತಿದ್ದೇವೆ, ಸಾವಿರ ಜಾನುವಾರುಗಳನ್ನು ಒಂದೊಂದು ಕಡೆ ಇಡುತ್ತಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ ಈಗ ೪೯ ಗೋಶಾಲೆಗಳು ಪ್ರಾರಂಭವಾಗಿವೆ ಎಂದು ಹೇಳುತ್ತಿದ್ದೀರಿ. ನಾನು ರೈತರಿಗೆ ಕೇಳಿದೆ, ಸರ್ಕಾರದವರು ಗೋಶಾಲೆಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ನೀವು ಏತಕ್ಕೆ ಮಾರುತ್ತೀರಿ ಎಂದು. ಅದಕ್ಕೆ ಅವ ಹೇಳುತ್ತಾನೆ, ನನ್ನ ಹತ್ತಿರ ಎರಡು ಜೊತೆ ಎತ್ತು ಇದೆ, ಒಂದು ಜೊತೆ ಎತ್ತು ಸಾಕುವುದಕ್ಕೆ ೯೦೦ ರೂಪಾಯಿ ಬೇಕಾಗುತ್ತದೆ, ಅದಕ್ಕೋಸ್ಕರ ಶಕ್ತಿಯಿಲ್ಲದೆ ಎರಡು ಸಾವಿರ ರೂಪಾಯಿ ಬೆಲೆ ಬಾಳುವುದನ್ನು ೫೦೦–೬೦೦ ರೂಪಾಯಿಗೆ ಮಾರುತ್ತಿದ್ದೇನೆ ಎಂದು ಹೇಳಿದ. ನಾನು ಮಾನ್ಯ ಬೊಮ್ಮಾಯಿಯವರಿಗೆ ಕೇಳುತ್ತಿದ್ದೇನೆ, ಸಂತೆಗಳಲ್ಲಿ ಜನಗಳಿಗೆ ದನಗಳನ್ನು ಮಾರದಂತೆ ತಿಳುವಳಿಕೆ ಕೊಡುವ ವ್ಯವಸ್ಥೆಯನ್ನು ಮಾಡಿದ್ದೀರಾ? ಜಾನುವಾರುಗಳನ್ನು ಉಳಿಸ

ಬೇಕೆಂಬ ಪ್ರಾಮಾಣಿಕ ಪ್ರಯತ್ನ ಇದ್ದರೆ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಸಂತೆಯಾಗುತ್ತದೆ ಅಲ್ಲೆಲ್ಲಾ ಕರಪತ್ರಗಳನ್ನು ಹೊರಡಿಸಿ ಜಾನುವಾರುಗಳನ್ನು ಮಾರಾಟ ಮಾಡದಂತೆ ತಿಳುವಳಿಕೆ ಕೊಡುವ ವ್ಯವಸ್ಥೆ ಮಾಡಬೇಕು. ಮೇವುಗಳನ್ನು ಕೊಡುವುದಕ್ಕೆ, ಜಾನುವಾರುಗಳನ್ನು ಸಾಕುವುದಕ್ಕೆ ಸಾಧ್ಯವಿಲ್ಲದೇ ಇರುವ ಕಡೆ ನಾವು ಸಾಕುತ್ತೇವೆ ಎಂದು ಸಂಘ ಸಂಸ್ಥೆಗಳು ಮುಂದೆ ಬರುತ್ತಿವೆ. ಮಠಾಧಿಪತಿಗಳು ಗೋ ರಕ್ಷಣಾ ಕೇಂದ್ರಗಳನ್ನು ತೆರೆಯಲು ಮುಂದೆ ಬರುತ್ತಿದ್ದಾರೆ. ಮುಖ್ಯಮಂತ್ರಿಗಳು ಈ ಬಗ್ಗೆ ಮನವಿ ಮಾಡಿಕೊಂಡಿದ್ದಾರೆ. ಸಂಘ ಸಂಸ್ಥೆಗಳು ಮುಂದೆ ಬರಬೇಕು. ಸಹಾಯ ಮಾಡಬೇಕು ಎಂದು ಹೇಳಿದ್ದಾರೆ. ಆದರೆ ಯಾವ ರೀತಿಯ ಸಹಾಯ ಮಾಡಬೇಕು ಎಂಬುದನ್ನು ಹೇಳಿದ್ದೀರಾ ? ಶಿಕಾರಿಪುರ ತಾಲ್ಲೂಕಿನಲ್ಲಿ ಮದಗ ಎಂಬ ಕೆರೆ ಇದೆ. ಅಲ್ಲಿ ಬರಗಾಲ ಬಂದರೂ ನೀರಿರುತ್ತದೆ ವರ್ಷ ಪೂರ್ತಿ ಅಲ್ಲಿ ೫ ಸಾವಿರ ಜಾನುವಾರುಗಳನ್ನು ಕಟ್ಟುವುದಕ್ಕೆ ಸ್ಥಳ ಉಂಟು. ನೀರಿನ ಅನುಕೂಲತೆ ಉಂಟು. ಅಂಥ ಕಡೆ ಗೋ ರಕ್ಷಣಾ ಕೇಂದ್ರಗಳನ್ನು ಏತಕ್ಕೆ ಮಾಡಬಾರದು ? ೫ ಸಾವಿರ ಜಾನುವಾರುಗಳನ್ನು ಅಲ್ಲಿ ಸಾಕಬಹುದು. ಸುತ್ತಲೂ ಫೆನ್ಸಿಂಗ್ ಹಾಕಿ ದನಕರುಗಳನ್ನು ಬಿಡಬಹುದು. ಇಂಥ ಅನುಕೂಲಗಳಿರುವ ಕಡೆಗಳಲ್ಲಿ ಗೋ ರಕ್ಷಣಾ ಕೇಂದ್ರಗಳನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ತಾವು ಒಂದು ವರದಿ ಕೊಟ್ಟಿದ್ದೀರಿ. ಅದರಲ್ಲ ೯೩ ಲಕ್ಷ ಜಾನುವಾರುಗಳು ಸಂಕಷ್ಟಕ್ಕೆ ಸಿಕ್ಕಿವೆ ಎಂದು ಹೇಳಿದ್ದೀರಿ. ಗೋ ರಕ್ಷಣಾ ಕೇಂದ್ರಗಳನ್ನು ೧೦೦ ಮಾಡಬೇಕೆಂದಿದ್ದರೂ ಪ್ರಾರಂಭಿಸಿರುವುದು ೫೯ ಮಾತ್ರ. ಅದರಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು ಎಂದರೆ ೧೨,೪೫೭. ಸರಾಸರಿ ಒಂದೊಂದು ಕಡೆ ೨೦೦ ಜಾನುವಾರುಗಳಿಗೆ ಅವಕಾಶ ಕಲ್ಪಿಸಿಕೊಡುತ್ತಿದ್ದೀರಿ. ಇವತ್ತು ಲಕ್ಷಾಂತರ ಜಾನುವಾರುಗಳು ತೊಂದರೆಯಲ್ಲಿ ಸಿಕ್ಕಿವೆ ಎಂದು ಹೇಳಿಕೆಯಲ್ಲಿ ಕೊಟ್ಟಮೇಲೆ ೫೯ ಗೋ ರಕ್ಷಣಾ ಕೇಂದ್ರಗಳನ್ನು ಪ್ರಾರಂಭಿಸಿರುವುದನ್ನು ಒಪ್ಪಿಕೊಂಡಮೇಲೆ ಒಂದು ಸಾವಿರ ಜಾನುವಾರುಗಳನ್ನು ಸಾಕುವುದಕ್ಕೆ ಅವಕಾಶವಿದ್ದರೂ ಜಾನುವಾರುಗಳು ಬರುತ್ತಿಲ್ಲ ಎಂದು ಗೊತ್ತಾದಮೇಲೆ ಅದಕ್ಕೆ ಕಾರಣ ಏನು ಎಂದು ಯೋಚನೆ ಮಾಡಿದ್ದೀರಾ ? ಗೋ ರಕ್ಷಣಾ ಕೇಂದ್ರಕ್ಕೆ ಏತಕ್ಕೆ ಜಾನುವಾರುಗಳು ಬರುತ್ತಿಲ್ಲ ? ಕಾರಣ ಏನೆಂದರೆ, ಅಲ್ಲಿ ಸರಿಯಾದ ವ್ಯವಸ್ಥೆ ಇಲ್ಲ ಎಂಬ ಹೆದರಿಕೆ ಜನರಲ್ಲಿದೆ. ಐದಾರು ತಿಂಗಳಾದಮೇಲೆ ಮತ್ತೆ ತಮ್ಮ ಜಾನುವಾರುಗಳು ವಾಪಸ್ ಸಿಗಬಹುದು ಎಂಬ ನಂಬಿಕೆ ಜನರಲ್ಲಿಲ್ಲ. ಲಕ್ಷಾಂತರ ಜಾನುವಾರುಗಳು ಸಂಕಷ್ಟಕ್ಕೆ ಸಿಕ್ಕಿದೆ ಎಂದು ಹೇಳುತ್ತಿದ್ದರೂ ಜಾನುವಾರುಗಳು ಬರುತ್ತಿಲ್ಲ ಎಂದಮೇಲೆ ಜಾನುವಾರುಗಳು ಸಂಕಷ್ಟಕ್ಕೆ ಸಿಕ್ಕಿರುವುದು ನಿಜವೇ ಅಥವಾ ಜಾನುವಾರುಗಳು ಸಂಕಷ್ಟಕ್ಕೆ ಸಿಕ್ಕಿವೆ ಎಂದು ಕೇಂದ್ರ ಸರ್ಕಾರಕ್ಕೆ ಸುಳ್ಳು ಹೇಳುತ್ತಿದ್ದೀರಾ ? ಯಾವುದು ನಿಜ ? ಸಾವಿರಾರು ಜಾನುವಾರುಗಳಿಗೆ ಅವಕಾಶವಿದ್ದರೂ ಜಾನುವಾರುಗಳು ಬಂದಿಲ್ಲ ಎಂದು ಹೇಳುವುದಾದರೆ ವ್ಯವಸ್ಥೆ ಹೇಗಿದೆ ಎಂಬ ಬಗ್ಗೆ ಗಮನ ಕೊಡಬೇಕು. ಮೇವಿನ ಬಗ್ಗೆ ಎಲ್ಲರೂ ಮಾತನಾಡುತ್ತಿದ್ದಾರೆ. ಮಾನ್ಯ ಬೊಮ್ಮಾಯಿಯವರು ತಪ್ಪು ತಿಳಿದುಕೊಳ್ಳದೇ ಹೋದರೆ ಒಂದು ಮಾತನ್ನು ಹೇಳುತ್ತೇನೆ. ಶಿವಮೊಗ್ಗ ಜಿಲ್ಲೆಯಿಂದ ಭತ್ತ, ಅಕ್ಕಿಯನ್ನು ಲಾರಿಯಲ್ಲಿ ಹುಬ್ಬಳ್ಳಿಗೆ ತೆಗೆದುಕೊಂಡು ಹೋಗಿದ್ದಾರೆ. ಪೋಲೀಸ್ ಅಧಿಕಾರಿಗಳು ಅಲ್ಲಿ ಹೋದ ಲಾರಿಗಳವರನ್ನು ಹೆದರಿಸಿ ಬೆದರಿಸಿ ಹುಲ್ಲನ್ನು ತುಂಬಿ ಬಿಜಾಪುರಕ್ಕೆ ಪುಕ್ಕಟೆಯಾಗಿ ತೆಗೆದುಕೊಂಡು ಹೋಗಿ ಎಂದು ಹೇಳಿದ್ದಾರೆ. ಕಾನೂನಿನಂತೆ ಒಂದು ಲಾರಿಗೆ ೨೦೦ ರೂಪಾಯಿ ಬಾಡಿಗೆ ಕೊಡಬೇಕು. ಪುಕ್ಸಟ್ಟೆ ಡೀಸಲ್ ಕೊಡಬೇಕು ಎಂದು ಹೇಳಿದ್ದೀರಿ. ಆದರೂ ಆ ರೀತಿ ಅಧಿಕಾರಿಗಳು ಮಾಡುತ್ತಿಲ್ಲ. ನನಗೆ ಮನಸ್ಸಿಗೆ ನೋವಾಗುತ್ತಿದೆ. ರಾಜ್ಯದ ಜನ ರಾಜ್ಯದ ಎಲ್ಲ ಕಡೆ ಮುಖ್ಯಮಂತ್ರಿಗಳಿಗೆ ಸಹಕಾರ ಕೊಡುತ್ತಿದ್ದಾರೆ. ಆದರೆ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಹುಬ್ಬಳ್ಳಿಗೆ ಹೋದಾಗ ಅಧಿಕಾರಿಗಳು ವಿನಂತಿ ಮಾಡಿಕೊಂಡು ರಾಣೆಬೆನ್ನೂರಿನಲ್ಲಿರುವ ಗೋಶಾಲೆಗೋ, ಹಾವೇರಿಯಲ್ಲಿರುವ ಗೋಶಾಲೆಗೋ ಹುಲ್ಲು ತೆಗೆದುಕೊಂಡು ಹೋಗಿ ಹಾಕಿ ಎಂದು ಹೇಳಬಹುದಾಗಿತ್ತು. ಅವರಿಗೆ ಕೊಡಬೇಕಾದ ೨೦೦ ರೂಪಾಯಿಗಳನ್ನೂ ತಿಂದು ಸಂಬಂಧಪಟ್ಟ ಅಧಿಕಾರಿಗಳು ಅವರನ್ನು ಬೆದರಿಸಿ ಆ ಪಾಪದ ಹಣವನ್ನು ಹೊಡೆಯುವ ಹೀನ ಮಟ್ಟಕ್ಕೆ ಬಂದಿದ್ದಾರೆ ಎಂದು ಹೇಳಿದರೆ ಅವರಿಗೆ ಯಾವ ಶಿಕ್ಷೆ ನೀಡಬೇಕು ? ಒಂದೂ ಪತ್ರಿಕೆಯವರು ಶಿಕಾರಿಪುರದಲ್ಲಿ ಪ್ರವಾಸ ಮಾಡಿದಾಗ ಒಬ್ಬರು ಒಂದು ಹೇಳಿಕೆ ಕೊಟ್ಟಿದ್ದಾರೆ. ಹೆಸರನ್ನು ಹಾಕಬೇಡಿ ಎಂದು ಕೇಳಿಕೊಂಡಿದ್ದಾರೆ. ನಾನು ಇವನ್ನು ನಿಮ್ಮ ಗಮನಕ್ಕೆ ತರಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ಹೊರತು ಬೇರೆ ಯಾವುದೇ ಕಾರಣಕ್ಕೆ ಹೇಳುತ್ತಿಲ್ಲ. ಪ್ರತ್ಯಕ್ಷವಾಗಿ ಕಂಡಂಥ ವಿಷಯವನ್ನು ತಮ್ಮ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು.—ತಮಗೆ ಕೊಟ್ಟಿದ್ದು ೨೦ ನಿಮಿಷ. ಆದರೆ ೨೫ ನಿಮಿಷ ಆಯಿತು. ದಯವಿಟ್ಟು ಬೇಗ ಮುಗಿಸಿ, ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಷ್ಟು ಬೇಗ ಆಗಲ್ಲ ಸ್ವಾಮಿ. ಕೂಲಿ ಬದಲು ಕಡಿಮೆ ಬೆಲೆಗೆ ಕಾಳು ಕೊಡುವ ಯೋಜನೆ ಇದೆ. ಒಂದು ಕೆ. ಜಿ.ಗೆ ಒಂದೂವರೆ ರೂಪಾಯಿಯಂತೆ ಕಾಳು ಕೊಡುತ್ತಿದ್ದೇವೆ ಎಂದು ಹೇಳಿದ್ದೀರಿ. ಶಾಸಕರಿಗೆ ಕೊಡುವ ವರದಿಯಲ್ಲಿ ತಪ್ಪು ಏತಕ್ಕೆ ಹೇಳುತ್ತೀರಿ ? ಒಂದೂವರೆ ರೂಪಾಯಿಗೆ ಒಂದು ಕೆ. ಜಿ.ಯಂತೆ ಕೊಡುತ್ತಿದ್ದೇವೆ ಎಂದು ತಾವು ಹೇಳಿದ್ದೀರಿ. ಅಕ್ಕಿಯೋ, ರಾಗಿಯೋ ಜೋಳವೋ ಏನೋ ಕೊಡಬೇಕೆಂದಿದೆ. ಆದರೆ ಆ ರೀತಿ ಕೊಡುತ್ತಿಲ್ಲ. ಮಾನ್ಯ ಜಿಲ್ಲಾ ಮಂತ್ರಿಗಳಾದ ಜೆ. ಹೆಚ್. ಪಟೇಲರು ಇಲ್ಲಿದ್ದಾರೆ, ಅವರನ್ನು ಕೇಳಿ. ಶಿವಮೊಗ್ಗ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿ ಕೆಲಸ ಮಾಡುವವರಿಗೆ ಈ ರೀತಿ ಕಡಿಮೆ ಬೆಲೆಯಲ್ಲಿ ಕೊಡುವ ವ್ಯವಸ್ಥೆ ಇರುವುದು ಶಾಸಕನಾಗಿ ನನಗೆ ಗೊತ್ತಿಲ್ಲ. ನಾನು ವಿನಂತಿ ಮಾಡಿಕೊಳ್ಳುತ್ತೇನೆ ರಾಜ್ಯದ ಯಾವ ಭಾಗದಲ್ಲಿ ಈ ರೀತಿ ಒಂದೂವರೆ ರೂಪಾಯಿಗೆ ಒಂದು ಕೆ.ಜಿ.ಯಂತೆ ದವಸಧಾನ್ಯ ಕೊಡುತ್ತಿದ್ದೀರಿ ಎಂಬುದನ್ನು ಹೇಳಿ.

ನ್ಯಾಯಬೆಲೆ ಅಂಗಡಿಗಳ ಬಗ್ಗೆ ಹೇಳಿದ್ದೀರಿ ನ್ಯಾಯಬೆಲೆ ಅಂಗಡಿಗಳನ್ನು ಜಾಸ್ತಿ ಮಾಡಿದ್ದೇವೆ ಎಂದು ಹೇಳಿದ್ದೀರಿ, ಶಿವಮೊಗ್ಗ ಜಿಲ್ಲೆಯಲ್ಲಿ ೧೯೮೩-೮೪ರಲ್ಲಿ ೭೭೩ ನ್ಯಾಯಬೆಲೆ ಅಂಗಡಿಗಳಿತ್ತು. ೧೯೮೪-೮೫ರಲ್ಲಿ ೭೮೪ ಆಯಿತು. ಆದರೆ ೧೯೮೫-೮೬ರಲ್ಲಿ ೬೦೭ಕ್ಕೆ ಇಳಿಯಿತು. ಎಲ್ಲಿ ಜಾಸ್ತಿ ಮಾಡಿದ್ದೀರಿ ? ನೀವು ಕೊಟ್ಟಿರುವ ಡಿಸ್ಟ್ರಿಕ್ಟ್ ಪರ್ಟಿಕುಲರ್ಸ್ ಆಫ್ ಡ್ರಾಟ್ ಸಿಚುಯೇಷನ್ ಎಂಬ ಪುಸ್ತಕದಲ್ಲಿ ಇದಿದೆ. ಇನ್ನೊಂದು ಕೈಪಿಡಿಯಲ್ಲಿ ಏನು ಕೊಟ್ಟಿದ್ದೀರೆಂದರೆ ೧೯೮೩-೮೪ರಲ್ಲಿ ೧೦,೬೦೪, ೧೯೮೪-೮೫ರಲ್ಲಿ ೧೧,೩೦೦ ಎಂದು ಹೇಳುತ್ತೀರಿ.

ಶ್ರೀ ಜಿ. ಬಸವಣ್ಣಪ್ಪ.—ನ್ಯಾಯಬೆಲೆ ಅಂಗಡಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಜಾಸ್ತಿ ಮಾಡಬೇಕೆಂಬ ಉದ್ದೇಶ ಇತ್ತು, ಆದರೆ ೫೦೦ ಕಾರ್ಡ್‌ಗಳಿದ್ದರೆ ವಯಬಲ್ ಆಗುತ್ತವೆ ಅದಕ್ಕಿಂತ ಕಡಿಮೆ ಇದ್ದರೆ ಲಾಸ್‌ನಾಗುತ್ತದೆ ಎಂಬ ಕಾರಣದಿಂದ ಕಡಿಮೆ ಮಾಡಬೇಕಾಯಿತು. ಹೀಗಾಗಿ ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಜಾಸ್ತಿಯಾಗಬೇಕಾಗಿತ್ತು. ಜನರು ೮-೧೦ ಕಿಲೋಮೀಟರ್ ದೂರ ಬರುವುದಕ್ಕಾಗದೆ ತೊಂದರೆಪಡುತ್ತಿದ್ದಾರೆ. ಹಸಿರು ಕಾರ್ಡ್ ಮೂಲಕ ನ್ಯಾಯಬೆಲೆ ಅಂಗಡಿಗಳಲ್ಲಿ ಅಕ್ಕಿ ಕೊಡುತ್ತಿದ್ದಾರೆ. ಆದರೆ ಪೂರ್ಣ ಪ್ರಮಾಣದಲ್ಲಿ ಅದು ಖರ್ಚಾಗುತ್ತಿಲ್ಲ. ಮೂರು ನಾಲ್ಕು ಕೇಂದ್ರಗಳಿದ್ದುದನ್ನು ತೆಗೆದು ಒಂದು ಕೇಂದ್ರ ಮಾಡಿರುವುದರಿಂದ ಹಾಗಾಗುತ್ತಿದೆ ಎಂದು...

ಶ್ರೀ ಜಿ. ಬಸವಣ್ಣಪ್ಪ.—೬ ಲಕ್ಷಕ್ಕೂ ಮೇಲ್ಪಟ್ಟು ಕುಟುಂಬಗಳನ್ನು ಹಸಿರು ಕಾರ್ಡ್ ವ್ಯಾಪ್ತಿಗೆ ತರುವ ಪ್ರಯತ್ನ ಇದೆ ಅದನ್ನು ಫೆಬ್ರವರಿ ತಿಂಗಳೊಳಗೆ ಮಾಡುತ್ತೇವೆ. ಐದು ಕಿಲೋಮೀಟರ್ ದೂರ ಇರತಕ್ಕ ಕಡೆ ಆದಷ್ಟು ಜಾಗ್ರತೆ ನ್ಯಾಯಬೆಲೆ ಅಂಗಡಿಗಳನ್ನು ಜಾಸ್ತಿ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮತ್ತೆ ಸ್ವಾಮಿ 'Transportation of drinking water' ಇದು ನನಗೆ ಅರ್ಥವಾಗಿಲ್ಲ. ಮಾನ್ಯ ಬೊಮ್ಮಾಯಿಯವರು ಈ ರೀತಿ ಅಂಕಿಅಂಶಗಳನ್ನು ಕೊಡಬಾರದಿತ್ತು. ತುಮಕೂರು ಜಿಲ್ಲೆಗೆ ಟ್ರಾನ್ಸ್‌ಪೋರ್ಟೇಷನ್ ಆಫ್ ವಾಟರ್‌ಗೆ ೪ ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಆದರೆ ಖರ್ಚು ಆಗಿರುವುದು ೮೪ ಸಾವಿರ ರೂಪಾಯಿ. ಬೆನಿಫಿಟ್ ಆಗಿರುವುದು ೪೫ ಹಳ್ಳಿಗಳು. ಧಾರವಾಡಕ್ಕೆ ಬಿಡುಗಡೆಯಾಗಿರುವುದು ೧೬ ಲಕ್ಷ ೬೦ ಸಾವಿರ ರೂಪಾಯಿಗಳು. ಖರ್ಚು ಆಗಿರುವುದು ೨೧ ಲಕ್ಷ ೩೧ ಸಾವಿರ ರೂಪಾಯಿಗಳು. ಇದು ಹೇಗೆ ? ನೀವು ಕೊಟ್ಟಿರುವ ಪುಸ್ತಕದಿಂದ ಇದು ಗೊತ್ತಾಗುತ್ತದೆ. ಇದು ಹೇಗೆ ? ಬಿಡುಗಡೆಯಾಗಿರುವುದು ೧೬ ಲಕ್ಷವಾದರೆ ಖರ್ಚಾಗಿರುವುದು ೨೧ ಲಕ್ಷ ರೂಪಾಯಿಗಳು. ತಾವೇ ಆ ಇಲಾಖೆಯ ಸಚಿವರಾಗಿರುವುದರಿಂದ ಜಾಸ್ತಿ ಬಿಡುಗಡೆಯಾಗಿರಬಹುದು. ಆದರೆ ಕವರ್ ಮಾಡಿರುವುದು ೩೩ ಗ್ರಾಮಗಳು ತುಮಕೂರು ಜಿಲ್ಲೆಯಲ್ಲಿ ೮೪ ಸಾವಿರ ಖರ್ಚು ಮಾಡಿ ಕವರ್ ಮಾಡಿರುವುದು ೪೮ ಗ್ರಾಮಗಳು ಧಾರವಾಡದಲ್ಲಿ ೨೧ ಲಕ್ಷ ೩೮ ಸಾವಿರ ರೂಪಾಯಿ ಖರ್ಚು ಮಾಡಿ ಕವರ್ ಮಾಡಿರುವುದು ೩೩ ಗ್ರಾಮಗಳು. ಇದರ ಅರ್ಥ ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಧಾರವಾಡದಲ್ಲಿ ಟ್ರಾನ್ಸ್‌ಪೋರ್ಟ್ ಮಾಡತಕ್ಕ ಹಳ್ಳಿಗಳು ಹೆಚ್ಚು ಇವೆ. ಅದನ್ನು ಟ್ರಾನ್ಸ್‌ಪೋರ್ಟ್ ಮಾಡಿದರೆ ಸರಿಹೋಗುವುದಿಲ್ಲ. ಆದ್ದರಿಂದ ಮಿನಿ ವಾಟರ್ ಸಪ್ಲೈ ಸ್ಕೀಂ ತೆಗೆದುಕೊಂಡಿದ್ದೇವೆ. ೪ ರಿಂದ ೫ ಕಿಲೋಮೀಟರ್‌ವರೆಗೆ ಪೈಪ್ ಹಾಕುವ ವ್ಯವಸ್ಥೆ ಮಾಡಿದ್ದೇವೆ. ಇದು ಕಾಯಂ ಪರಿಹಾರವಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದನ್ನು ಏಕೆ ಹೇಳಿದೆ. ಎಂದರೆ ಮಿನಿ ವಾಟರ್ ಸಪ್ಲೈ ಸ್ಕೀಂ ಟ್ರಾನ್ಸ್‌ಪೋರ್ಟೇಷನ್‌ನಲ್ಲಿ ಬರುವುದಿಲ್ಲ. ಈ ವಿಷಯ ರೆಕಾರ್ಡ್‌ಗೆ ಹೋಗುತ್ತದೆ. ಈ ಸೌಕರ್ಯದ ಮೂಲಕ ಕುಡಿಯುವ ನೀರಿನ ಅನುಕೂಲವಾಗುತ್ತದೆ ಎನ್ನುವುದಾದರೆ ಎಲ್ಲರಿಗೂ ಏಕೆ ಇದನ್ನು ವಿಸ್ತಾರ ಮಾಡುವುದಿಲ್ಲ ? ನೀವು ಬೆಂಗಳೂರಿಗೆ ಕೊಟ್ಟಿದ್ದರಲ್ಲಿ ಖರ್ಚು ಆಗಿರುವುದು ೧೦ ಸಾವಿರ ರೂಪಾಯಿಗಳು. ತುಮಕೂರಿನಲ್ಲಿ ೭೪ ಸಾವಿರ ರೂಪಾಯಿ ಖರ್ಚು ಆಗಿದೆ. ಶಿವಮೊಗ್ಗದಲ್ಲಿ ೪ ಸಾವಿರ ರೂಪಾಯಿ ಖರ್ಚು ಆಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೆಂಗಳೂರಿನಲ್ಲಿ ಹಳ್ಳಿಗಳು ಇಲ್ಲ.

SRI B. S. YADIYURAPPA.—What about Shimoga district ?

SRI S. R. BOMMAI.—Interior villages ಗೆ ಟ್ರಾನ್ಸ್‌ಪೋರ್ಟ್ ಮಾಡತಕ್ಕದು ಅವಶ್ಯಕ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಿನಿವಾಟರ್ ಸಪ್ಲೈ ಸ್ಕೀಂನ್ನು ನಮಗೂ ಮಾಡಬೇಕಾಗಿತ್ತು. ನಿಮ್ಮ ಸರ್ಕಾರ ಬಂದಮೇಲೆ ತಂದಿರುವ ಈ ಸ್ಕೀಂನಿಂದ ತುಂಬಾ ರೈತರಿಗೆ ಅನುಕೂಲವಾಗಿದೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ಒಂದು ಹೊಸ ಬೋರ್‌ವೆಲ್ ಹಾಕಬೇಕಾದರೆ ೨೫ ಸಾವಿರ ರೂಪಾಯಿ ಬೇಕಾಗುತ್ತದೆ. ಈಗ ಇರುವ ಬೋರ್‌ವೆಲ್‌ಗಳಿಗೆ ಸಣ್ಣ ಸಣ್ಣ ಟ್ಯಾಂಕ್‌ಗಳನ್ನು ಮಾಡಿದರೆ ೩೦–೪೦ ಸಾವಿರ ರೂಪಾಯಿಗಳಲ್ಲಿ ಮಿನಿ ವಾಟರ್ ಸಪ್ಲೈ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬರೀ ೪ ಪೈಪ್‌ಗಳನ್ನು ಹಾಕುವುದಿಲ್ಲ. ಅಲ್ಲಿನ ಭೂಮಿಯ ಗುಣಮಟ್ಟವನ್ನು ಹಾಗೂ ಅಲ್ಲಿ ಎಂತಹ ನೀರು ಸಿಗುತ್ತದೆ ಎಂಬುದನ್ನು ನೋಡಬೇಕು. ಅಲ್ಲಿ ಸೆಲೈನ್ ವಾಟರ್ ಇದೆಯೋ ಎಂದು ನೋಡಬೇಕು. ಇಂತಹ ಪ್ರಾಬ್ಲಮ್ ವಿಲೇಜಸ್ ಇರುತ್ತವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಮ್ಮ ಸರ್ಕಾರದಲ್ಲಿ ಮಿನಿ ವಾಟರ್ ಸಪ್ಲೈ ಸ್ಕೀಮ್ ತುಂಬಾ ಒಳ್ಳೆಯದಿದೆ. ಇದರ ಉಪಯೋಗ ಮಾಡಿಕೊಂಡು ಬರಗಾಲದಲ್ಲಿ ಎಲ್ಲಾ ಕಡೆ ಇದನ್ನು ವಿಸ್ತರಣೆ ಮಾಡಿ. ನಮ್ಮ ಜಿಲ್ಲೆಯಲ್ಲಿ ಇದನ್ನು ಮಾಡುತ್ತಾ ಇಲ್ಲ.

ಶ್ರೀ ಯು. ಭೂಪತಿ.—ಮಿನಿ ವಾಟರ್ ಸಪ್ಲೈ ಸ್ಕೀಂನ್ನು ಟ್ರಾನ್ಸ್‌ಪೋರ್ಟೇಷನ್‌ನಲ್ಲಿ ಸೇರಿಸುವುದು ಸರಿಯಲ್ಲ. ಒಂದು ಸೆಂಟ್ರಲ್ ಸೆಕ್ಟಾರ್ ಸ್ಕೀಂನಲ್ಲಿ ಹಾಗೂ ಇನ್ನೊಂದು ಸ್ಟೇಟ್ ಸೆಕ್ಟಾರ್‌ನಲ್ಲಿ ಬರುತ್ತದೆ. ಆ ಸ್ಕೀಂ ಯಾವ ಯಾವ ಹಳ್ಳಿಗಳಲ್ಲಿ ಆಗಬೇಕಾಗುತ್ತದೆ ಎಂಬುದು ತಿಳಿಯಬೇಕಾಗುತ್ತದೆ. ಅದು ಸಪರೇಟ್ ಹೆಡ್‌ನಲ್ಲಿ ಬರುತ್ತದೆ. ಆದ್ದರಿಂದ ಇದನ್ನು ಟ್ರಾನ್ಸ್‌ಪೋರ್ಟೇಷನ್‌ನಲ್ಲಿ ಸೇರಿಸುವುದು ಸರಿಯಲ್ಲ. ಟ್ರಾನ್ಸ್‌ಪೋರ್ಟೇಷನ್‌ನನ್ನು ಧಾರವಾಡದಲ್ಲಿ ಈ ಮಿನಿ ವಾಟರ್ ಸಪ್ಲೈ ಸ್ಕೀಂನಲ್ಲಿ ಸೇರಿಸಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಸದನಕ್ಕೆ ಕೊಟ್ಟ ಮಾಹಿತಿ ಸರಿ ಇರಬಹುದು. ಕೆಲವನ್ನು ಇಲ್ಲಿ ಕೊಡುವುದಕ್ಕೆ ಬರುವುದಿಲ್ಲ. ಈ ಬರಗಾಲ ಬಂದ ಸಂದರ್ಭದಲ್ಲಿ ಜನರಿಗೆ ಅನುಕೂಲವಾಗುವ ಹಾಗೆ ಕಾನೂನಿನ ಚೌಕಟ್ಟಿನಲ್ಲಿ ಇದನ್ನು ಮಾಡಬೇಕಾಗುತ್ತದೆ. ಇವತ್ತು ಯಾವುದೇ ಜಿಲ್ಲೆಯಲ್ಲಿ ತೆಗೆದುಕೊಳ್ಳಿ, ಅದು ಧಾರವಾಡವಾಗಲೀ ಬಿಜಾಪುರವಾಗಲೀ ಬೀದರ್ ಆಗಲಿ ತಾರತಮ್ಯ ಮಾಡುವುದು ಬೇಡ. ನೀವು ಕೊಟ್ಟ ಅಂಕಿಸಂಖ್ಯೆಯಲ್ಲಿ ಕೆಲವು ಜಿಲ್ಲೆಯಲ್ಲಿ ಕೊಟ್ಟ ಹಣಕ್ಕಿಂತಾ ಖರ್ಚು ಆಗಿರುವುದು ಬಹಳ ಕಡಿಮೆ ಇದೆ. ೪ ಲಕ್ಷ ರೂಪಾಯಿ ಕೊಟ್ಟ ಕಡೆ ಕೇವಲ ೪ ಸಾವಿರ ರೂಪಾಯಿ ಖರ್ಚು ಆಗಿದೆ. ಇವತ್ತು ಏನು ಎರಡೂವರೆ ಲಕ್ಷ ರೂಪಾಯಿ ಕೊಟ್ಟಿದ್ದೀರಿ ಅಲ್ಲಿ ಅಷ್ಟು ಹಣವನ್ನು ಏಕೆ ಖರ್ಚು ಮಾಡಲು ಆಗಲಿಲ್ಲ ? ಜಿಲ್ಲೆಯಿಂದ ಜಿಲ್ಲೆಗೆ ಈ ಬಗ್ಗೆ ತಾರತಮ್ಯ ಇದೆ. ಬೀದರ್‌ನಲ್ಲಿ ೫೦ ಲಕ್ಷ

ಖರ್ಚು ಮಾಡಿದರೆ, ೪ ತಾಲ್ಲೂಕು ಇರುವ ಕಡೆ ೪ ಲಕ್ಷ ರೂಪಾಯಿ ಖರ್ಚು ಮಾಡಬೇಕು. ಇನ್ನು ಗ್ರಾಮ ನೈರ್ಮಲ್ಯದ ಬಗ್ಗೆ ಹೇಳಬೇಕೆಂದರೆ, ಹಿಂದಿನ ಸರ್ಕಾರ ಇದ್ದ ಸಂದರ್ಭದಲ್ಲಿ ಅಧಿಕಾರಿಗಳು ಕಾಲುವೆಯ ಮಣ್ಣನ್ನು ತೆಗೆಸಿ ಅದನ್ನು ಮೇಲಕ್ಕೆ ಹಾಕಿಸಿ ದುಡ್ಡನ್ನು ಹೊಡೆಯುತ್ತಿದ್ದರು. ಗ್ರಾಮ ನೈರ್ಮಲ್ಯ ಎಂದರೆ ಇಷ್ಟೇ ಕೆಲಸ ಎಂದು ಹೇಳಿ ವಿಶೇಷ ಜಿಲ್ಲಾಧಿಕಾರಿಗಳವರು ನಾಲ್ಕೈದು ವರ್ಷಗಳಿಂದ ತಿಳಿದುಕೊಂಡಿದ್ದರು. ಆದರೆ ಗ್ರಾಮ ನೈರ್ಮಲ್ಯ ಎಂದರೆ ಇಷ್ಟೇ ಕೆಲಸ ಅಲ್ಲ. ಅಲ್ಲಿನ ಜನ ಓಡಾಡುವುದಕ್ಕೆ ಒಳ್ಳೆಯ ರಸ್ತೆಗಳು ಆಗಬೇಕೆಂದು ನಾನು ಅಧಿಕಾರಿಗಳಿಗೆ ಹೇಳಿದ್ದೇನೆ. ಹೊಸ ಕೆರೆಗಳನ್ನು ನಿರ್ಮಾಣ ಮಾಡುವುದು ಇದೆ. ಹೊಸ ಕೆರೆಗಳು ನಮ್ಮ ಜಿಲ್ಲೆಯಲ್ಲಿ ಆಗಿಲ್ಲ. ಈ ಬರಗಾಲಕ್ಕೆ ತುತ್ತಾದ ಪ್ರದೇಶದಲ್ಲಿ ೪ ಕೆಲಸಗಳಲ್ಲಿ ೨ ಕೆಲಸಗಳನ್ನು ಕಂಪಲ್ಸರಿಯಾಗಿ ತೆಗೆದುಕೊಂಡು ಮಾಡಬೇಕು. ಬಡ್ಜೆಟ್‌ನಲ್ಲಿ ಅಂಗೀಕರವಾಗಿ ಕಳೆದ ಹತ್ತಾರು ವರ್ಷಗಳಿಂದ ಹಾಗೇ ಉಳಿದಿರುವ ಕೆರೆ ಕೆಲಸವನ್ನು ಒಂದು ತಾಲ್ಲೂಕಿನಲ್ಲಿ ಒಂದೆರಡನ್ನಾದರೂ ತೆಗೆದುಕೊಂಡು ಮಾಡಬೇಕಾಗಿದೆ ಹಾಗೂ ಲಿಫ್ಟ್ ಇರಿಗೇಷನ್ ಕೆಲಸ ಆಗಬೇಕಾಗಿದೆ, ಕಾಲುವೆ ಕೆಲಸಗಳು ಆಗ ಬೇಕಾಗಿದೆ. ಇವನ್ನೆಲ್ಲಾ ಬರಗಾಲ ಕಾಮಗಾರಿ ಕೆಲಸಗಳ ಕೆಳಗೆ ತೆಗೆದುಕೊಳ್ಳಬೇಕು. ಈ ಭೀಕರ ಬರಗಾಲ ಎದುರಿಸಲು ಹಣದ ಸಹಾಯವಾಗಬೇಕಾಗಿದೆಯೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಇಲ್ಲಿ ನನಗೆ ಒಂದು ಅನುಮಾನ ಇದೆ. ಒಂದು ಕಡೆ ಭೀಕರ ಬರಗಾಲ ಇದೆ. ಮತ್ತೊಂದು ಕಡೆ ಹಣದ ಸಹಾಯ ಮಾಡುವುದಕ್ಕೆ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಆದರೆ ಈ ಸಂದರ್ಭದಲ್ಲಿ ಅನುಮಾನ ಏನೆಂದರೆ, ಈ ರೀತಿಯ ಹಣದ ಸಂಗ್ರಹಣೆಯ ಸಮಯದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸರಿಯಾದ ರಸೀತಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿ. ಭ್ರಷ್ಟಾಚಾರ ತಾಂಡವವಾಡುತ್ತಿರುವ ಈ ಸಮಯದಲ್ಲಿ ಇಂತಹ ಅನುಮಾನಗಳಿಗೆ ಆಸ್ಪದ ಕೊಡಬಾರದು. ಇಂತಹ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ಲೆಕ್ಕ ಬೇಕಾಗಿದೆ, ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ, ಒಂದು ಕಡೆ ಒಬ್ಬ ಕುರುಡು ಭಿಕ್ಷುಕ ಕುಳಿತು ಹಣ ಕೇಳುತ್ತಿದ್ದ. ಹಾಗೂ ಅವನ ಪಕ್ಕ ಇನ್ನೊಬ್ಬ ಕುಳಿತು ಅವನಿಗೆ ಸಹಾಯ ಮಾಡುತ್ತಿದ್ದ. ಅದು ಹೇಗೆ ಎಂದರೆ ಯಾರಾದರೂ ೧೦ ಪೈಸೆ ಭಿಕ್ಷೆ ಹಾಕಿದರೆ ಅದರಲ್ಲಿ ೫ ಪೈಸೆ ತಾನು ಜೇಬಿಗೆ ಬಿಟ್ಟು ಮಿಕ್ಕಿದ್ದನ್ನು ಈತನಿಗೆ ಕೊಡುತ್ತಿದ್ದ. ಆದ್ದರಿಂದ ಇವತ್ತು ಸರಿಯಾದ ಒಂದು ಸದ್ಭಾವನೆಯಿಂದ ಈ ಹಣವನ್ನು ಕೊಡುತ್ತಾರೆ. ಇದಕ್ಕೆ ರಸೀದಿಯನ್ನು ಕೊಡದೇ ಹಣವನ್ನು ಸಂಗ್ರಹ ಮಾಡಬಾರದು. ಮಾನ್ಯ ಜೆ. ಎಚ್. ಪಟೇಲ್ ಅವರು ಶಿವಮೊಗ್ಗದಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಇವತ್ತು ಬಕೀಟನ್ನು ಹಿಡಿದುಕೊಂಡು ಹೊರಟ ಜನರು ಬಕೀಟಿನಲ್ಲಿ ಎಷ್ಟು ಹಣ ಬೀಳುತ್ತದೆ ಆ ಬಗ್ಗೆ ರಶೀದಿ ಕೊಡಬೇಕು. ಮಾನ್ಯ ಜೆ. ಎಚ್. ಪಟೇಲರ ಉಸ್ತುವಾರಿ ಇದ್ದರೂ ಹಣದ ವಿಷಯ ಬಂದಾಗ ಹೆಚ್ಚು ಕಡಿಮೆ ಆಗಬಹುದು. ಆದರಿಂದ ಇದರ ಬಗ್ಗೆ ಇನ್ನಾದರೂ ಸರಿಯಾದ ಗಮನ ಕೊಡಿ. ಈ ಬಗ್ಗೆ ಎಲ್ಲಾ ಸಂಘಸಂಸ್ಥೆಗಳ ಸಹಕಾರವನ್ನು ಕೇಳಲಾಗಿದೆ. ಇವತ್ತು ಲಯನ್ಸ್ ಕ್ಲಬ್‌ನವರು ವಿಶ್ವ ಹಿಂದೂ ಪರಿಷತ್‌ನವರು ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು ಗೋರಕ್ಷಣಾ ಕೇಂದ್ರಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಶಿವಬಾಲಯೋಗಿ ಸಂಘದವರೂ ಈ ಬಗ್ಗೆ ಮುಂದೆ ಬಂದಿದ್ದಾರೆ. ಇವತ್ತು ನಾವು ಎಲ್ಲಾ ರಾಜಕೀಯ ಪಕ್ಷಗಳ ಸಂಘಸಂಸ್ಥೆಗಳನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಂಡು ಒಂದು ವ್ಯವಸ್ಥೆಯನ್ನು ಮಾಡಬೇಕು. ನನ್ನ ಬಗ್ಗೆ ಮಾನ್ಯ ಬಸವಣ್ಯಪ್ಪನವರು ಒಂದು ಮಾತನ್ನು ಹೇಳಿದ್ದಾರೆ. ೨೨೪ ಕ್ಷೇತ್ರಗಳು ಇರುವ ಕರ್ನಾಟಕ ರಾಜ್ಯದಲ್ಲಿ ಶಿಕಾರಿಪುರ ತಾಲ್ಲೂಕನ್ನೇ ತಾವು ಆರಿಸಿಕೊಂಡ ಉದ್ದೇಶವೇನು ? ತಾವು ಏನು ಹೇಳಿದ್ದೀರಿ ! ಬರಗಾಲ ಕಾಮಗಾರಿ ಕೆಲಸ ಕಾರ್ಯಗಳು ಎಲ್ಲಾ ಕಡೆ ನಡೆಯುವಂತೆ ಅಲ್ಲೂ ಕೂಡಾ ನಡೆಯುತ್ತಿದೆ. ಈ ತಾಲ್ಲೂಕಿನಲ್ಲಿ ಮಾನ್ಯ ಯಡಿಯೂರಪ್ಪನವರ ಕೈವಾಡ ಇದೆ ಎಂದು ಹೇಳಿದ್ದಾರೆ.

ಶ್ರೀ ಬಿ. ಬಸವಣ್ಯಪ್ಪ.—ಅಧ್ಯಕ್ಷರೆ, ನಾನು ಈ ಬಗ್ಗೆ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಆ ವಿಷಯಕ್ಕೂ ನಾನು ಬರುತ್ತೇನೆ. ಮೊದಲು ನಿಮ್ಮ ಪತ್ರವನ್ನು ನಾನು ಓದುತ್ತೇನೆ.

'I am shocked to see your Press statement appearing in the HINDU dated 22-10-1985 and 'Samyukta Karnataka' of 28th October 1985 in which you have stated that I have

the intension of criticising you unnecessarily and bringing bad name to you. It is far from truth. On the other hand, inspite of your lapses here and there, I have been always kind to you and friendly.

I have not mentioned your name during my press conference at Shimoga District, in which I clearly told that some of the Officials have indulged in corrupt practices..."

ಈ ವಿಷಯ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಮುಖಪುಟದಲ್ಲಿ ಬಂದಾಗ ಈ ಬಗ್ಗೆ ನನಗೆ ಪತ್ರ ಬರೆಯುವುದರ ಬದಲು ಪತ್ರಿಕಾ ವರದಿ ತಪ್ಪು ಎಂದು ಹೇಳಿದ್ದರೆ ಈ ಸಂಘರ್ಷ ಬರುತ್ತಾ ಇರಲಿಲ್ಲ. ಅಲ್ಲಿ ಭ್ರಷ್ಟಾಚಾರ ನಡೆದಿದ್ದರೆ ಅದನ್ನು ನೋಡಬೇಕು. ತಾವು ಚುನಾವಣೆಯಲ್ಲಿ ಗೆದ್ದಂಥ ಕ್ಷೇತ್ರ ಅದು. ಅದು ತಮ್ಮ ತವರೂರು, ಅಲ್ಲಿಂದ ಗೆದ್ದು ಬಂದು ತಾವು ಮಂತ್ರಿಗಳಾಗಿದ್ದೀರಿ, ಎಲ್ಲಿಗೆ ಪ್ರವಾಸ ಹೋದರು ತಾವು ಶಿಕಾರಿಪುರಕ್ಕೆ ಬಂದು ಹೋಗುತ್ತಿದ್ದೀರಿ. ಯಾವುದೇ ಸಂದರ್ಭದಲ್ಲಿ ಇಂಥ ಭ್ರಷ್ಟಾಚಾರ ಆಗಿದೆ ಎಂದು ಹೇಳಿದಾಗ ನೋಡಲೇಬೇಕಾಗುತ್ತದೆ. ನನ್ನ ತಾಲ್ಲೂಕಿನಲ್ಲಿರಕ್ಕ ಅಧಿಕಾರಿಗಳು ಪ್ರಾಮಾಣಿಕರೇನು? ಅವರು ಆಕಾಶದಿಂದ ಇಳಿದು ಬಂದಿದ್ದಾರೇನು? ಅವರು ಇದೇ ಒಂದು ವಾತಾವರಣದಲ್ಲಿ ಬೆಳೆದು ಬಂದಿರುವಂಥ ಅಧಿಕಾರಿಗಳಾಗಿದ್ದಾರೆ. ಆ ರೀತಿ ಎಲ್ಲಾದರೂ ಭ್ರಷ್ಟಾಚಾರ ಕಂಡು ಬಂದಾಗ ಇಂಥ ಅಧಿಕಾರಿ ಭ್ರಷ್ಟಾಚಾರ ಮಾಡುತ್ತಿದ್ದಾನೆ ಇವನನ್ನು ಸಸ್ಪೆಂಡ್ ಮಾಡುತ್ತೇನೆ, ಇವನನ್ನು ಡಿಸ್‌ಮಿಸ್ ಮಾಡುತ್ತೇನೆಂದು ಹೇಳಿದ್ದರೆ ನಾನು ನಿಮಗೆ ಸಹಕಾರ ಕೊಡುವುದಿಲ್ಲವೆಂದು ಏನಾದರೂ ಹೇಳಿದ್ದೇನೆ? ನಾನು ಇವತ್ತು ಈ ಸದನದಲ್ಲಿ ಎದೆ ತಟ್ಟಿಕೊಂಡು ಹೇಳುತ್ತಿದ್ದೇನೆ. ಮಾನ್ಯ ಸಚಿವರಾದ ಜೆ. ಹೆಚ್. ಪಟೇಲ್‌ರವರಿಗೂ ಹೇಳಿದ್ದೇನೆ. ಮಾನ್ಯ ಬೊಮ್ಮಾಯಿಯವರಿಗೂ ವಿನಂತಿ ಮಾಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಯವರಿಗೂ ವಿನಂತಿ ಮಾಡಿದ್ದೇನೆ. ಈ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿರತಕ್ಕ ಅಧಿಕಾರಿಗಳಿಗೆ, ಯಡಿಯೂರಪ್ಪನಿಗೆ ಕೆಟ್ಟ ಹೆಸರು ತರಬೇಕೆಂಬ ಒಂದು ಕೆಟ್ಟ ಕುತಂತ್ರ ಆಕಸ್ಮಾತ್ತಾಗಿ ಏನಾದರೂ ಇದ್ದರೆ ಅದು ಬಯಲಾಗಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ನನ್ನನ್ನು ಬೇಡ, ಈ ಕಡೆ ಇರತಕ್ಕ ವಿರೋಧ ಪಕ್ಷದ ನಾಯಕರು ಮತ್ತು ನಿಮ್ಮ ಪಕ್ಷದ ಯಾರನ್ನಾದರೂ ಇಬ್ಬರು ಶಾಸಕರನ್ನು ಕಳುಹಿಸಿ ಕೊಡಿ. ಇಡೀ ರಾಜ್ಯದ ವಿಚಾರ ಬೇಡ; ಶಿವಮೊಗ್ಗಾ ಜಿಲ್ಲೆಯಲ್ಲಿ ಚನ್ನಗಿರಿ, ಶಿಕಾರಿಪುರ, ಹೊನ್ನಾಳಿ ಮತ್ತು ಸೊರಬ ಈ ೪ ತಾಲ್ಲೂಕುಗಳಲ್ಲಿ ಬರಗಾಲ ಕಾಮಗಾರಿ ನಡೆಯುತ್ತಿದೆ. ಈ ೪ ತಾಲ್ಲೂಕುಗಳಿಗೆ ಹೋಗಿ ತಾವು ವೀಕ್ಷಣೆ ಮಾಡಿಕೊಂಡು ಬನ್ನಿ, ಉತ್ತಮವಾದಂಥ ಕೆಲಸ ಶಿಕಾರಿಪುರ ತಾಲ್ಲೂಕಿನಲ್ಲಿ ಆಗಿದೆಯೋ, ಇಲ್ಲವೇ, ಎಂಬುದನ್ನು ನೋಡಿ ತಾವೇ ಒಂದು ವರದಿಯನ್ನು ಕೊಡಿ. ಸ್ವಾಮಿ, ನಾನು ಎರಡು ಪ್ರಶ್ನೆಗಳನ್ನು ಕಳುಹಿಸಿಕೊಟ್ಟಿದ್ದೆ. ಮಾನ್ಯ ಮುಖ್ಯಮಂತ್ರಿಯವರು ನನ್ನ ಕ್ಷೇತ್ರದ ಕೆಲಸದ ಬಗ್ಗೆ ತನಿಖೆ ಮಾಡುವುದಕ್ಕೋಸ್ಕರ ಡಿವಿಜನಲ್ ಕಮೀಷನರ್‌ರವರನ್ನು ಕಳುಹಿಸಿಕೊಟ್ಟಿದ್ದರು. ಆ ಡಿವಿಜನಲ್ ಕಮೀಷನರ್‌ರವರು ೩ ದಿವಸ ಅಲ್ಲಿಗೆ ಬಂದಿದ್ದರು. ಅವರು ಬೇರೆ ರಾಜ್ಯದಿಂದ ಬಂದವರು. ಅವರು ಬಹಳ ಯೋಗ್ಯರು. ಅವರು ಪ್ರಾಮಾಣಿಕ ಅಧಿಕಾರಿ. ೩ ದಿವಸ ಕಾಲ ತನಿಖೆ ಮಾಡಿ ಅವರು ಒಂದು ವರದಿಯನ್ನು ಕೊಟ್ಟಿದ್ದಾರಂತೆ. ಅದೇನೆಂದರೆ ಇಲ್ಲಿ ಉತ್ತಮವಾದ ಕೆಲಸವಾಗಿದೆ ಎಂದು. ಇದಕ್ಕೆ ಸಚಿವರು ಉತ್ತರವನ್ನು ಕೊಡಲಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನನ್ನ ತಾಲ್ಲೂಕಿನಲ್ಲಿ ನೂರಕ್ಕೆ ೨೦ ರೂಪಾಯಿ ಹೊಡೆಯುತ್ತಿದ್ದರೆ ಪಕ್ಕದ ತಾಲ್ಲೂಕಿನಲ್ಲಿ ನೂರಕ್ಕೆ ೪೦ ರೂಪಾಯಿ ಹೊಡೆಯುತ್ತಿರಬಹುದು. ಈ ೨೦ ರೂಪಾಯಿಗಳನ್ನು ಹೊಡೆಯದೇ ಇರುವಂಥ ಅಧಿಕಾರಿ ಯಾರಾದರೂ ಇದ್ದರೆ ಅವರನ್ನು ತಂದು ಅಲ್ಲಿ ಇಡಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸರ್ಕಾರ ತಪ್ಪು ಮಾಡಿದರೆ ಅದಕ್ಕೆ ಯಡಿಯೂರಪ್ಪನನ್ನು ಏತಕ್ಕೆ ದೂರುತ್ತೀರಿ? ಅದಕ್ಕೆ ನಾನು ಜವಾಬ್ದಾರನೆ? ನಾನು ಬಹಳ ಸುಲಭವಾಗಿ ಹೇಳಬಹುದಿತ್ತು, ಶಿಕಾರಿಪುರ ತಾಲ್ಲೂಕಿನಲ್ಲಿ ಉದ್ದೇಶಪೂರಿತವಾಗಿ ಭ್ರಷ್ಟ ಅಧಿಕಾರಿಗಳನ್ನು ತಂದಿಟ್ಟು ಭ್ರಷ್ಟಾಚಾರ ನಡೆಸುತ್ತಿದ್ದಾರೆ, ನನಗೆ ಕೆಟ್ಟ ಹೆಸರನ್ನು ತರಬೇಕೆಂದು ಮಾಡುತ್ತಿದ್ದಾರೆ, ಆದ್ದರಿಂದ ಮಾನ್ಯ ಬಸವಣ್ಣೆಪ್ಪನವರು ರಾಜೀನಾಮೆಯನ್ನು ಕೊಡಬೇಕೆಂದು ನಾನು ಹೇಳಬಹುದಿತ್ತು. ಬರಗಾಲ ಕಾಮಗಾರಿಯ ಬಗ್ಗೆ ಅಲ್ಲಿ ಕೆಲಸ ನಡೆಯುತ್ತಿದೆ, ಆದ್ದರಿಂದ ಮಾನ್ಯ ಬೊಮ್ಮಾಯಿಯವರು ರಾಜೀನಾಮೆ ಕೊಡಬೇಕು ಎಂದು ಹೇಳ

ಬಹುದಿತ್ತು. ಇಲ್ಲಿನ ಸರ್ಕಾರವೇ ಇಲ್ಲವೆಂದು ಹೇಳುವುದಾದರೆ, ಅದನ್ನು ತಾವು ಒಪ್ಪಿಕೊಳ್ಳುವುದಾದರೆ ಬಹುಶಃ ಜವಾಬ್ದಾರಿ ಇರತಕ್ಕ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಾಗ ನಾನು ಏನು ಹೇಳಬೇಕೋ ಗೊತ್ತಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ.........

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಉಪಾಧ್ಯಕ್ಷರೆ, ನಾನು ಇದನ್ನು ಕ್ಲಾರಿಫೈ ಮಾಡಬೇಕಾಗುತ್ತದೆ. ನಾನು ಶಿಕಾರಿಪುರ ತಾಲ್ಲೂಕಿಗೆ ಆಗಾಗ್ಗೆ ಹೋಗುವುದು ಸಹಜ. ಅದು ನಾನು ಹುಟ್ಟಿ ಬೆಳೆದಂಥ ತಾಲ್ಲೂಕು. ಉಡುಗಣಿ ಹೋಬಳಿ ಮಿಂಚುಕೊಪ್ಪ ನನ್ನ ಗ್ರಾಮ, ತಾಳಗುಂದ ಹೋಬಳಿಯಲ್ಲಿ ತಾಳ ಗುಂದ ಗ್ರಾಮವೇ ನನ್ನ ಕುಟುಂಬದವರ ಗ್ರಾಮ. ನಾನು ಯಾವ ಕಡೆ ಪ್ರವಾಸ ಹೋದರೂ ಅಲ್ಲಿಗೆ ಒಂದೆರಡು ದಿವಸಗಳ ಮಟ್ಟಿಗೆ ಹೋಗಿ ಬರುತ್ತೇನೆ. ಇದು ಸಹಜ. ಅಲ್ಲಿಯ ಜನರು ಈ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ, ಬಡವರ ಕಲ್ಯಾಣ ಕಾರ್ಯಕ್ರಮಗಳಲ್ಲಿ ಅನೇಕ ಅಧಿಕಾರಿಗಳ ಕೈವಾಡ ಇದೆ. ಹಸ್ತ ಕ್ಷೇಪ ಇದೆ, ಅನೇಕ ಕೆಲಸ ಕಾರ್ಯಗಳು ಆಗದೆ ಅಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ನನ್ನ ಹತ್ತಿರ ಬಂದು ದೂರು ಹೇಳುತ್ತಿದ್ದರು. ಅದನ್ನು ತಿಳಿದ ನಾನು ೧೯೮೫ನೇ ಮೇ ತಿಂಗಳಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳ ಒಂದು ಸಭೆಯನ್ನು ಕರೆದು ಈಗ ಇಂಥ ದೂರುಗಳು ನನಗೆ ಬಹಳಷ್ಟು ಬರುತ್ತಿವೆ, ಇಂಥ ಸಂದರ್ಭದಲ್ಲಿ ನೀವು ಸರಿಯಾಗಿ ನೋಡಿಕೊಳ್ಳಬೇಕು, ಮಂತ್ರಿಗಳೇ ಭ್ರಷ್ಟಾಚಾರ ಮಾಡಿದರೂ ಕೂಡ ಅವರನ್ನು ಲೋಕಾಯುಕ್ತಕ್ಕೆ ಒಳಗು ಮಾಡಿ ಅವರಿಗೂ ಶಿಕ್ಷೆ ಕೊಡುವುದಕ್ಕೆ ಅವಕಾಶ ಇದೆ. ಅಂಥ ಒಂದು ಮಸೂದೆಯನ್ನು ನಾವು ತಂದಿದ್ದೇವೆ ಪರಿಸ್ಥಿತಿ ಹೀಗಿರುವುದರಿಂದ ಅಧಿಕಾರಿಗಳು ಏನಾದರೂ ತಪ್ಪು ಮಾಡಿದರೆ, ಭ್ರಷ್ಟಾಚಾರ ಮಾಡಿದರೆ ಅಂಥವರ ವಿರುದ್ಧ ನಾವು ಉಗ್ರಕ್ರಮವನ್ನು ಕೈಗೊಳ್ಳ ಬೇಕಾಗುತ್ತದೆ ಮತ್ತು ಅವರ ಬಗ್ಗೆ ಯಾವುದೇ ದಾಕ್ಷಿಣ್ಯವನ್ನೂ ತೋರಿಸುವುದಿಲ್ಲವೆಂದು ನಾನು ಅವರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ನಾನು ಅಷ್ಟು ಹೇಳಿ ಬಂದಾಗ್ಯೂ ಕೂಡ ಮತ್ತೆ ಇನ್ನೊಂದು ಸಾರಿ ನಾನು ಅಲ್ಲಿಗೆ ಹೋದಾಗ ಆ ಒಂದು ಗುರುತರವಾದ ಅಪಾದನೆ ಅಧಿಕಾರಿಗಳ ಮೇಲೆ ಬಂದೇ ಬಂತು. ಆಗ ನನಗೆ ಬೇರೆ ದಾರಿ ಇಲ್ಲದೆ ಅವರಿಗೆ ಹೇಳಬೇಕಾಯಿತು ಮತ್ತು ಗಲಾಟೆ ಕೂಡ ಮಾಡ ಬೇಕಾಯಿತು. ಕೆಲವು ಅಧಿಕಾರಿಗಳು ಭ್ರಷ್ಟರು ಎಂದು ತಿಳಿದು ಬಂದಾಗ ಅವರ ಮೇಲೆ ನಾನು ಕ್ರಮ ತೆಗೆದುಕೊಳ್ಳಲೇಬೇಕಾಗುತ್ತದೆ. ಕೆಲವು ವಿಚಾರಗಳ ಬಗ್ಗೆ ನಾವು ಬೆಳಕನ್ನು ಚೆಲ್ಲಲೇ ಬೇಕಾಗುತ್ತದೆ. ಏಕೆಂದರೆ ರಾಜಕೀಯ ಮೌಲ್ಯವನ್ನು, ಆಡಳಿತದ ಮೌಲ್ಯವನ್ನು ಕಾಪಾಡಲು ನಾವು ಅದನ್ನು ಮಾಡಲೇ ಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಮಾಡಿದ್ದೇನೆ ಯಾವ ಸಂದರ್ಭದಲ್ಲೂ ಕೂಡ ನಾನು ಶಾಸಕರಾದ ಮಾನ್ಯ ಯಡಿಯೂರಪ್ಪನವರ ಹೆಸರನ್ನು ಎತ್ತಿಲ್ಲ. ಅವರ ವಿಚಾರವನ್ನು ಮಾತನಾಡಿಲ್ಲ ಕೆಲವು ಭ್ರಷ್ಟ ಅಧಿಕಾರಿಗಳ ಮೇಲೆ ಈಗ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ನಾನು ಹೇಳಿದಾಗ ಮಾನ್ಯ ಯಡಿಯೂರಪ್ಪನವರು ನನ್ನ ಹೇಳಿಕೆಗೆ ಬೆಂಬಲವನ್ನು ಕೊಡಬೇಕಾಗಿತ್ತು ಅದನ್ನು ಬಿಟ್ಟು ಅಧಿಕಾರಿಗಳಿಗೆ ಬೆಂಬಲಿಗರಾಗಿ ಇದು ಸತ್ಯಕ್ಕೆ ದೂರವಾದ ಮಾತು, ಅದು ಹಾಗೆ, ಇದು ಹೀಗೆ ಎಂದು ಇವರು ಅವರ ಪರವಾಗಿ ಮಾತನಾಡಿದ್ದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಅಧಿಕಾರಿಗಳು ಸ್ವಲ್ಪ ಹೆದರಿಕೆ ಇಟ್ಟುಕೊಂಡು ಚೆನ್ನಾಗಿ ಕೆಲಸ ಮಾಡಲಿ ಎನ್ನುವ ದೃಷ್ಟಿಯಿಂದ ನಾನು ಆ ರೀತಿ ಮಾಡಿದ್ದೇನೆ, ಅದು ಸಿ.ಓ.ಡಿ. ಯಲ್ಲಿ ಎನ್‌ಕ್ವೈರಿ ಆಗುತ್ತಿದೆ. ಅದರ ಬಗ್ಗೆ ಸತ್ಯಾಸತ್ಯತೆಯ ಪರೀಕ್ಷೆ ಆಗಲಿ, ಯಾರು ತಪ್ಪಿತಸ್ಥರಿರುತ್ತಾರೆ ಅವರ ವಿರುದ್ಧ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಯಾವುದೇ ಸಂದರ್ಭದಲ್ಲೂ ನಾನು ಮಾನ್ಯ ಯಡಿಯೂರಪ್ಪನವರ ವಿಷಯವನ್ನು ಎತ್ತಿಲ್ಲ. ಮಾನ್ಯ ಯಡಿಯೂರಪ್ಪನವರ ಮನಸ್ಸನ್ನು ನೋಯಿಸಬೇಕೆಂಬ ಉದ್ದೇಶ ನನಗೆ ಇಲ್ಲ. ಜನ ಕಲ್ಯಾಣ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯಬೇಕೆಂಬುದೇ ನನ್ನ ಮೂಲ ಉದ್ದೇಶ. ಆ ದೃಷ್ಟಿಯಿಂದ ನಾನು ಇದನ್ನು ಮಾಡಿದೆನೇ ಹೊರತು ಬೇರೆ ಯಾವ ದುರುದ್ದೇಶದಿಂದಲೂ ಮಾಡಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳು ಒಳ್ಳೆಯ ಉದ್ದೇಶದಿಂದ ಈ ರೀತಿ ಮಾಡಿದ್ದೇನೆಂದು ಹೇಳುತ್ತಿದ್ದಾರೆ. ಇದು ತನಿಖೆ ಆಗಬೇಕು. ನಾನು ಪ್ರಾರಂಭದಲ್ಲೇ ಹೇಳಿದ್ದೇನೆ, ಇವತ್ತು ಈ ರಾಜ್ಯದಲ್ಲಿ ನೂರಕ್ಕೆ ನೂರು ಭಾಗ ಒಳ್ಳೆಯ ಕೆಲಸಗಳು ಆಗುತ್ತಿವೆಯೆಂದು ಹೇಳುವಂಥ ಜಿಲ್ಲೆ ಅಥವಾ ತಾಲ್ಲೂಕು ಯಾವುದಾದರೂ ಇದ್ದರೆ ದಯವಿಟ್ಟು ತಿಳಿಸಿ. ಅದನ್ನು ನಾನು ನೋಡಿ ಕೊಂಡು ಬರುತ್ತೇನೆ.

ಉಪಾಧ್ಯಕ್ಷರು.—ಇಲ್ಲಿ ವಾದ ವಿವಾದಗಳು ಬೇಕಿಲ್ಲ.

ಶ್ರೀ ಜಿ. ಬಸವಣ್ಣಪ್ಪ.— ಮನುಷ್ಯ ಎಂದಮೇಲೆ ಎಡವದೇ ಇರುವುದಿಲ್ಲ. ತಪ್ಪನ್ನು ಮಾಡಿಯೇ ಮಾಡುತ್ತಾನೆ. ಎಲ್ಲಾ ತಾಲೂಕಿನಲ್ಲೂ ಸತ್ಯ ಹರಿಶ್ಚಂದ್ರರೇ ಇರುತ್ತಾರೆಂದು ಹೇಳುವುದಿಲ್ಲ. ಆದರೆ ಅಲ್ಲಿ ನಡೆದಿರತಕ್ಕ ಅಪರಾಧದ ಮಟ್ಟ ವಿಪರೀತವಾಗಿದೆ. ಅದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಆದ್ದರಿಂದ ನಾನು ಹೇಳುತ್ತಿದ್ದೇನೆ.

ಇನ್ನು ಎರಡನೆಯದಾಗಿ ಸರ್ಕಾರವೇ ಇಲ್ಲವೆಂದು ನಾನು ಹೇಳಿದ್ದೇನೆಂದು ಕೆಲವು ಪತ್ರಿಕೆಗಳಲ್ಲಿ ಬಂದಿದೆಯೆಂದು ಅವರು ಹೇಳುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದ ಮಾತು. ಅಲ್ಲಿರತಕ್ಕ ಅಧಿಕಾರಿಗಳು ಭಯ ಭೀತಿ ಇಲ್ಲದೆ ವರ್ತನೆ ಮಾಡುತ್ತಿದ್ದಾರೆಂದು ನಾನು ಹೇಳಿದ್ದೇನೆ. ಅದನ್ನು ನಾನು ಕ್ಲಾರಿಫೈ ಮಾಡಬೇಕಾಗಿದೆ. ಸರ್ಕಾರವೇ ಇಲ್ಲ ಎಂದು ನಾನು ಯಾವುದೇ ಸಂದರ್ಭದಲ್ಲೂ ಹೇಳಿಲ್ಲ. ಸರ್ಕಾರ ಇದೆ ಎಂಬ ಭಯ ಭೀತಿ ಇಲ್ಲದೆ ಅಲ್ಲಿರತಕ್ಕ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆಂಬ ಮಾತನ್ನು ನಾನು ಹೇಳಿದ್ದೇನೆ.

ಶ್ರೀ ಬಿ. ಎಸ್ ಯಡಿಯೂರಪ್ಪ.— ಮಾನ್ಯ ಉಪಾಧ್ಯಕ್ಷರೆ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಅದೇನೆಂದರೆ ಮಾನ್ಯ ಬಸವಣ್ಣಪ್ಪನವರನ್ನು ಯಾವುದೇ ಒಂದು ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿಸಬೇಕೆಂಬ ಉದ್ದೇಶ ನನಗೆ ಖಂಡಿತವಾಗಿ ಇಲ್ಲ. ಅವರು ಪ್ರಾಮಾಣಿಕ ಉದ್ದೇಶದಿಂದ ಮಾಡಿದ್ದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸಿ. ಓ. ಡಿ ತನಿಖೆ ಆಗಬೇಕೆಂದು ನಾನು ಹೇಳಿದ್ದೇನೆ. ಆದರೆ ಒಂದು ಮಾತನ್ನು ಇದರ ಜೊತೆಯಲ್ಲಿ ನಾನು ಹೇಳಬೇಕಾಗಿದೆ. ಆ ಕ್ಷೇತ್ರ ತಮ್ಮ ತೌರು ಮನೆ ಇರಬಹುದು. ಆದರೆ ಈಗ ಇನ್ನೊಂದು ಕ್ಷೇತ್ರದ ಶಾಸಕರು. ಹಿಂದೆ ತಾವು ಅಲ್ಲಿದ್ದೀರಿ. ಇದನ್ನು ಒಪ್ಪಿಕೊಳ್ಳುತ್ತೀರಿ. ತಾವು ಈಗ ಮಂತ್ರಿಗಳಾಗಿದ್ದೀರಿ. ಇಡೀ ರಾಜ್ಯದಲ್ಲಿ ಎಲ್ಲಿ ಬೇಕಾದರೂ ತಪ್ಪು ಆದಾಗ ಕ್ರಮ ತೆಗೆದುಕೊಳ್ಳುವುದಕ್ಕೆ ತಮಗೆ ಅಧಿಕಾರ ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಮಾನ್ಯ ಸಚಿವರಾದ ಜೆ. ಹೆಚ್. ಪಟೇಲ್ ರವರಿಗೆ ಮನವಿಯನ್ನು ಮಾಡಿಕೊಂಡು ನಾನು ಒಂದು ಪತ್ರವನ್ನು ಬರೆದೆ. ಇದರ ಮೂಲಕ ಈ ಕ್ಷೇತ್ರದಲ್ಲಿ ಏನೋ ಒಂದು ಕೆಟ್ಟ ವಾತಾವರಣ ಉಂಟಾಗಿದೆ ಎಂಬ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದಕ್ಕೆ ಬದಲಾಗಿ ನನ್ನನ್ನು ಕರೆದು ಇಂಥ ಅಯೋಗ್ಯ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದಾಗ, ಅದು ಬೇಡವೆಂದು ನಾನು ಹೇಳಿದ್ದರೆ ಆಗ ತಾವು ಕ್ರಮ ತೆಗೆದುಕೊಳ್ಳಬಹುದಿತ್ತು. ತಾವು ಪತ್ರಿಕಾಗೋಷ್ಠಿಗೆ ಜಿಲ್ಲಾಧಿಕಾರಿಯವರನ್ನು ಕರೆಸಿದಾಗ ಆ ಪತ್ರಿಕಾಕರ್ತರು ಜಿಲ್ಲಾಧಿಕಾರಿಯವರನ್ನು ಒಂದು ಪ್ರಶ್ನೆ ಏನು ಕೇಳಿದರೆಂದರೆ, ಈ ರೀತಿ ಶಿಕಾರಿಪುರ ತಾಲೂಕಿನಲ್ಲಿ ಅವ್ಯವಹಾರವಾಗಿದೆ ಎಂದು ಹೇಳಿದ್ದೀರಿ, ಅದರ ಬಗ್ಗೆ ಏನಾದರೂ ದೂರುಗಳು ಬಂದಿವೆಯೆ ? ಎಂದು ಜಿಲ್ಲಾಧಿಕಾರಿಯವರು ಕೇಳಿದಾಗ, ಇದುವರೆಗೂ ಒಂದೇ ಒಂದು ದೂರು ಕೂಡ ಬಂದಿಲ್ಲ, ಇಲ್ಲಿ ಬಹಳ ಉತ್ತಮವಾದ ಕೆಲಸಗಳಾಗಿದೆ ಎಂದು ಅವರು ಹೇಳಿಕೆ ಕೊಟ್ಟಿದ್ದಾರೆ. ಅದು ಪತ್ರಿಕೆಯಲ್ಲೂ ಬಂತು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದರ ಪರಿಣಾಮ ಎಲ್ಲಿಗೆ ಹೋಗಿದೆ ಎಂದರೆ, ಇದು ಗಂಡ ಹೆಂಡಿರ ಜಗಳದಂತಿದೆ, ಇದರಿಂದ ನಮಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ನಮ್ಮನ್ನು ಸಾಮೂಹಿಕವಾಗಿ ವರ್ಗ ಮಾಡಿಕೊಡಿ ಎಂದು ಲೋಕೋಪಯೋಗಿ ಇಲಾಖೆಯವರು ಅರ್ಜಿಯನ್ನು ಕೊಟ್ಟಿದ್ದಾರೆ. ಇದೇ ರೀತಿ ಬೇರೆ ಅಧಿಕಾರಿಗಳೂ ವರ್ಗಾವಣೆಯನ್ನು ಕೇಳುತ್ತಿದ್ದಾರೆ. ಇದರ ಪರಿಣಾಮ ಏನಾಗುತ್ತಿದೆ ಎಂದರೆ ಶಿಕಾರಿಪುರ ತಾಲೂಕಿನಲ್ಲಿ ಯಡಿಯೂರಪ್ಪ ಇದ್ದಾನೆ, ಅಲ್ಲಿಗೆ ಯಾವುದೇ ಅಧಿಕಾರಿ ಬಂದರೂ ಆ ಅಧಿಕಾರಿಗೂ ಮತ್ತು ಯಡಿಯೂರಪ್ಪನಿಗೂ ಆಗುವುದಿಲ್ಲ. ಆದ್ದರಿಂದ ಇಲ್ಲಿ ನಾವು ಬದುಕುವುದಕ್ಕೆ ಸಾಧ್ಯವಿಲ್ಲ ಎಂದು ಅಧಿಕಾರದಲ್ಲಿ ಇರತಕ್ಕ ಶಾಸಕರ ರಕ್ಷಣೆಯನ್ನು ತೆಗೆದುಕೊಂಡು ಎಷ್ಟು ಸಾಧ್ಯವೋ ಅಷ್ಟನ್ನೂ ನುಂಗಿ ಬಿಡುವಂಥ ಕೆಲಸವನ್ನು ಆ ಅಧಿಕಾರಿಗಳು ಮಾಡಬಹುದು ಮಾನ್ಯ ಮುಖ್ಯ ಮಂತ್ರಿಯವರು ಒಂದು ಮಾತನ್ನು ಹೇಳಿದ್ದಾರೆ. ಶಿಕಾರಿಪುರ ತಾಲೂಕಿನಲ್ಲಿ ಯಡಿಯೂರಪ್ಪನವರು ಅಧಿಕಾರಿಗಳನ್ನು ಸುಮ್ಮನೆ ಕಾಡಿಸುತ್ತಿದ್ದಾರೆ. ಎಲ್ಲವೂ ಒಂದೇ ಸಾರಿ ಉತ್ತಮವಾಗುವುದಕ್ಕೆ ಸಾಧ್ಯವಿಲ್ಲ, ಸ್ವಲ್ಪ ಮಟ್ಟಿಗೆ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಹೇಳಿ ಎಂದು ಹೇಳಿದ್ದಾರೆ. ಮಾನ್ಯ ಜೆ. ಹೆಚ್. ಪಟೇಲ್ ರವರು, ಎಲ್ಲಾ ಒಂದೇ ಸಾರಿ ಮಾಡುವುದಕ್ಕಾಗುವುದಿಲ್ಲ, ನಾವು ಹೊಂದಿಕೊಂಡು ಕೆಲಸ ಮಾಡೋಣ ಎಂದು ಕೂಡ ಹೇಳಿದ್ದಾರೆ. ನಾನು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಕೆಲಸ ಮಾಡಿಸಿದ್ದೇನೆ. ಅಲ್ಲಿ ನನ್ನ ಚಿಕ್ಕಪ್ಪ ಅಥವಾ ದೊಡ್ಡಪ್ಪನ ಮಕ್ಕಳು ಯಾರೂ ಅಧಿಕಾರಿಗಳಾಗಿಲ್ಲ. ನನ್ನ ಪಕ್ಕದ ಹಳ್ಳಿ

ಕ್ಷೇತ್ರದಲ್ಲಿ ಸಿ.ಓ.ಡಿ. ತನಿಖೆ ಆಗಬೇಕೆಂದು ನಾನು ಆಗ್ರಹ ಮಾಡಿದಾಗ ನೀವು ಏತಕ್ಕೆ ಆ ತನಿಖೆಯನ್ನು ಮಾಡಿಸಲಿಲ್ಲ ? ನಿನ್ನೆ ಮೊನ್ನೆ ಮಾನ್ಯ ಜೆ ಹೆಚ್. ಪಟೇಲ್‌ರವರು ಬಂದು ಹೋಗಿದ್ದಾರೆ. ಅವರು ಬಂದಾಗ ನಾನು ಅವರಲ್ಲಿ ವಿನಂತಿಮಾಡಿಕೊಂಡಿದ್ದೇನೆ. ೩--೪ ಮಂದಿ ಬಂದು ತಮಗೆ ತಪ್ಪು ಮಾಹಿತಿಯನ್ನು ಯಾರು ತಂದುಕೊಟ್ಟರು ಅವರು ಇವತ್ತು ಸಿ.ಓ.ಡಿ. ಎನ್‌ಕ್ವೈರಿಯನ್ನು ಎದುರಿಸುತ್ತಿದ್ದಾರೆ. ನಾನು ಹೇಳುತ್ತೇನೆ, ನನಗೆ ಅಧಿಕಾರವಿದ್ದರೂ ಕೂಡ ಶಿಕಾರಿಪುರ ತಾಲೂಕಿಗೆ ಇಂಥ ಒಬ್ಬ ಅಧಿಕಾರಿಯನ್ನು ಕೊಡಬೇಕೆಂದು ಲಿಖಿತ ಮೂಲಕ ಕೊಟ್ಟಿಲ್ಲ ಮತ್ತು ಕೊಡುವುದಿಲ್ಲ. ನೀವೇ ಒಬ್ಬ ಒಳ್ಳೆಯ ಅಧಿಕಾರಿಯನ್ನು ಅಲ್ಲಿಗೆ ಹಾಕಿ. ನಾಳೆ ಸದನದಲ್ಲಿ ನನ್ನನ್ನು ದೂರು ಮಾಡುವುದು ಬೇಡ. ನೀವು ಸರಿಯಾದ ರೀತಿಯಲ್ಲಿ ಚೆನ್ನಾಗಿ ಕೆಲಸ ಮಾಡಿಸಿದರೆ ಅದಕ್ಕೆ ನನ್ನ ಸಂಪೂರ್ಣ ಸಹಕಾರ ಇದೆ. ಆದರೆ ಈ ರಾಜ್ಯದಲ್ಲಿ ೧೮ ಜನ ಶಾಸಕರು ನಿಮ್ಮ ಜೊತೆಯಲ್ಲಿದ್ದು ನಿಮಗೆ ಸಂಪೂರ್ಣ ಬೆಂಬಲವನ್ನು ಕೊಟ್ಟಂಥ ಸಂದರ್ಭದಲ್ಲಿ ಶಿಕಾರಿಪುರ ತಾಲೂಕಿನಲ್ಲಿ ನೀವೇ ಒಂದು ಸಾರಿ ಭಾಷಣವನ್ನು ಮಾಡಿ ಇಲ್ಲಿ ಬಹಳ ಚೆನ್ನಾಗಿ ಕೆಲಸವಾಗಿದೆ, ಆದಕ್ಕಾಗಿ ಈ ತಾಲೂಕಿನ ಜನತೆಯ ಪರವಾಗಿ ಅಭಿನಂದಿಸುತ್ತೇನೆಂದು ಹೇಳಿದಿರಿ. ಅದನ್ನು ಹೇಳಿದ ಕೇವಲ ೨--೩ ತಿಂಗಳಲ್ಲಿ ಈ ರಾಜ್ಯದಲ್ಲಿ ಎಲ್ಲೂ ಆಗದಂಥ ಭ್ರಷ್ಟಾಚಾರ ವಾಗಿದೆ ಎಂಬ ಹೇಳಿಕೆಯನ್ನು ತಾವು ಕೊಟ್ಟಿದ್ದೀರಿ. ಇದು ಸರಿಯೆ ? ನಾನು ಈ ವಿಚಾರವನ್ನು ಇಲ್ಲಿಗೇ ಬಿಡುವುದಕ್ಕೆ ಸಿದ್ಧನಿದ್ದೇನೆ. ಆದರೆ ಈ ತಾಲೂಕಿನ ದೃಷ್ಟಿಯಿಂದ, ಈ ರಾಜ್ಯದ ಜನರ ಹಿತದೃಷ್ಟಿಯಿಂದ ಒಬ್ಬ ಮಂತ್ರಿಯಾಗಿ ತಮಗೆ ಎಲ್ಲ ಜವಾಬ್ದಾರಿಯೂ ಸಂಪೂರ್ಣವಾಗಿ ಇರತಕ್ಕ ಸಂದರ್ಭದಲ್ಲಿ ಯಾವುದೋ ಯಡಿಯೂರಪ್ಪನ ರಾಜಕೀಯಕ್ಕೋಸ್ಕರ ಅಧಿಕಾರಿಗಳು ಬಲಿಪಶು ಆಗುವುದು ಬೇಡ. ಅಲ್ಲಿ ಯಾರಾದರೂ ತಪ್ಪಿತಸ್ಥ ಅಧಿಕಾರಿಗಳಿದ್ದರೆ, ಮಾಡಬಾರದ ಕೆಲಸವನ್ನು ಮಾಡಿದ್ದರೆ ಅವರಿಗೆ ಎಂಥ ಶಿಕ್ಷೆಯನ್ನು ಬೇಕಾದರೂ ಕೊಡಿ. ಯಾರಿಗೂ ಕೊಡದೇ ಇರುವಂಥ ಶಿಕ್ಷೆಯನ್ನು ಕೊಡಿ. ಅದಕ್ಕೆ ನಾನು ಬೆಂಬಲವನ್ನು ಕೊಡುತ್ತೇನೆ ಅದಕ್ಕೆ ತಾವು ಸಿದ್ಧರಿದ್ದೀರಾ ? ಇನ್ನು ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ.

ಇಲ್ಲಿ ಒಂದು ಶಬ್ದವನ್ನು ಏನು ಹೇಳಿದ್ದೀರೆಂದರೆ : On the other hand in spite of your lapses here and there I have been always kind to your and friendly...

ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ಇದು ಒಬ್ಬ ಶಾಸಕನಿಗೆ ಬರೆಯತಕ್ಕ ಪತ್ರದ ರೀತಿಯೇ ? ನನ್ನ ಲ್ಯಾಪ್ಸಸ್ ಏನು ಎಂಬುದನ್ನು ತಾವು ಹೇಳಬೇಕು.

ಶ್ರೀ ಜಿ. ಬಸವಣ್ಣೆಪ್ಪ.—ನಾನು ಯಾವುದೇ ಕಾಗದವನ್ನು ಬರೆಯಬೇಕಾದರೂ ಬಹಳ ಯೋಚನೆ ಮಾಡಿ, ಬಹಳ ತೂಕವಾಗಿ ಬರೆಯುತ್ತೇನೆ. ೧೯೮೩--೮೪ರಲ್ಲಿ ಲ್ಯಾಪ್ಸಸ್ ಏನಾಯಿತು ಎನ್ನುವ ಬಗ್ಗೆ ತಾವೇ ಗಮನಹರಿಸಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಈ ರಾಜ್ಯದಲ್ಲಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿ ಅಪವ್ಯಯ ಆದಾಗ ಯಡಿಯೂರಪ್ಪ ಒಂದೂವರೆ ತಿಂಗಳು ಉಪವಾಸ ಸತ್ಯಾಗ್ರಹ ಮಾಡಿ ಸಿ ಓ. ಡಿ. ಎನ್‌ಕ್ವೈರಿ ಮಾಡಿಸಿದಾಗ ನೀವು ಇದೇ ಸೀಟನಲ್ಲಿದ್ದಿರಿ. ಆಗ ನೀವು ಒಂದೇ ಒಂದು ಮಾತನ್ನೂ ಆಡಲಿಲ್ಲ.

ಶ್ರೀ ಜಿ. ಬಸವಣ್ಣೆಪ್ಪ.— ನಾನು ೪--೫ ಜನರ ಜೊತೆ ಹೋದಾಗ ಸುಮಾರು ೨೦೦--೩೦೦ ಜನ ಮಿಲ್ ಮಾಲೀಕರು ಸೇರಿ ನನ್ನನ್ನು ಮ್ಯಾನ್ ಹ್ಯಾಂಡಲ್ ಮಾಡುವುದಕ್ಕೆ ಪ್ರಯತ್ನ ಮಾಡಿದಿರಿ......

ಶ್ರೀ ಬಿ. ಎಸ್. ಯಡಿಯೂರಪ್ಪ.— ಆ ಒಂದು ಸೇಡನ್ನು ತೀರಿಸಿಕೊಳ್ಳುವುದಕ್ಕೆ ಇದನ್ನೆಲ್ಲಾ ನೀವು ಮಾಡಿದಿರಾ ? ಆವತ್ತು ನಡೆದಂಥ ಘಟನೆಗೋಸ್ಕರ ನಿಮ್ಮ ಮೇಲೆ ಸೇಡನ್ನು ತೀರಿಸಿಕೊಳ್ಳಲು ನಾನು ಈ ರೀತಿ ಕ್ರಮ ತೆಗೆದುಕೊಂಡಿದ್ದೇನೆಂದು ತಾವು ಹೇಳುವುದಾದರೆ ನಾನು ಇದುವರೆಗೂ ಏನೇನು ಮಾತನಾಡಿದ್ದೇನೆ ಆ ಎಲ್ಲ ಮಾತುಗಳನ್ನೂ ನಾನು ವಾಪಸು ತೆಗೆದುಕೊಳ್ಳುತ್ತೇನೆ.

೧೨-೦೦ ಪಿ. ಎಂ.

ಬರಗಾಲ ಬಂದಿರುವ ಈ ಸಂದರ್ಭದಲ್ಲಿ ನಾನು ಬಿಜೆಪಿ ಸದಸ್ಯನಾಗಿ ಎಲ್ಲಾ ಸಹಕಾರಗಳನ್ನೂ ಕೊಡುತ್ತೇನೆ. ಬರಗಾಲ ಪರಿಹಾರ ನಿಧಿಗೆ ಎಲ್ಲ ಸದಸ್ಯರೂ ತಮ್ಮ ಒಂದು ತಿಂಗಳ ಸಂಬಳ ಕೊಡಬೇಕೆಂದು ಮಾಡಿದ್ದಾರೆ ಎಲ್ಲ ಸಹಕಾರ ಸಂಘಗಳ ಸಹಕಾರವನ್ನೂ ತಾವು ತೆಗೆದುಕೊಂಡು ತಾಲ್ಲೂಕು ಸಮಿತಿಗಳನ್ನು ಮಾಡಿಕೊಂಡು, ರಾಜ್ಯದ ಬರಗಾಲವನ್ನು ಎದುರಿಸಿ ಜನ ನೆಮ್ಮದಿಯಿಂದ ಜೀವನ ನಡೆಸುವಂತೆ ಸಹಕಾರ ಮಾಡಬೇಕೆಂದು ಕೋರುತ್ತೇನೆ. ನಮ್ಮ ರಾಜ್ಯವು ಕಳೆದ ೩ ವರ್ಷಗಳಿಂದಲೂ ಭೀಕರ ಬರಗಾಲವನ್ನು ಎದುರಿಸುತ್ತಿದೆ. ಈ ರೀತಿ ಬರಗಾಲಕ್ಕೆ ತುತ್ತಾಗಿರುವ ರೈತರ ಪರಿಸ್ಥಿತಿಯನ್ನು ತಾವು ಗಮನಿಸಿ, ಸಹಕಾರ ಸಂಘಗಳಲ್ಲಿನ ರೈತರ ಸಾಲವನ್ನು ಮನ್ನಾ ಮಾಡಿ, ಅವರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಅನುಕೂಲ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ).— ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಬರಗಾಲ ಪರಿಣಾಮದ ಬಗ್ಗೆ ನಮ್ಮ ವಿರೋಧಪಕ್ಷದ ಕೆಲವು ಮಿತ್ರರು ಹಾಗೂ ನಮ್ಮ ಪಕ್ಷದ ಸದಸ್ಯರೂ ಕೂಡ ಮಾತನಾಡಿದ್ದಾರೆ. ಅದರಲ್ಲಿ, ನಮ್ಮ ವಿರೋಧಪಕ್ಷದ ಸದಸ್ಯ ಮಿತ್ರರು ಸರ್ಕಾರದ ಬಗ್ಗೆ, ನೀವು ಬರಗಾಲ ಪರಿಹಾರ ಕಾರ್ಯ ಮಾಡುವಲ್ಲಿ ವಿಫಲಗೊಂಡಿದ್ದೀರಿ ಎಂದು ಹೇಳಿದ್ದಾರೆ. ಆದರೆ ಎಷ್ಟೊಂದು ಕೆಲಸಗಳನ್ನು ಈ ಸರ್ಕಾರ ಮಾಡಿದೆ ಎಂಬುದರ ಬಗ್ಗೆ ಅವರು ಬಹುಶಃ ತಿಳಿದುಕೊಂಡಿಲ್ಲ. ಅವರು ಕೇವಲ ಟೀಕೆಗಳನ್ನು ಮಾಡುತ್ತಾರೆ, ಸರ್ಕಾರವನ್ನು ದೂರುತ್ತಾರೆ. ಎಲ್ಲರ ಸಹಕಾರವೂ ಬೇಕೆಂಬುದನ್ನು ಅವರು ಅರಿಯಬೇಕು. ನಾನು ಒಂದು ಮಾತನ್ನು ವಿರೋಧಪಕ್ಷದ ಮಿತ್ರರಿಗೆ ಹೇಳಬಯಸುತ್ತೇನೆ. ಕರ್ನಾಟಕವೂ ಇಂದು ಭೀಕರ ಬರಗಾಲವನ್ನು ಎದುರಿಸುತ್ತಿದೆ. ದುರದೃಷ್ಟವಶಾತ್, ಈ ವರ್ಷ ಸುಮಾರು ೧೮ ಜಿಲ್ಲೆಗಳಲ್ಲಿ ೧೪೪ ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ. ವಿರೋಧಪಕ್ಷದವರು ಹೇಳಿದರು, ಕೇಂದ್ರವು ಕೊಟ್ಟಂತಹ ಹಣವನ್ನು ದುರುಪಯೋಗ ಮಾಡಲಾಗಿದೆ ಎಂದು. ಇದನ್ನು ನಾನು ಒಪ್ಪುವುದಿಲ್ಲ. ಇವತ್ತಿನ ದಿವಸ ಸರ್ಕಾರದವರು ಸುಮಾರು ೧೭೨ ಕೋಟಿ ರೂಪಾಯಿಗಳನ್ನು ಈವರೆಗೆ ಖರ್ಚು ಮಾಡಿದ್ದಾರೆ.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಈವರೆಗೆ ಸುಮಾರು ೧೦೦ ಗೋಶಾಲೆಗಳನ್ನು ತೆರೆಯಲಾಗಿದೆ. ಅದರಲ್ಲಿ ಈಗಾಗಲೇ ೭೪ ಗೋಶಾಲೆಗಳು ಪ್ರಾರಂಭವಾಗಿವೆ. ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ನಾಗರಹಳ್ಳಿಯಲ್ಲಿ ಗೋಶಾಲೆಯು ವ್ಯವಸ್ಥಿತವಾಗಿ ನಡೆಯುತ್ತಿದೆ. ಈ ಬಗ್ಗೆ ಪತ್ರಿಕೆಗಳವರು ಪ್ರಶಂಸೆ ಮಾಡಿದ್ದಾರೆ. ವಿರೋಧಪಕ್ಷದವರು ಸರ್ಕಾರದ ಜೊತೆ ಸಹಕಾರ ನೀಡಬೇಕು. ಇನ್ನೊಂದು ಸಮಸ್ಯೆ ಎಂದರೆ, ನಮ್ಮಲ್ಲಿ ಆರ್ಥಿಕ ಸಂಪನ್ಮೂಲಗಳು ಕಡಿಮೆ. ಇರುವ ಸಂಪನ್ಮೂಲಗಳು ಸಾಕಾಗುವುದಿಲ್ಲ. ಆದ್ದರಿಂದ ಹೆಚ್ಚಿನ ಸಂಪನ್ಮೂಲಗಳನ್ನು ಸರ್ಕಾರ ಮಾಡಿಕೊಡಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಮಳೆ ಸುಮಾರು ಸರಾಸರಿ ೭೦೬ ಮಿಲಿ ಮೀಟರ್ ಬರಬೇಕಾಗಿದ್ದುದು, ಕೇವಲ ೪೪೫ ಮಿಲಿ ಮೀಟರ್ ಬಿದ್ದಿದೆ. ನಂತರ, ರಾಗಿ, ಭತ್ತ, ಕರಿಫ್ ಬೆಳೆಗಳು ಸರಿಯಾಗಿ ಆಗಿರುವುದಿಲ್ಲ. ೮ ಆಣೆ ಬೆಳೆ ಕಡಿಮೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಸುಮಾರು ೫ ಲಕ್ಷ. ೧೧,೭೨೨ ಹೆಕ್ಟೇರ್ ಆಗಬೇಕಾಗಿತ್ತು. ಆದರ ಈ ಸಲ ಆಗಿರುವುದು ಕೇವಲ ೨,೩೫,೯೪೫ ಮಾತ್ರ. ವಿಶೇಷವಾಗಿ ಯಲಬುರ್ಗಾ, ಲಿಂಗಸಗೂರು, ಕುಷ್ಟಗಿ, ತಾಲ್ಲೂಕುಗಳಲ್ಲಿ ಭೀಕರ ಬರಗಾಲವಿದೆ. ರಾಯಚೂರು ನೀರಾವರಿ ಜಿಲ್ಲೆಯೆಂದು ಎಲ್ಲರೂ ಹೇಳುತ್ತಾರೆ. ಆದರೆ, ಇದು ತಪ್ಪು ಭಾವನೆ. ನಮ್ಮ ಜಿಲ್ಲೆಯ ಒಟ್ಟು ಕೃಷಿ ವಿಸ್ತೀರ್ಣ ೧೩,ಲಕ್ಷ ಹೆಕ್ಟೇರ್ ಇದೆ ಅದರಲ್ಲಿ ೧,೫೦,೦೦೦ ಹೆಕ್ಟೇರ್ ಪ್ರದೇಶ ಮಾತ್ರ ನೀರಾವರಿ ಪ್ರದೇಶವಾಗಿದೆ. ಉಳಿದ ಭಾಗಗಳೆಲ್ಲಾ ಮಳೆ ನೀರಿನ ಮೇಲೆ ಅವಲಂಭಿತವಾಗಿದೆ. ಕೇವಲ ಶೇ ೧೮ ಭಾಗ ಮಾತ್ರ ನೀರಾವರಿಯನ್ನು ಅವಲಂಬಿಸಿದೆ. ಉಳಿದೆಲ್ಲಾ ಅಂದರೆ, ೮೨ ಪರ್ಸೆಂಟ್ ಭಾಗ ಮಳೆಯನ್ನು ಅವಲಂಬಿಸಿದೆ ಸುಮಾರು ೯೦ ಪರ್ಸೆಂಟ್ ಜಾನುವಾರು ನಮ್ಮ ಜಿಲ್ಲೆಯಲ್ಲಿ ಬರಗಾಲಕ್ಕೆ ತುತ್ತಾಗಿವೆ. ನಮ್ಮ ಜಿಲ್ಲೆಯಲ್ಲಿ ೧೭ ಲಕ್ಷ ಜನಸಂಖ್ಯೆಯಲ್ಲಿ ೯ ಲಕ್ಷಕ್ಕೂ ಹೆಚ್ಚು ಜನರು ಬರಗಾಲಕ್ಕೆ ತುತ್ತಾಗಿದ್ದಾರೆ. ಇಲ್ಲಿ ಬರಗಾಲವನ್ನು ಎದುರಿಸಲು ಇನ್ನೂ ಹೆಚ್ಚಿನ ಹಣಕಾಸಿನ ಸಹಾಯವನ್ನು ನೀಡಬೇಕು. ನಮ್ಮ ಜಿಲ್ಲೆಯಲ್ಲಿರತಕ್ಕಂತಹ ೨ ಲಕ್ಷ ೪೦ ಸಾವಿರ ಕೃಷಿ ಕೂಲಿಕಾರರಲ್ಲಿ ಸುಮಾರು ೧ ಲಕ್ಷ ೧೩ ಸಾವಿರ ಜನ ಬರಗಾಲದ ದವಡೆಗೆ ಸಿಲುಕಿದ್ದಾರೆ.

ಮುಂದಿನ ಮಳೆಗಾಲದ ತನಕ, ಅಂದರೆ ಜೂನ್ ತಿಂಗಳು ಬರುವವರೆಗೂ ಅವರನ್ನು ಕಾಪಾಡಬೇಕಾಗುತ್ತದೆ. ಇದು ಸರ್ಕಾರದ ಕರ್ತವ್ಯವಾಗಿದೆ. ತಿಂಗಳಿಗೆ ಕನಿಷ್ಠ ಪಕ್ಷ 1 ಲಕ್ಷ ರೂಪಾಯಿಗಳು ನಮ್ಮ ಜಿಲ್ಲೆಗೆ ಬೇಕಾಗುತ್ತದೆ. ಬರಗಾಲ ಪರಿಹಾರ ಕೆಲಸ ಎಂದರೆ ರಸ್ತೆ ಮಾಡಿಸುವುದು, ಕೆರೆಕಟ್ಟೆಗಳನ್ನು ಕಟ್ಟಿಸುವುದು, ಇಂತಹವುಗಳನ್ನು ಮಾಡಿದರೆ, ಶಾಶ್ವತ ಪರಿಹಾರ ಆದಂತಾಗುವುದಿಲ್ಲ. ಆದುದರಿಂದ, ಶಾಶ್ವತ ಪರಿಹಾರ ಕೆಲಸಕಾರ್ಯಗಳು ಪ್ರಾರಂಭವಾಗಬೇಕಾಗಿದೆ. ನಮ್ಮಲ್ಲಿಸಣ್ಣ ನೀರಾವರಿ ಯೋಜನೆಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಎನ್‌ಆರ್‌ಎಪಿ, ಡಿಪಿಎಪಿ ಆರ್‌ಎಲ್‌ಜಿಪಿ ಮುಂತಾದ ಕಾರ್ಯಕ್ರಮ ಗಳಲ್ಲಿ ಹೆಚ್ಚಿನ ಕಾರ್ಯಗಳನ್ನು ತೆಗೆದುಕೊಳ್ಳಬೇಕು. ಪರ್‌ಕೊಲೇಶನ್ ಟ್ಯಾಂಕ್, ಭಂಡಾರಗಳನ್ನು, ಕಾಂಟೂರ್ ಬೈಂಡಿಂಗ್, ಇತರ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಮಾಡಬೇಕು.

ಯಾವ ಪ್ರದೇಶದಲ್ಲಿ ಭೂಜಲ ಸಾಕಷ್ಟು ದೊರೆಯುತ್ತದೆ ಎಂಬುದನ್ನು ಕಂಡುಹಿಡಿಯಬೇಕು. ಸಾಮಾನ್ಯವಾಗಿ ಕೆಂಪು ಮಣ್ಣಿನ ಪ್ರದೇಶದಲ್ಲಿ ಭೂಜಲ ಸಾಕಷ್ಟು ಸಿಗುತ್ತದೆಂದು ತಿಳಿದು ಬಂದಿದೆ. ದುರಾದೃಷ್ಟ ವಶಾತ್ ನಮ್ಮ ರಾಜ್ಯದಲ್ಲಿ ಹಿಂದೆ ಯಾವ ಸರ್ಕಾರವೂ ಈ ಭೂಜಲದ ಉಪಯೋಗದ ಬಗ್ಗೆ ಚಿಂತನೆಯನ್ನು ಮಾಡಿದ್ದಿಲ್ಲ. ಮಹಾರಾಷ್ಟ್ರ, ವೆಸ್ಟ್ ಬೇಂಗಾಲ್ ಮುಂತಾದ ಕಡೆಗಳಲ್ಲಿ ಭೂಜಲ ಎಷ್ಟು ಇದೆ ಎಂದು ವೈಜ್ಞಾನಿಕವಾಗಿ ಕಂಡುಹಿಡಿದಿದ್ದಾರೆ. ಅದನ್ನು ಉಪಯೋಗಿಸಿಕೊಳ್ಳಲು ಅಂಡರ್ ಗ್ರ್ಯಾಂಡ್ ವಾಟರ್ ಸೆಲ್ ಎಂದು ಮಾಡಿ ಅದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಅದರಂತೆ ನಮ್ಮ ರಾಜ್ಯದಲ್ಲೂ ಕೂಡ ಅಂಡರ್ ಗ್ರೌಂಡ್ ವಾಟರ್ ಸೆಲ್‌ನ್ನು ರಚನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ದೊರೆಯತಕ್ಕಂಥ ಜಲಸಂಪತ್ತನ್ನು ಸಂಪೂರ್ಣವಾಗಿ ಕಂಡುಹಿಡಿದು ವರದಿಯನ್ನು ತಯಾರಿಸ ತಕ್ಕಂಥ ಕ್ರಮ ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಅರಣ್ಯ ಇಲಾಖೆಯ ಬಗ್ಗೆ ಹೇಳುವುದಾದರೆ ಡಿಪಿಎಪಿ, ಆರ್‌ಎಲ್‌ಇಜಿಪಿ, ಮತ್ತು ಎನ್ ಆರ್‌ಇಪಿಗೆ ಒಟ್ಟು ವೆಚ್ಚ 30 ಪರ್ಸೆಂಟ್‌ನಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ನಾವು ಪ್ರತಿವರ್ಷ ನೋಡುತ್ತಿದ್ದೇವೆ. ಅರಣ್ಯದಿಂದ ಏನು ಉಪಯೋಗವಾಗುತ್ತಿಲ್ಲ. ಅರಣ್ಯ ಇಲಾಖೆಯ ಅಧಿಕಾರಿಗಳ ಜೇಬಿಗೆ ಹಣವೆಲ್ಲ ಹೋಗುತ್ತಿದೆ. ಆರ್.ಎಫ್.ಓ. ಅರಾಮವಾಗಿ ಇದ್ದಾರೆ, ಅರಣ್ಯ ಅಭಿವೃದ್ಧಿಯಾದುದು ಎಲ್ಲೂ ಕಂಡುಬಂದಿಲ್ಲವೆಂದು ಈ ಒಂದು ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡು ತ್ತೇನೆ. ನಮ್ಮ ಸರ್ಕಾರದವರು ಕುಟುಂಬ ಯೋಜನೆ ಕಾರ್ಯಕ್ರಮವನ್ನು ಜಾರಿಗೆ ತಂದು ಪ್ರತಿ ಯೊಂದು ಆರೋಗ್ಯ ಕೇಂದ್ರದ ಡಾಕ್ಟರ್ ಇಷ್ಟು ಕೇಸ್‌ಗಳನ್ನು ಮಾಡಬೇಕೆಂದು ಒಂದು ಟಾರ್‌ಜೆಟ್ ಫಿಕ್ಸ್ ಮಾಡಿದ್ದಾರೆ. ಅದೇ ರೀತಿಯಲ್ಲಿ ಅರಣ್ಯ ಅಧಿಕಾರಿಗಳಿಗೂ ಒಂದು ಟಾರ್‌ಜೆಟ್ಟನ್ನು ಏತಕ್ಕೆ ಫಿಕ್ಸ್ ಮಾಡಬಾರದು ಎಂದು ಕೇಳುತ್ತೇನೆ. 100 ಸಸಿಗಳನ್ನು ನೆಟ್ಟರೆ ಮೂರು ದಿನ ಇರುವುದಿಲ್ಲ, ಮರುದಿನವೇ ಒಣಗಿಹೋಗಿರುತ್ತದೆ. ನೆಟ್ಟ ಸಸಿಗಳು ಸಂಪೂರ್ಣವಾಗಿ ಉಳಿದುಕೊಳ್ಳತಕ್ಕಂಥ ವ್ಯವಸ್ಥೆ ಯನ್ನು ಮಾಡಬೇಕು. ಅವುಗಳಿಗೆ ರಕ್ಷಣೆಯನ್ನು ಒದಗಿಸಿ ನಾಶವಾಗದಂತೆ ನೋಡಿಕೊಳ್ಳಬೇಕು. ಅರಣ್ಯಾಧಿಕಾರಿಗಳು ವ್ಯವಸ್ಥಿತವಾಗಿ ಅರಣ್ಯಾಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನವನ್ನು ಕೊಡದೆ ಅಲಕ್ಷ್ಯತನ ಯಾರು ಹೊಂದಿರುತ್ತಾರೋ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಕೃಷಿ ವ್ಯವಸಾಯದ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶ ಗಳಲ್ಲಿ ಕೃಷಿ ವ್ಯವಸಾಯವನ್ನು ಬಹಳ ಅವಲಂಬಿಸಿದ್ದಾರೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳನ್ನು ಎಲ್ಲೆಲ್ಲಿ ಸ್ಥಾಪನೆ ಮಾಡಲು ಸಾಧ್ಯವೋ ಅಲ್ಲಲ್ಲಿ ಸ್ಥಾಪನೆ ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ಯುವಕರು ನಿರುದ್ಯೋಗಿಗಳಾಗಿದ್ದಾರೆ. ಎಸ್.ಎಸ್.ಎಲ್.ಸಿ. ಪಾಸಾದ ತಕ್ಷಣ ಕೆಲಸ ಕೊಡಿಸಿ ಎಂದು ಕೇಳಿಕೊಂಡು ಬರುತ್ತಾರೆ ಆದ್ದರಿಂದ ಕೃಷಿ ಮನೆತನದಿಂದ ಬಂದ ಯುವಕರಿಗೆ ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಉದಾಹರಣೆಗೆ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಬೆಳೆಯತಕ್ಕಂಥ ಆಯಿಲ್ ಸೀಡ್ಸ್ ಸಂಸ್ಕರಣೆ ಮಾಡತಕ್ಕಂಥ ಕಾರ್ಖಾನೆಯನ್ನು ಮತ್ತು ಹತ್ತಿಯನು ಸ್ಪಿನ್ನಿಂಗ್ ಜಿನ್ನಿಂಗ್ ಮತ್ತು ಪ್ರೆಸಿಂಗ್ ಮಾಡತಕ್ಕಂಥ ಕಾರ್ಖಾನೆಗಳನ್ನು ತೆಗೆಯುವ ಪ್ರಯತ್ನವನ್ನು ಸರ್ಕಾರದವರು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ದನಕರುಗಳ ವಿಚಾರಕ್ಕೆ ಬಂದರೆ, ಅವುಗಳನ್ನು ಕೇಳುವವರೇ ಇಲ್ಲವಾಗಿದೆ. ನಿಮಗೆ ಮಂಗಳೂರು ಫರ್ಟಿಲೈಜರ್ ಮತ್ತು ಎಚ್.ಎಂ.ಟಿ. ಟ್ರ್ಯಾಕ್ಟರ್‌ಗಳು ಇದ್ದರೆ ಸಾಕೇ ? ಎತ್ತುಗಳು ದನಕರುಗಳು ಬೇಡವೇ ? ಇವುಗಳಿಗೆ ನೀರು ಮತ್ತು ಮೇವನ್ನು ಒದಗಿಸುವ ಏರ್ಪಾಡು ಆಗಿಲ್ಲ. ಇವುಗಳನ್ನು ಸಾಕಲು ಶಕ್ತಿ ಇಲ್ಲದವರು ಮಾರಾಟ ಮಾಡುತ್ತಿದ್ದಾರೆ, ಗುಂಡ್ಲುಪೇಟೆ ಚಾಮರಾಜನಗರ, ಎಳಂದೂರು, ತೆರಕಣಾಂಬಿ, ಈ ಸ್ಥಳಗಳಿಂದ ದನಕರುಗಳನ್ನು ಕರೀದಿ ಮಾಡಿದವರು ಕಲ್ಲಿಕೋಟೆ ಮೂಲಕ ಕೇರಳ ರಾಜ್ಯಕ್ಕೆ ಸಾಗಿಸುತ್ತಿದ್ದಾರೆ. ಈ ರೀತಿ ಕಸಾಯಿ ಖಾನೆಗೆ ಹೋಗುವುದನ್ನು ನಿಲ್ಲಿಸಿ, ಅವುಗಳನ್ನು ಕಾಪಾಡಿ ಎಂದು ನಾನು ಯಾವಾಗಲೂ ಹೇಳುತ್ತಿರುತ್ತೇನೆ ಆದರೆ ಇದರ ಕಡೆ ಯಾರೂ ನಿಗಾ ಕೊಡುತ್ತಿಲ್ಲ. ಮಾನ್ಯ ತಿಮ್ಮೇಗೌಡರಿಗೆ ಹೇಳಿದೆ, ಬೇರೆ ಮಂತ್ರಿಗಳಿಗೆ ಹೇಳಿದೆ, ತಮಗೂ ಹೇಳಿದೆ, ಆದರೆ ಯಾವ ವ್ಯವಸ್ಥೆಯನ್ನೂ ಮಾಡಲಿಲ್ಲ. ಯಾರಿಗೂ ಇದರ ಕಡೆ ನಿಗಾನೇ ಇಲ್ಲವೆಂದು ಕಾಣುತ್ತಿದೆ. ಹೋಗುವಷ್ಟು ಹೋಗಲಿ, ಹೋದಷ್ಟೂ ಒಳ್ಳೆಯದೆಂದು ಇವರು ಭಾವಿಸಿಕೊಂಡಿರುವಂತಿದೆ. ಈಗ ನಮ್ಮ ಊರಿನಲ್ಲಿ ದನದ ಮಾಂಸ ಒಂದು ಕೆಜಿಗೆ ಒಂದು ರೂಪಾಯಿ ಆಗಿದೆ, ಎಂಟಾಣೆಗೆ ಸಹ ಸಿಗುತ್ತದೆ. ಎಂಟಾಣೆ ಕೂಡಾ ಜಾಸ್ತಿ ಎಂದು ಹೇಳುವವರೂ ಇದ್ದಾರೆ. ನಮ್ಮ ದನಕರುಗಳ ಪರಿಸ್ಥಿತಿ ಇಲ್ಲಿಗೆ ಬಂದು ಮುಟ್ಟಿದೆ. ಬಂಡಿಪುರ ಅರಣ್ಯದಲ್ಲಿರುವ ಹುಲ್ಲನ್ನು ಮೇಯಲು ಅಧಿಕಾರಿಗಳು ಬಿಡುವುದಿಲ್ಲ ಕಾಡಿನಲ್ಲಿ ಹುಲಿಗಳಿವೆ ಎಂದು ಹೇಳುತ್ತಾರೆ. ಬೇರೆ ಎಲ್ಲಿಂದಲೋ ಮೇವನ್ನು ಸರಬರಾಜು ಮಾಡುತ್ತಾರೆ. ಆದರೆ ಆ ಮೇವನ್ನು ನಮ್ಮ ಭಾಗದ ದನಕರುಗಳು ತಿಂದರೆ ನಾಲಿಗೆ ಒಡೆದು ರಕ್ತ ಸುರಿಯುತ್ತದೆ. ದನಕರುಗಳನ್ನು ಸಾಕಲು ಶಕ್ತಿ ಇಲ್ಲದವರು ಗೋಶಾಲೆಗಳಿಗೆ ತಂದು ಬಿಡಬಹುದೆಂದು ಇವರು ಹೇಳುತ್ತಾರೆ. ಆದರೆ ಅಲ್ಲಿ ನೀರಿನ ವ್ಯವಸ್ಥೆಯೇ ಇಲ್ಲ. ನೀರಿನ ವ್ಯವಸ್ಥೆ ಇಲ್ಲದ ಮೇಲೆ ಗೋಶಾಲೆಗಳನ್ನು ಏತಕ್ಕೆ ತರೆಯಬೇಕು ? ಮುಂಗಾರು ಮತ್ತು ಹಿಂಗಾರು ಎರಡು ಮಳೆಗಳೂ ಹೋದ ಮೇಲೆ ಜನರಿಗೆ ನೀರು ಒದಗಿಸುವುದಿರಲಿ, ಪ್ರಾಣಿಗಳಿಗೆ ನೀರನ್ನು ಒದಗಿಸುವ ಜವಾಬ್ದಾರಿಯನ್ನು ಸಹ ಹೊತ್ತುಕೊಳ್ಳಬೇಕಾದಂಥ ಪರಿಸ್ಥಿತಿ ಬಂದಿದೆ. ಬಂಡೀಪುರ ಕಾಡಿನಲ್ಲಿ ಸರಿಯಾಗಿ ನೀರು ಸಿಗದ ಕಾರಣ ಅಲ್ಲಿನ ಆನೆಗಳು ಮದುಮಲೈ ಕಾಡಿಗೆ ಹೋಗುತ್ತಿವೆ. ಕೆಲವು ಆನೆಗಳು ಹತ್ತಿರದ ಹಳ್ಳಿಗಳಿಗೆ ಹೋಗಿ ಅಲ್ಲಿನ ಬೆಳೆಗಳನ್ನು ನಾಶ ಮಾಡುತ್ತಿವೆ ಮತ್ತು ಜನರನ್ನು ಸಹ ತುಳಿದು ಸಾಯಿಸಿವೆ. ಕುಡಿಯಲು ನೀರು ಇಲ್ಲದ ಕಾರಣ ಬಂಡಿಪುರ ಅರಣ್ಯದಲ್ಲಿದ್ದ ನವಿಲುಗಳು, ಜಿಂಕೆಗಳು ಹಾಗೂ ಇನ್ನಿತರ ಪ್ರಾಣಿಗಳು ಸಾಯುತ್ತಿವೆ. ಈ ಪ್ರಾಣಿಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿ ಯಾರದು ? ಮಂತ್ರಿಗಳು ಬಂಡಿಪುರಕ್ಕೆ ಹೋಗಿ ಹತ್ತುತ್ತು ದಿನಗಳ ಕಾಲ ಕ್ಯಾಂಪ್ ಮಾಡುತ್ತಾರೆ. ಆದರೆ ಅಲ್ಲಿ ಈಗ ನೋಡುವುದು ಏನಿದೆ ? ಜನರ ಅನುಕೂಲಕ್ಕಾಗಿ ದೊಡ್ಡ ದೊಡ್ಡ ಬೋರ್‌ವೆಲ್‌ಗಳನ್ನು ತೆಗೆಸಿ, ಆ ಮೂಲಕ ನೀರಿನ ವ್ಯವಸ್ಥೆಯನ್ನು ಮಾಡುವಂತೆ ಈ ಪ್ರಾಣಿಗಳಿಗೂ ಸಹ ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಇನ್ನು ನಮ್ಮ ತಾಲ್ಲೂಕ್‌ನಲ್ಲಿ ಮಧ್ಯಮ ವರ್ಗದ ಜನರು ಅವರವರ ಮನೆಗಳಲ್ಲಿ ಇದ್ದದ್ದನ್ನು ಊಟ ಮಾಡಿಕೊಂಡು ಮರ್ಯಾದಸ್ಥರಾಗಿ ಜೀವನ ಮಾಡುತ್ತಿದ್ದರು. ಆದರೆ ಕಳೆದ ನಾಲ್ಕು ವರ್ಷಗಳಿಂದ ಸರಿಯಾಗಿ ಮಳೆಬೆಳೆ ಆಗಿಲ್ಲ. ಜಮೀನನ್ನೇ ನಂಬಿಕೊಂಡಿದ್ದ ಈ ಜನರು ಕೂಲಿ ಕೆಲಸಕ್ಕೆ ಬಾಧಿಸುತ್ತದೆ. ಹೋಗಲು ಇಷ್ಟಪಡುವುದಿಲ್ಲ. ಎಕೆಂದರೆ, ಮಾನಮರ್ಯಾದೆ ಎಂಬುದು

೧-೦೦ ಪಿ.ಎಂ.

ಮಧ್ಯಮವರ್ಗದ ಜನರು ಕೂಲಿಗೆ ಹೋಗುವುದಕ್ಕೆ ಮನಸ್ಸು ಬಾರದು. ಕೂಲಿಗೆ ಹೋಗದಿದ್ದರೆ ಅವರಿಗೆ ಊಟವಿಲ್ಲ, ಅದರ ಜೊತೆಗೆ ಅವರುಗಳು ದನಕರುಗಳನ್ನೂ ಇಟ್ಟುಕೊಂಡಿದ್ದಾರೆ. ಈಗಾಗಲೇ ಬಹಳ ದನಕರುಗಳು ಸತ್ತು ಹೋಗಿವೆ. ಬ್ಯಾಂಕಿನಲ್ಲಿ ಅವರು ಮಾಡಿರುವ ಸಾಲ ಸೋಲಕ್ಕೆ ಬ್ಯಾಂಕಿನವರು ಅವರ ಮನೆಯ ಹತ್ತಿರ ಬಂದು ಮಡಿಕೆ, ಕುಡಿಕೆಗಳನ್ನು ಹರಾಜು ಹಾಕುತ್ತೇವೆಂದು ಹೆದರಿಸುತ್ತಿದ್ದಾರೆ ಮಾನ್ಯ ಜಾಲಪ್ಪನವರದು ಒಂದು ಸ್ಟೇಟ್‌ಮೆಂಟ್ ಇರುತ್ತದೆ, ಬ್ಯಾಂಕಿನವರದೇ ಒಂದು ಸ್ಟೇಟ್‌ಮೆಂಟ್ ಇರುತ್ತದೆ. ಬ್ಯಾಂಕ್‌ನವರು ಪೋಲೀಸಿನವರನ್ನು ಕರೆದುಕೊಂಡು ಸಾಲ ಮಾಡಿರುವವರ ಮನೆಗಳ ಹತ್ತಿರ ಹೋದರೆ, ಮಾನಕ್ಕೆ ಜನರು ಹೆದರಿ ಬಾವಿಗೆ ಬಿದ್ದೋ ಅಥವಾ ನೇಣು ಹಾಕಿಕೊಂಡೋ ಸಾಯುತ್ತಾರೆ. ಅಂತಹ ಜನಗಳ ಪಾಡು ಇವತ್ತಿನ ದಿವಸ ಏನು? ಬ್ಯಾಂಕಿನವರು ಅವರುಗಳ ಮಾನವನ್ನು ಹರಾಜು ಹಾಕಿಬಿಡುತ್ತಾರೆ ಅವರನ್ನು ಲೂಟಿ ಮಾಡಿ ಬೀದಿಗೆ ಬಿಡುತ್ತಾರೆ. ಇದಕ್ಕಿಂತ ಮಾನ

ಕೆಗೆಯುವ ಪ್ರಸಂಗ ಇನ್ನೇನಿದೆ? ಮಾನಕ್ಕೆ ಬಡವ, ಶ್ರೀಮಂತ ಎಂದೇನಿಲ್ಲ, ಎಲ್ಲರೂ ಮಾನಕ್ಕೆ ಹೆದರುತ್ತಾರೆ. ಬಹಳ ಜನರು ಬಾವಿಗಳಲ್ಲಿ ತೋಡಿಸಿದ್ದಾರೆ. ಬಾವಿಗಳನ್ನು ನೀರು ಇದೆ. ಆ ನೀರನ್ನು ಹೊರಗೆ ತರಲು ಪಂಪುಸೆಟ್ಟುಗಳನ್ನು ಕೊಂಡು ಕೊಂಡಿದ್ದಾರೆ. ಆದರೆ ಅವರುಗಳಿಗೆ ವಿದ್ಯುಚ್ಛಕ್ತಿಯನ್ನೇ ಕೊಟ್ಟಿಲ್ಲ. ವಿದ್ಯುಚ್ಛಕ್ತಿಯನ್ನು ಕೊಡಿ ಎಂದು ಅವರು ಕೇಳಿದರೆ, ಕಂಬ ಇಲ್ಲ, ಟ್ರಾನ್ಸ್‌ಫಾರ್ಮ ಇಲ್ಲ. ಅದಿಲ್ಲ, ಇದಿಲ್ಲ ಎಂದು ಸಬೂಬು ಹೇಳುತ್ತಾರೆ. ಅವರು ನೀರನ್ನು ಹೊರಕ್ಕೆ ತರಲು ಏನು ಮಾಡಬೇಕು ? ಪಂಪುಸೆಟ್ಟುಗಳನ್ನು ಕೊಂಡುಕೊಳ್ಳಲು ಬ್ಯಾಂಕಿನಿಂದ ಹಣವನ್ನು ಸಾಲ ಮಾಡಿದ್ದಾರೆ, ಈಗ ಬ್ಯಾಂಕಿನವರು ಬಂದು ರೈತರನ್ನು ಸಾಲ ಕೊಡಿ ಎಂದು ಒದೆಯುತ್ತಿದ್ದಾರೆ, ಈ ರೈತರುಗಳ ಕಥೆ ಏನು ? ಇವರ ಕಷ್ಟಕ್ಕೆ ಯಾರು ಆಗುತ್ತಾರೆ ? ಇವರು ಬ್ಯಾಂಕಿನಿಂದ ಪಡೆದ ಹಣವನ್ನು ಕಂತಿನ ಮೂಲಕ ಹೇಗೆ ತೀರಿಸುತ್ತಾರೆ ? ಹೀಗೆ ನಾನಾ ತರಹ ಕಷ್ಟಗಳು ರೈತರನ್ನು ಕಾಡುತ್ತಿವೆ, ಇವರುಗಳು ಬರುವ ವರ್ಷದ ಮಾರ್ಚ್, ಏಪ್ರಿಲ್ ತಿಂಗಳವರೆಗೂ ಹೇಗೆ ಬದುಕಬೇಕೋ ಅದೂ ಗೊತ್ತಾಗುತ್ತಿಲ್ಲ, ಇವರುಗಳಿಗೆ ಸಹಾಯ ಮಾಡುವುದಕ್ಕೆ ಪ್ರೊಸೀಜರ್ ಡಿಫಿಕಲ್ಟೀಸ್ ಇದೆ ಎಂದು ಹೇಳುತ್ತಾರೆ. ಪ್ರೊಸೀಜರ್‌ಗಳನ್ನು ಮಾಡುವವರು ಯಾರು ? ನಾವೇ ಅಲ್ಲವೇ ಪ್ರೊಸೀಜರ್‌ಗಳನ್ನು ತಯಾರು ಮಾಡುವವರು ? ಕಷ್ಟ ಕಾಲದಲ್ಲಿ ಪ್ರೊಸೀಜರ್‌ಗಳನ್ನು ಸ್ವಲ್ಪ ಸಡಿಲ ಮಾಡದೆ ಇದ್ದರೆ ಹೇಗೆ? ಈ ಪ್ರೊಸೀಜರ್‌ಗಳನ್ನು ಸಡಿಲ ಮಾಡುವುದಕ್ಕೆ ಯಾರು ಯಾರಿಗೆ ಏನು ಹೇಳಬೇಕೋ ಅದನ್ನು ಹೇಳಿ ದಯಮಾಡಿ ಪರಿಹಾರ ಕಾರ್ಯಕ್ರಮಗಳನ್ನು ಬೇಗ ಕೈಗೊಂಡು ಜನರಿಗೆ ಅನುಕೂಲ ಮಾಡಬೇಕೆಂದು, ತಮ್ಮಲ್ಲಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಸ್, ಕಡಪಟ್ಟಿ (ಹುನಗುಂದ) —ಮಾನ್ಯ ಅಧ್ಯಕ್ಷರೇ, ಈ ೨೦ನೇ ಶತಮಾನದಲ್ಲಿ ಅತ್ಯಂತ ಭೀಕರ ಬರಗಾಲ, ಅದೂ ಕೂಡ ಕರ್ನಾಟಕ ರಾಜ್ಯದ ಬಹು ಭಾಗದಲ್ಲಿ ಹಬ್ಬಿಕೊಂಡಿದೆ. ಅದರಲ್ಲೂ ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ ಸರಾಸರಿ ೫೭೪ ಮಿಲಿಮೀಟರ್ ಮಳೆಯಾಗುತ್ತಿತ್ತು. ಆದರೆ ಈ ವರ್ಷ ಸರಾಸರಿ ನಮ್ಮ ತಾಲ್ಲೂಕಿನಲ್ಲಿ ೨೯೭ ಮಿಲಿಮೀಟರ್ ಮಾತ್ರ ಮಳೆಯಾಗಿದೆ. ಅದೂ ಕೂಡ ಜೂನ್, ಜುಲೈ ತಿಂಗಳಲ್ಲಿ ಕೇವಲ ೭೦ ಮಿಲಿಮೀಟರ್ ಮಾತ್ರ ಮಳೆಯಾಗಿತ್ತು. ಆಗಸ್ಟ್‌ನಲ್ಲಿ ಮಾತ್ರ ಸ್ವಲ್ಪ ಮಳೆಯಾಗಿತ್ತು. ಹಿಂಗಾರಿ ಬಿತ್ತನೆ ಕಾಲದಲ್ಲಿ ಬಹಳಷ್ಟು ಮಳೆ ಕಡಿಮೆಯಾಗಿದ್ದರಿಂದ ಮುಂಗಾರಿ ಫಸಲು ಮತ್ತು ಹಿಂಗಾರಿ ಫಸಲಿಗೆ ಬಹಳ ತೊಂದರೆಯಾಗಿದೆ. ೯೦ ರಿಂದ ೯೫ ಪರ್ಸೆಂಟ್‌ನಷ್ಟು ಬಿತ್ತನೆಯಾಗಿದ್ದರೂ ನೂರಕ್ಕೆ ೫ ರಷ್ಟು ಬೆಳೆ ಬರುವುದು ದುರ್ಲಭವೆಂದು ಕಾಣುತ್ತದೆ, ೧೯೪೨ನೇ ಇಸವಿಯಲ್ಲಿ ಬಂದಿದ್ದಂತಹ ಭೀಕರ ಬರಗಾಲಕ್ಕಿಂತ ಈ ಸಾರಿ ಬಂದಿರುವ ಬರಗಾಲ ಇನ್ನೂ ಭೀಕರವಾಗಿದೆ. ಬಿಜಾಪುರದಲ್ಲಿರುವ ಗೋಳಗುಮ್ಮಟವು ಜಗತ್ತಿನಲ್ಲೇ ಪ್ರಸಿದ್ಧವಾಗಿದೆ. ಜಗತ್ತಿನಲ್ಲೇ ಪ್ರಸಿದ್ಧವಾದ ಈ ರಾಜ್ಯದಲ್ಲಿ ಯಾವಾಗಲೂ ಬರಗಾಲ ಇದ್ದೇ ಇರುತ್ತದೆ. ಬಿಜಾಪುರವು ೧೫ನೇ ಶತಮಾನದಿಂದಲೂ ಪ್ರತಿ ವರ್ಷವೂ ಬರಗಾಲಕ್ಕೆ ತುತ್ತಾಗುತ್ತಲೇ ಇರುತ್ತದೆ. ದೂರದೃಷ್ಟಿಯಿಂದ ಪರಿಹಾರ ಕೆಲಸಗಳನ್ನು ಮಾಡಿದ್ದರೆ ಈ ಪರಿಸ್ಥಿತಿ ಬರಲಿಕ್ಕಿಲ್ಲ ಎನ್ನುವ ಭಾವನೆ ನನಗೆ ಬರಲಿಕ್ಕೆ ಹತ್ತಿದೆ. ಇನ್ನು ಈ ಬರಗಾಲ ಪರಿಹಾರದ ಬಗ್ಗೆ ಹಾಗೂ ಹಣಕಾಸಿನ ವ್ಯವಸ್ಥೆಯ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ನಿರ್ದಿಷ್ಟವಾದ ಹಾಗೂ ನೇರವಾದ ಆಪಾದನೆಗಳನ್ನು ಮಾಡಲಿಲ್ಲ, ನಂತರ ವಿವರಕ್ಕೆ ಬರುತ್ತೇನೆ, ನಂತರ ವಿವರಕ್ಕೆ ಬರುತ್ತೇನೆ ಎಂದು ಹೇಳಿದರೆ ಉಪಯೋಗಕ್ಕೆ ಬರುವುದಿಲ್ಲ. ನಿರ್ದಿಷ್ಟವಾದ ಉದಾಹರಣೆಗಳನ್ನು ಕೊಟ್ಟು, ನಿಶ್ಚಿತವಾದಂತಹ ಸಲಹೆಗಳನ್ನು, ಯೋಗ್ಯವಾದ ಮತ್ತು ಸೂಕ್ತವಾದ ಸಲಹೆಗಳನ್ನು ಕೊಟ್ಟರೆ ಅವರ ಮಾರ್ಗದರ್ಶನ, ಸಲಹೆಯನ್ನು ಆಚರಣೆಗೆ ತರಲಿಕ್ಕೆ ಅನುಕೂಲವಾಗುತ್ತದೆ. ಅವರ ಸಹಕಾರವೂ ಕೂಡ ಈ ಸಮಯದಲ್ಲಿ ಅತಿ ಅವಶ್ಯ. ಇದೇ ರೀತಿ ನಮ್ಮ ಹಿರಿಯ ಸದಸ್ಯರಾದ ಹಾಗೂ ಅನುಭವಿಕರಾದಂತಹ ಶ್ರೀಮಾನ್ ಕೆ.ಹೆಚ್. ಪಾಟೀಲರು ತಮ್ಮ ಅನುಭವದ ಸಲಹೆಗಳನ್ನು ಕೊಟ್ಟು ಕೆಲಸ ಮಾಡಬೇಕು ಎಂದು ಮಾರ್ಗದರ್ಶನ ಮಾಡುವುದನ್ನು ಬಿಟ್ಟು ಸನ್ಮಾನ್ಯ ಬೊಮ್ಮಾಯಿಯವರ ಮೇಲೆ ಆರೋಪ ಮಾಡಲಿಕ್ಕೆ ಅವರು ತಮ್ಮ ವೇಳೆ ಮತ್ತು ಶ್ರಮವನ್ನು ಖರ್ಚು ಮಾಡಿದ್ದಾರೆ. ಇದನ್ನು ಮಾಡದೇ ಅವರು ತಮ್ಮ ಉತ್ತಮವಾದ ಸಲಹೆಗಳನ್ನು ಕೊಡಬಹುದಾಗಿತ್ತು ಎಂದು ನಾನು ಆಶಯ ಮಾಡುತ್ತೇನೆ. ೧೯೭೨-೭೩ರಲ್ಲಿ ಅಥವಾ ೧೯೮೦ರಲ್ಲಿ ಬಂದಂತಹ ಭೀಕರ ಬರಗಾಲಕ್ಕಿಂತ ಈಗಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ, ಆದುದರಿಂದ ನಮ್ಮ ಹಣಕಾಸಿನ ಮಿತಿಯೊಳಗೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿಕ್ಕೆ

ಹತ್ತಿದ್ದಾರೆ ಎನ್ನುವುದನ್ನು ನಮ್ಮ ಮಿತ್ರರು ಹೇಳಬೇಕಾಗಿದೆ. ಈ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ನಮ್ಮ ನೆರವಿಗೆ ಬಂದು ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡಬೇಕು. ಮಾನ್ಯ ವಿರೋಧಿ ಪಕ್ಷದ ನಾಯಕರು ಮತ್ತು ಶ್ರೀಮಾನ್ ಕೆ.ಹೆಚ್. ಪಾಟೀಲರು ಕೆಲವು ದಿನಗಳ ಹಿಂದೆ ಕೇಂದ್ರದ ಮಂತ್ರಿಯವರಾದ ಶ್ರೀಮಾನ್ ಭೂಟಾಸಿಂಗ್ ಅವರಿಗೆ ಜನತೆಯ ಪರವಾಗಿ ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಸಹಾಯವನ್ನು ಮಾಡಬೇಕೆಂದು ವಿನಂತಿ ಮಾಡಿಕೊಂಡಿದ್ದರು. ಆ ವಿನಂತಿಯನ್ನು ಮಾನ್ಯ ಬೂಟಾಸಿಂಗ್‌ರವರು ಮಾನ್ಯ ಮಾಡಿ ಸಹಾಯವನ್ನು ಮಾಡಿದರೆ ಕರ್ನಾಟಕದ ಜನತೆ ಮಾನ್ಯ ಕೆ.ಹೆಚ್. ಪಾಟೀಲರಿಗೂ ಮತ್ತು ಮಾನ್ಯ ಬೂಟಾಸಿಂಗ್‌ರವರಿಗೂ ಉಪಕೃತರಾಗುತ್ತಾರೆ.

ಇನ್ನು ಗೋಶಾಲೆಯ ಬಗ್ಗೆ ಹೇಳಬೇಕಾದರೆ, ಇಡೀ ರಾಷ್ಟ್ರದಲ್ಲಿ ಪ್ರಪ್ರಥಮವಾಗಿ ಗೋಶಾಲೆಯನ್ನು ಪ್ರಾರಂಭಿಸಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ಯಾವ ರೈತ ದನಕರುಗಳಿಗೆ ಮೇವು ಹಾಕುವುದಕ್ಕೆ ಆಗದೇ ಅವುಗಳನ್ನು ಕಟುಕರಿಗೆ ಮಾರಾಟ ಮಾಡುವ ಪರಿಸ್ಥಿತಿಗೆ ಬಂದಿದ್ದನೋ, ಅಂತಹ ರೈತರುಗಳಿಗೆ ಮತ್ತು ದನಕರುಗಳಿಗೆ ಇಂದು ಕರ್ನಾಟಕ ಸರ್ಕಾರ ಗೋಶಾಲೆಯನ್ನು ಮಾಡಿ ಬಹಳ ಉಪಕಾರವನ್ನು ಮಾಡಿದೆ. ಈ ಗೋಶಾಲೆಯಲ್ಲಿ ಕೆಲವು ನ್ಯೂನತೆಗಳು ಇರಬಹುದು. ಹೊಸದಾಗಿ ಮಾಡಿರುವುದರಿಂದ ಇಂತಹ ನ್ಯೂನತೆಗಳು ಕಾಣುವುದು ಸಾಮಾನ್ಯ. ಕ್ರಮೇಣ ಸರಿಹೋಗುತ್ತದೆ. ಇವುಗಳ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಮಾನ್ಯ ಸದಸ್ಯರುಗಳು ಸಲಹೆಗಳನ್ನು ಕೊಡಬೇಕು. ೧೫ ಎಕರೆ ಮೇಲ್ಪಟ್ಟು ಜಮೀನು ಇರುವ ರೈತನ ದನಕರುಗಳನ್ನು ಗೋಶಾಲೆಗೆ ತೆಗೆದು ಕೊಳ್ಳುವುದು ಬೇಡ ಎಂದು ಸರ್ಕಾರ ಹೇಳಿರುವುದನ್ನು ತೆಗೆದುಹಾಕಿ, ಯಾವ ರೈತನ ಹತ್ತಿರ ದನಕರುಗಳಿಗೆ ಹಾಕಲು ಮೇವು ಇಲ್ಲವೋ ಅಂತಹ ರೈತರ ದನಕರುಗಳನ್ನೂ ಸಹ ಗೋಶಾಲೆಗೆ ಸೇರಿಸಿಕೊಳ್ಳಬೇಕೆಂದು ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದ್ದಾರೆ. ಇದು ಬಹಳ ಉತ್ತಮವಾದ ಸಲಹೆಯಾಗಿದೆ. ಇದನ್ನು ಸರ್ಕಾರವು ಒಪ್ಪಿಕೊಂಡು ೧೫ ಎಕರೆ ಎಂದು ನಿಗದಿ ಮಾಡಿರುವ ನಿಯಮವನ್ನು ತೆಗೆದುಹಾಕಿ ಅನುಕೂಲ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಇನ್ನು ನಮ್ಮ ತಾಲ್ಲೂಕಿನ ರಾಮಟಾಳದಲ್ಲಿ ಒಂದು ಗೋಶಾಲೆಯನ್ನು ಮಾಡಿದ್ದಾರೆ. ಇಲ್ಲಿ ಮೇವಿನ ಸಂಗ್ರಹಣೆ ಬಹಳ ಕಡಿಮೆ ಇದೆ. ಇನ್ನು ಹತ್ತು ದಿವಸಗಳಿಗೆ ಮಾತ್ರ ಆಗುವಷ್ಟು ಮೇವು ಇದೆ. ಈ ಗೋಶಾಲೆಗೆ ಕಾರವಾರ ಜಿಲ್ಲೆಯಿಂದ ಹುಲ್ಲನ್ನು ತರುತ್ತಿದ್ದಾರೆ. ದನಕರುಗಳಿಗೆ ಸಾಕಾಗುವಷ್ಟು ಮೇವನ್ನು ಸರಬರಾಜು ಮಾಡಬೇಕು.

ಮೇವಿನ ಬರ ಇರುವಂತಹ ಕಡೆಗಳಲ್ಲಿ ಹೆಚ್ಚು ಮೇವನ್ನು ಸರಬರಾಜು ಮಾಡಬೇಕು. ಪಂಜಾಬ್ ಮತ್ತಿತರ ಕಡೆಗಳಿಂದ ಬರುವಂತಹ ಮೇವನ್ನು ನಿಕೃಷ್ಟವಾದಂತಹ ಪರಿಸ್ಥಿತಿಯಲ್ಲಿರುವ ಗೋಶಾಲೆಗಳಿಗೆ ತುರ್ತಾಗಿ ಕಳುಹಿಸುವ ಏರ್ಪಾಡು ಮಾಡಬೇಕು.

ಇನ್ನು ಕೇಂದ್ರ ಸರಕಾರದ ಸಹಾಯದ ಬಗ್ಗೆ ಪಿ.ಎ.ಸಿ. ಸಮಿತಿಯವರು ಕೂಡಾ ಶಿಫಾರಸ್ಸು ಮಾಡಿದ್ದಾರೆ. ಆ ರೀತಿಯಲ್ಲಿ ಕೇಂದ್ರ ಸರಕಾರದವರು ಈ ತರಹ ೩ ಅಥವಾ ೪ ವರ್ಷಗಳ ಕಾಲ ಬರಗಾಲ ಬರತಕ್ಕಂತಹ ಪ್ರದೇಶಗಳಿಗೆ ಅಡ್ವಾನ್ಸ್ ಪ್ಲಾನ್ ಮನಿ ಹಣವನ್ನು ಕೊಡುವ ಬದಲು, ನಾನ್ ಪ್ಲಾನ್‌ನಲ್ಲಿ ಹಣವನ್ನು ಕೊಡಬೇಕು. ಅಂತಹ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು. ಅದಕ್ಕೆ ೫ ಪರ್ಸೆಂಟ್ ಸೀಲಿಂಗ್ ಕೂಡಾ ಇರತಕ್ಕದ್ದಲ್ಲ. ಫ್ಲಡ್ ಸಿವಿಯರ್ ನ್ಯಾಚುರಲ್ ಕೆಲಾಮಿಟೀಸ್, ಏನು ಬರುತ್ತದೆ ಅದೇ ರೀತಿಯಲ್ಲಿ ಇದನ್ನೂ ಕೂಡಾ ಸಿವಿಯರ್ ಡ್ರಾಟ್ ಎಂದು ಪರಿಗಣಿಸಿ ಕೇಂದ್ರ ಸರಕಾರ ಮುಕ್ತ ಹಸ್ತದಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ರಾಜ್ಯ ಸರಕಾರಕ್ಕೆ ಇಂತಹ ನಿಕೃಷ್ಟ ಪರಿಸ್ಥಿತಿಯಲ್ಲಿ ಸಹಾಯ ಮಾಡಬೇಕು, ಈ ಸದನ, ಆ ಬಗ್ಗೆ ಕೇಂದ್ರ ಸರಕಾರವನ್ನು ವಿನಂತಿ ಮಾಡಿಕೊಂಡರೂ ಅಡ್ಡಿ ಇಲ್ಲ. ಈ ವಿಷಯದಲ್ಲಿ ವಿರೋಧಪಕ್ಷದ ಸಹೋದರರು ಕೂಡಾ ಸಹಕಾರ ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೆಯೇ ಮಾನ್ಯ ವಿರೋಧ ಪಕ್ಷದ ನಾಯಕರು ಈ ಸರಕಾರ ಸಂಪನ್ಮೂಲ ಕ್ರೋಡೀಕರಣದ ವಿಷಯದಲ್ಲಿ ಹಿಂದೆ ಬಿದ್ದಿದೆ ಎಂದು ಹೇಳಿದ್ದಾರೆ. ಮಾನ್ಯರು ಅಂಕಿಅಂಶಗಳನ್ನು ನೋಡಿ ಹೇಳಿದ್ದಾರೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ೧೯೮೩ನೇ ಇಸವಿಯಿಂದ ಕರ್ನಾಟಕ ರಾಜ್ಯವು ಸಂಪನ್ಮೂಲಗಳ ಕ್ರೋಢೀಕರಣ ಮಾಡುತ್ತಾ ಇರುವುದನ್ನು ಪ್ಲಾನಿಂಗ್ ಕಮಿಶನ್‌ರವರ ವರದಿಯನ್ನು ನೋಡಿದರೆ ಅರ್ಥವಾಗುತ್ತದೆ.

ಇನ್ನು ಕುಡಿಯುವ ನೀರಿನ ಬಗ್ಗೆ ನಮ್ಮ ಸರಕಾರದವರು ಕೇಂದ್ರ ಸರಕಾರದವರೊಡನೆ ವಿಚಾರ ವಿಮರ್ಶೆ ಮಾಡಿ ಒಂದು ಯೋಜನೆಯನ್ನು ತಯಾರು ಮಾಡಬೇಕು. ಅದನ್ನು ಮಿನಿವಾಟರ್ ಸಪ್ಲೈಗೆ

ಉಪಯೋಗಿಸಿಕೊಳ್ಳಬಹುದು. ನೀರಿನ ವಿಚಾರದಲ್ಲಿ ನವಂಗೆ ಇರುವ ಕಷ್ಟಪರಿಸ್ಥಿತಿಯನ್ನು ಅವರಿಗೆ ಚನ್ನಾಗಿ ವಿವರಿಸಿ ನಮ್ಮ ಕಷ್ಟವನ್ನು ಹೋಗಲಾಡಿಸುವಲ್ಲಿ ಅವರ ನೆರವನ್ನು ಪಡೆಯಲು ಪ್ರಯತ್ನ ಮಾಡಬೇಕು. ಈ ದಿಶೆಯಲ್ಲಿ ನಮ್ಮ ಮುಖ್ಯಮಂತ್ರಿಗಳವರು ಪ್ರಯತ್ನಪಟ್ಟು ಯಶಸ್ವಿಯಾಗಿ ಕೆಲಸ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಬಿಜಾಪುರ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಬಿಜಾಪುರ ಜಿಲ್ಲೆಯಲ್ಲಿ ನಾಲ್ಕು ನದಿಗಳು ಹರಿಯುತ್ತಿದ್ದರೂ ಕೂಡಾ ಅದರ ಸೂಕ್ತ ಬಳಕೆಯಾಗಲಿಲ್ಲ. ನೀರಾವರಿ ವಿಚಾರದಲ್ಲಿ ಜಮಖಂಡಿ, ಮುಧೋಳಗಳ ಹಾಗೂ ಮತ್ತಿತರ ಕೆಲವೇ ಭಾಗಗಳನ್ನು ಬಿಟ್ಟರೆ ಬೇರೆ ಕಡೆಗಳಲ್ಲಿ ಅಂತಹ ಅಭಿವೃದ್ಧಿ ಏನೂ ಆಗಲಿಲ್ಲ. ಈ ರೀತಿಯಾಗುವುದಕ್ಕೆ ಯಾರು ಹೊಣೆ ಎನ್ನುವುದಕ್ಕಿಂತಲೂ, ಈಗ ಜನತೆ ನಮ್ಮ ಸರಕಾರಕ್ಕೆ ಏನು ಹೊಣೆಯನ್ನು ಕೊಟ್ಟಿದ್ದಾರೆ ಅದರ ನಿರ್ವಹಣೆಯನ್ನು ಯೋಗ್ಯ ರೀತಿಯಲ್ಲಿ ಮಾಡಬೇಕು, ಅದರ ಪ್ರಕಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳೋಣ. ಒಂದು ವೇಳೆ ನಾವು ಜನತೆಗೆ ಅನುಕೂಲತೆಗಳನ್ನು, ಸೂಕ್ತ ರೀತಿಯಲ್ಲಿ ಯೋಗ್ಯ ವೇಳೆಯಲ್ಲಿ ಮಾಡಿಕೊಡದಿದ್ದಲ್ಲಿ ಜನತೆ ನಮ್ಮನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳುವುದಿಲ್ಲ. ಮುಂದೆ ನಮ್ಮನ್ನು ಬೆಂಬಲಿಸುವುದು ಕಷ್ಟವಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಬಿಜಾಪುರ ಜಿಲ್ಲೆಯಲ್ಲಿ ನೀರಾವರಿಯ ವ್ಯವಸ್ಥೆಯನ್ನು ಮಾಡುವ ವಿಚಾರದಲ್ಲಿ ಶೀಘ್ರ ಗಮನಹರಿಸಿ, ಒಂದು ಶಾಶ್ವತ ಪರಿಹಾರವನ್ನು ಈ ಬಗ್ಗೆ ಕಂಡುಕೊಳ್ಳಲು ಒಂದು ದಿಟ್ಟ ನಿರ್ಣಯವನ್ನು ನಿಲುವನ್ನು ಈ ಸದನದಲ್ಲಿ ತೆಗೆದುಕೊಳ್ಳಬೇಕೆಂದು ನನ್ನ ಪ್ರಾರ್ಥನೆ. ಏಕೆಂದರೆ ಆ ಜಿಲ್ಲೆಯು ನೀರಾವರಿಯ ಅಭಾವದಿಂದಾಗಿ ಕಷ್ಟಪರಿಸ್ಥಿತಿಯನ್ನು ಎದುರಿಸುತ್ತಿದೆ. ಅಲ್ಲಿ ಕಷ್ಟಪರಿಸ್ಥಿತಿಯು ಬಂದಾಗಲೆಲ್ಲಾ ೧೯೫೬ ರಿಂದ ಅಥವಾ ಅದಕ್ಕಿಂತಲೂ ಮುಂಚೆ ಬರಗಾಲ ಬಂದಾಗ, ದಾರಿ ಮಾಡುವ ಕೆಲಸ ಮಾಡಿಸುವುದು, ಮಣ್ಣು ಹಾಕಿಸುವ ಕೆಲಸ ಮಾಡಿಸುವುದು ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. You should put an end for such things, and we should do some concrete works which will help the people of the chronically drought affected areas-permanently and we should solve the problems once for all—ಈ ಸದನ ಈಗಿಂದಲೇ, ನಿರ್ಧಾರ ಮಾಡಿದೆ. ಕೆಲವಷ್ಟು ಹಣವನ್ನು ಕಾಲುವೆ ತೋಡಲಿಕ್ಕೆ ಬಿಡುಗಡೆ ಮಾಡಿದೆ. ಇದು ಒಳ್ಳೆಯ ಕಾರ್ಯ ಇಂತಹದ್ದನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಮಾಡಬೇಕು. ಈ ಸಂದರ್ಭದಲ್ಲಿ ಬಿಜಾಪುರದಲ್ಲಿ ಘಟಪ್ರಭ, ಮಲಪ್ರಭ, ಯು.ಕೆ.ಪಿ, ಆಲಮಟ್ಟಿ ಬಲ ಮತ್ತು ಎಡದಂಡೆ ಕಾಲುವೆ, ಇಂಡಿಬ್ರಾಂಚ್, ರಾಮತಾಲ್, ಇಲ್ಲಿಯ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದರೆ ಅಲ್ಲಿಯ ಜನರು ಚಾಪೆ ಕೊಟ್ಟರೂ ಸಾಕು ಬಂದು ಕೆಲಸ ಮಾಡುತ್ತಾರೆ. ಈ ಕೆಲಸವನ್ನು ಕೈಗೊಂಡು ನಾಲ್ಕು ವರ್ಷಗಳಲ್ಲಿ ಆಗುವುದನ್ನು ಎರಡು ವರ್ಷಗಳಲ್ಲಿ ಮಾಡುವುದಕ್ಕೆ ತಯಾರಾಗಿದ್ದಾರೆ. ಹೀಗೆ ಮಾಡಿದರೆ ಮುಂದೆ ಬರತಕ್ಕಂತಹ ಅನಾಹುತವನ್ನು ತಪ್ಪಿಸಲಿಕ್ಕೆ ತೊಂದರೆಯಾಗುವುದಿಲ್ಲ. ಆದುದರಿಂದ ಮಾನ್ಯ ನೀರಾವರಿ ಸಚಿವರು ದಯವಿಟ್ಟು ಈ ಕೆಲಸಗಳನ್ನು ಮಾಡಬೇಕು.

ಇನ್ನು ಮಾನ್ಯ ಕೆ. ಹೆಚ್. ಪಾಟೀಲರವರು ಸಾಯಿಲ್ ಕನ್‌ಸರ್ವೇಶನ್ ಬಗ್ಗೆ ಹೇಳಿದರು. ಅದನ್ನು ಮಾಡಬೇಕು, ಆದರೆ ಕೆ. ಹೆಚ್. ಪಾಟೀಲರವರು ಹಿಂದೆ ಮಾಡಿದ್ದು ಈಗ ಆಗುವುದಿಲ್ಲ. ಕಪ್ಪು ಭೂಮಿ ಅಲ್ಲಿ ಒಂದೂ ಉಳಿದಿಲ್ಲ. ಅಲ್ಲಿ ಬ್ರಾಡ್ ಬೇಸ್ಡ್ ಬಂಡಿಂಗ್ ವ್ಯವಸ್ಥೆ ಆಗಬೇಕು. ಕಪ್ಪುಭೂಮಿಗೆ ಎರೆಮಣ್ಣನ್ನು ಕೊಟ್ಟರೆ ಮಾತ್ರ ಒಡ್ಡು ಉಳಿಯುತ್ತದೆ ಹೊರಗಚ್ಚಿಗೆ ನೀರಿನ ಪ್ರಮಾಣವನ್ನು ನೋಡಿ ಆ ಕೆಲಸವನ್ನು ಸೂಕ್ತ ರೀತಿಯಲ್ಲಿ ಮಾಡಿಸಬೇಕು. ಸರಕಾರ ಅಧಿಕಾರಿಗಳಿಗೆ ಈ ಕೆಲಸವನ್ನು ಯೋಗ್ಯ ರೀತಿಯಲ್ಲಿ ಮಾಡುವಂತೆ ಆದೇಶ ಕೊಡಬೇಕು. ಒಟ್ಟಿನಲ್ಲಿ ರೈತರಿಗೆ ಅನುಕೂಲ ಮಾಡಿಕೊಟ್ಟು ಅವರ ಕಷ್ಟಪರಿಸ್ಥಿತಿಯನ್ನು ತಪ್ಪಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲರವರು ಮುಂದಿನ ವರ್ಷದ ಬೀಜಗಳ ಪೂರೈಕೆಯ ಬಗ್ಗೆ ಈಗಲೇ ವ್ಯವಸ್ಥೆ ಮಾಡಬೇಕೆಂದು ಹೇಳಿದರು. ಇದು ಬಹಳ ಉತ್ತಮವಾದ ಸಲಹೆಯಾಗಿದೆ. ಒಕ್ಕಲುತನ ಇಲಾಖೆಯವರು ಈ ಕುರಿತು ಈಗಿನಿಂದಲೇ ವಿಚಾರ ಮಾಡಬೇಕು. ಆದರೆ ಈ ಹಿಂದೆ ಮಾನ್ಯ ಕೆ. ಹೆಚ್. ಪಾಟೀಲರವರು ಕೊಟ್ಟಂತಹ ಬೀಜಗಳನ್ನು ಕೊಡಬಾರದು. ಒಳ್ಳೆಯ ಉತ್ತಮ ತರಹದ ಬೀಜಗಳನ್ನು ಕೊಡಬೇಕು. ಬೀಜಗಳ ಗುಣಮಟ್ಟವನ್ನು ಪರೀಕ್ಷೆ ಮಾಡಿ ಉತ್ತಮ ತರಹದ ಬೀಜವನ್ನು

ಮಾತ್ರ ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕು. ಬರಗಾಲ ಪರಿಸ್ಥಿತಿಯು ಕಾಮಗಾರಿಗಳಿಗೆ ಹಣವನ್ನು ಬಿಡುಗಡೆ ಮಾಡುವಾಗ ಯಾವ ಜಿಲ್ಲೆಯಲ್ಲಿ ಯಾವ ತಾಲ್ಲೂಕಿನಲ್ಲಿ ತುಂಬಾ ನಿಕೃಷ್ಟ ಪರಿಸ್ಥಿತಿ ಇದೆ ಎಂಬುದನ್ನು ನೋಡಿಕೊಂಡು ಹಣವನ್ನು ಬಿಡುಗಡೆ ಮಾಡಲಿಕ್ಕೆ ವ್ಯವಸ್ಥೆ ಮಾಡಬೇಕು.

ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ನನ್ನ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ, ಮಾನ್ಯ ನಜೀರ್‌ಸಾಬ್‌ರವರು ತುಂಬಾ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡಿಸಿದ್ದಾರೆ. ಆದರೂ ಕೂಡಾ ಅವರ ಇಲಾಖೆಗೆ ಬರುವಂತಹ ಅಮೀನಗಡ, ಸೂಳೆಭಾವಿ, ಇನ್ನಿತರ ಗ್ರಾಮಗಳು ಮತ್ತು ಇಲಕಲ್, ಹುನಗುಂದ ಮುಂತಾದ ನಗರ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಉತ್ತಮವಾಗಿ ಮಾಡಬೇಕಾಗಿದೆ. ಇಂತಹ ವಿಚಾರಗಳ ಬಗ್ಗೆ ಸರಕಾರ ತೀವ್ರ ಗಮನವನ್ನು ಹರಿಸಿ ಒಳ್ಳೆಯ ಕಾರ್ಯಗಳನ್ನು ಮಾಡಲಿಕ್ಕೆ ಹೆಚ್ಚು ಪ್ರಯತ್ನ ಮಾಡಬೇಕು. ಜನರ ಬವಣೆಯನ್ನು ನಿವಾರಣೆ ಮಾಡಲಿಕ್ಕೆ ಸಾಕಷ್ಟು ಪ್ರಯತ್ನ ಮಾಡಬೇಕು. ಈ ಬರಗಾಲ ನಮ್ಮ ಪಕ್ಷಕ್ಕೆ ಸರಕಾರಕ್ಕೆ ಒಂದು ಸತ್ವಪರೀಕ್ಷೆಯ ಕಾಲವಾಗಿದೆ, ಈ ವಿಷಯದಲ್ಲಿ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ ನಮ್ಮನ್ನು ದೇವರೆ ಕಾಪಾಡ ಬೇಕು, ದೇವರು ನಮಗೆ ಒಳ್ಳೆಯ ಬುದ್ಧಿಯನ್ನು ಕೊಟ್ಟು ಒಳ್ಳೆಯ ಕೆಲಸವನ್ನು ಮಾಡಿಸಿಕೊಳ್ಳ ಬೇಕು. ಹಾಗೆಯೇ ನಮಗೆ ಬಂದಿರತಕ್ಕಂತಹ ಕಷ್ಟಗಳನ್ನು ಬೇಗನೆ ಪರಿಹರಿಸಲಿ ಎಂದು ಒಳ್ಳೆಯ ಮಾತನ್ನು ಹೇಳಿದ್ದಾರೆ. ನಾವು ಯಾವಾಗಲೂ ದೇವರ ಮೇಲೆ ನಂಬಿಕೆ ಇಡತಕ್ಕಂತಹ ಜನ. ದೇವರನ್ನು ನಂಬಿ ಒಳ್ಳೆಯ ಕೆಲಸವನ್ನು ನಾವು ಮಾಡುತ್ತಾ ಇದ್ದೇವೆ. ಆದು ಎಲ್ಲರಿಗೂ ಗೊತ್ತಿರಬಹುದು ಎಂದು ನಾನು ನಂಬಿದ್ದೇನೆ.

ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆಯ ದಿವಸ ಹೇಳಿದರು ಏನೆಂದರೆ ನಾನು ಕೇಂದ್ರ ಸರ್ಕಾರದ ಪ್ರತಿಯೊಬ್ಬ ಮಂತ್ರಿಗಳ ಮನೆಯ ಬಾಗಿಲಿಗೆ ಹೋಗಿ ನಮ್ಮ ರಾಜ್ಯಕ್ಕೆ ಸಹಾಯ ಮಾಡಿ ಎಂದು ಬೇಕಾದರೆ ಕೇಳುವುದಕ್ಕೆ ತಯಾರಾಗಿದ್ದೇನೆ ಎಂದು. ಆ ರೀತಿ ಕೇಳಿದ ಮೇಲೆಯೂ ಸಹ ಕೇಂದ್ರ ಸರ್ಕಾರದವರು ನಮಗೆ ಸಹಾಯ ಮಾಡದಿದ್ದರೆ ನನ್ನನ್ನು ಗಲ್ಲಿಗೆ ಹಾಕಿದರೂ ಸಹ ನಾನು ಓವರ್ ಡ್ರಾಫ್ಟ್ ಮಾಡುತ್ತೇನೆಂದು ಸಹ ಹೇಳಿದರು. ಈ ರೀತಿಯ ಮಾತನ್ನು ಯಾವ ಮುಖ್ಯಮಂತ್ರಿಯೂ ಹೇಳುವುದಿಲ್ಲ. ಅಷ್ಟು ಧೈರ್ಯದಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು ಬರೀ ಪ್ರಚಾರಕ್ಕೆ ಭಾಷಣ ಮಾಡುವುದಲ್ಲ ನಾಯಕರಾಗಿರುವಂತ ಹವರು ಘನತೆಯನ್ನು ಕಾಪಾಡಿಕೊಳ್ಳತಕ್ಕಂಥವರು ಈ ರೀತಿ ಭಾಷಣ ಮಾಡುವುದು ಸರಿಯಲ್ಲ ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳಿಗೆ ನಾನು ನಮ್ಮ ರಾಜ್ಯದ ಪರವಾಗಿ ನಮ್ಮ ರಾಜ್ಯದ ಜನತೆಯ ಪರ ವಾಗಿ ನಮ್ಮ ರಾಜ್ಯದಲ್ಲಿ ತಲೆದೋರಿರತಕ್ಕಂಥ ಬರಗಾಲ ಪರಿಸ್ಥಿತಿಯ ಬಗ್ಗೆ ಸಹಾನುಭೂತಿಯಿಂದ ವಿಚಾರ ಮಾಡಿ ಎಂದು ಒಂದು ಪತ್ರವನ್ನು ಬರೆದಿದ್ದೆ. ಆ ಪತ್ರದಲ್ಲಿ ಏನು ಬರೆದಿದ್ದೆ ಎಂದರೆ ಎಲ್ಲಿ ಜನ ಬರಗಾಲಕ್ಕೆ ತುತ್ತಾಗಿದ್ದಾರೆ ಅಂತಹ ಜಿಲ್ಲೆಗಳಿಗೆ ಕೇಂದ್ರ ಸರ್ಕಾರದಿಂದ ಸ್ಪೆಷಲ್ ಅಸಿಸ್ಟೆನ್ಸ್ ಕೊಡಿ ಎಂದು ಆ ಪತ್ರಕ್ಕೆ ಮಾನ್ಯ ಪ್ರಧಾನ ಮಂತ್ರಿಗಳು ಉತ್ತರ ಬರೆಯುವ ಸೌಜನ್ಯವನ್ನೂ ಸಹ ನನಗೆ ತೋರಿಸ ಲಿಲ್ಲ, ಆದರೂ ಇವತ್ತು ನಾವು ಎದುರಿಸುತ್ತಿರುವ ಬರಗಾಲ ಪರಿಸ್ಥಿತಿಯನ್ನು ನಿವಾರಣೆ ಮಾಡಲು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ವಿರೋಧಪಕ್ಷದ ನಾಯಕರು ಹಾಗೂ ಲೋಕಸಭಾ ಸದಸ್ಯರು ಒಮ್ಮನಸ್ಸಿನಿಂದ ಕೆಲಸ ಮಾಡಲು ತಮ್ಮ ಸಹಕಾರವನ್ನು ಕೊಡುತ್ತಾರೆಂದು ಆಶಿಸಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತು ಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮಕೃಷ್ಣ (ಕಮಲಾಪುರ).—ಸನ್ಮಾನ್ಯ ಅಧ್ಯಕ್ಷರೇ ಈ ಬರಗಾಲದ ಮೇಲೆ ಇದುವರೆವಿಗು ಸುಮಾರು ಜನ ಮಾನ್ಯ ಸದಸ್ಯರು ಮೂರು ದಿವಸಗಳಿಂದ ಚರ್ಚೆಯನ್ನು ಮಾಡುತ್ತಿದ್ದಾರೆ ಸರ್ವೇ ಸಾಧಾರಣವಾಗಿ ಈ ಪಂಕ್ತಿಯಲ್ಲಿ ಕುಳಿತುಕೊಂಡಿರತಕ್ಕಂಥ ಜನ ಮತ್ತು ಆಳುವ ಪಂಕ್ತಿಯಲ್ಲಿ ಕುಳಿತು ಕೊಂಡಿರತಕ್ಕಂಥ ಸದಸ್ಯರು ಮಾತನಾಡುತ್ತಾ ರಾಜ್ಯದಲ್ಲಿ ಭೀಕರವಾದ ಬರಗಾಲ ಇದೆ ಎಂದು ಪ್ರಸ್ತಾಪ ಮಾಡಿದ್ದಾರೆ ಈ ರೀತಿ ಪ್ರಸ್ತಾಪ ಮಾಡುವಂತಹ ಕಾಲದಲ್ಲಿ ಆಳುವ ಪಂಕ್ತಿಯಲ್ಲಿ ಕುಳಿತುಕೊಂಡಿರು ವಂತಹ ಮಾನ್ಯ ಸದಸ್ಯರು ಕೆಲವರು ಮಾತನಾಡುತ್ತಾ ನಮ್ಮ ಸರ್ಕಾರ ಈ ಬರಗಾಲ ನಿವಾರಣೆಯ ಸಲುವಾಗಿ ಎಲ್ಲಾ ಜಿಲ್ಲೆಗಳಲ್ಲಿ ಉತ್ತಮವಾದಂಥ ಕೆಲಸಕಾರ್ಯಗಳನ್ನು ಮಾಡಿದೆ ಎಂದು ಹೇಳಿದರು ಆದರೆ ಇದೇ ರೀತಿಯ ಬರಗಾಲದಲ್ಲಿ ಹಿಂದಿನ ಸರ್ಕಾರವಿದ್ದಾಗ ಇಷ್ಟು ಕೆಲಸಕಾರ್ಯಗಳನ್ನು

ಆ ಸರ್ಕಾರ ಮಾಡಲಿಲ್ಲವೆಂದೂ ಸಹ ಹೇಳಿದರು ಅದನ್ನು ಸಹ ನಾವು ಒಪ್ಪಿಕೊಳ್ಳೋಣ. ಹಿಂದಿನ ಸರ್ಕಾರ ಸುಮಾರು ೩೫ ವರ್ಷಗಳಿಂದ ಈ ರಾಜ್ಯದ ರಾಜ್ಯಭಾರವನ್ನು ಮಾಡಿಕೊಂಡು ಬಂದಿತು. ಆದರೆ ಚುನಾವಣೆಗಳು ಬಂದಾಗ ಹೊಸ ಸರ್ಕಾರವನ್ನು ಈ ರಾಜ್ಯದಲ್ಲಿ ಆಡಳಿತಕ್ಕೆ ತರಬೇಕೆನ್ನುವ ದೃಷ್ಟಿಯಿಂದ ಆಲದ ಮರದಂತೆ ಬೆಳೆದುಕೊಂಡಿದ್ದ ಕಾಂಗ್ರೆಸ್ ಪಕ್ಷವನ್ನು ಕೊಡಲಿ ಪೆಟ್ಟಿನಿಂದ ಹೊಡೆದು ಜನತಾ ಪಕ್ಷದ ಸರ್ಕಾರವನ್ನು ಆಡಳಿತಕ್ಕೆ ತಂದು ತನ್ನ ಸರ್ಕಾರವನ್ನು ಮೊಟ್ಟಮೊದಲ ಬಾರಿಗೆ ಈ ರಾಜ್ಯದಲ್ಲಿ ರಚನೆ ಮಾಡುವ ಅವಕಾಶವನ್ನು ಜನತೆ ಮಾಡಿಕೊಟ್ಟರು. ಈ ಜನತಾ ಪಕ್ಷ ಇನ್ನೂ ಕೂಸು ಆದರೆ ಜನ ಈ ಆಲದ ಮರದಂತೆ ಬೆಳೆದು ನಿಂತಿದ್ದ ಕಾಂಗ್ರೆಸ್ ಸರ್ಕಾರವನ್ನು ಕೊಡಲಿ ಪೆಟ್ಟಿನಿಂದ ಒಡೆದು ಎಳೆಯ ಕೂಸಿನಂತಿರುವ ಜನತಾ ಪಕ್ಷದ ಕೈಗೆ ಅಧಿಕಾರವನ್ನು ಕೊಟ್ಟರು. ಆದರೆ ಈಗ ಜನ ತಮ್ಮ ಸರ್ಕಾರದ ಮೇಲೆ ರೊಚ್ಚಿಗೆದ್ದಿದ್ದಾರೆ ಈ ಎಳೆಯ ಕೂಸನ್ನು ಬೇಕಾದರೆ ಜನ ಎಡಗೈನಿಂದ ಕಿತ್ತು ಹಾಕಬಹುದು ಅಥವಾ ತಮ್ಮ ಎಡಗೈನಿಂದ ಚಿವುಟಿ ಹಾಕಬಹುದು ಒಂದು ಸಾರಿ ಚಿವುಟಿ ಹಾಕಿದ ಮೇಲೆ ಮತ್ತೆ ಆ ಪಕ್ಷ ಬೆಳೆಯುವ ಸಾಧ್ಯತೆ ಇಲ್ಲ ಆದರೆ ಕಾಂಗ್ರೆಸ್ ಪಕ್ಷ ಆಲದ ಮರದಂತೆ ಬೆಳೆದುಕೊಂಡಿರುವುದರಿಂದ ಕೊಡಲಿ ಪೆಟ್ಟಿನಿಂದ ಒಡೆದು ಹಾಕಿದ್ದರೂ ಸಹ ಮತ್ತೆ ಬೆಳೆಸಬಹುದು. ಆ ಪಕ್ಷವನ್ನು ಮುಂದಿನ ಸಾರಿ ಬೆಳಸೇ ಬೆಳಸುತ್ತಾರೆನ್ನುವ ವಿಶ್ವಾಸ ನನಗೆ ಇದೆ ನೀವು ಏನು ಕೆಲಸ ಮಾಡುತ್ತಿದ್ದೀರಿ ಎನ್ನುವುದನ್ನು ಜನ ಈಗಾಗಲೇ ನೋಡುತ್ತಿದ್ದಾರೆ. ರಾಜ್ಯದಲ್ಲಿ ಭೀಕರವಾದಂಥ ಬರಗಾಲ ಪರಿಸ್ಥಿತಿ ಇದೆ ಎಂದು ವಿರೋಧಪಕ್ಷದ ಸದಸ್ಯರು ಹೇಳುವಾಗ ಅದಕ್ಕೆ ತಕ್ಕಂಥ ಸಮರ್ಪಕವಾದ ಉತ್ತರವನ್ನು ನೀವು ಕೊಡದೆ ಬರೀ ರಾಜಕೀಯ ಭಾಷಣ ಮಾಡುವುದು ಸರಿಯಲ್ಲ ವಿರೋಧಪಕ್ಷದ ಸದಸ್ಯರು ಹೇಳುವುದನ್ನು ತಾವು ಅಷ್ಟು ಲಘುವಾಗಿ ತೆಗೆದುಕೊಳ್ಳುವುದು ಸರಿಯಲ್ಲ ತಾವೇನು ಕೆಲಸಕಾರ್ಯಗಳನ್ನು ಮಾಡಿದ್ದೀರಿ ಎಂಬುದು ಇನ್ನೆರಡು ತಿಂಗಳಲ್ಲಿ ಗೊತ್ತಾಗುತ್ತದೆ. ಇನ್ನು ಮುಂದೆ ತಾವು ಹಳ್ಳಿಗಳಿಗೆ ಹೋಗುವುದೇ ಕಷ್ಟದ ಪರಿಸ್ಥಿತಿ ಇದೆ ಎಲ್ಲಾ ಕಡೆ ಕೊಳವೆ ಬಾವಿಗಳನ್ನು ಹಾಕಿದ್ದೇವೆಂದು ಹೇಳಿದ್ದೀರಿ ಆದರೆ ಸಮರ್ಪಕವಾಗಿ ಎಲ್ಲಾ ಕಡೆ ಆ ಕೆಲಸ ನಡೆದಿಲ್ಲ

ಅಧ್ಯಕ್ಷರು.— ಈಗ ಮುಂದೆ ಏನು ಮಾಡಬೇಕೆನ್ನುವ ಬಗ್ಗೆ ತಾವು ಸಲಹೆ ಕೊಡಿ.

ಶ್ರೀ ಜಿ ರಾಮಕೃಷ್ಣ.—ಸರ್ಕಾರದವರು ಮಾಡಿರುವಂತಹ ಕೆಲಸಕಾರ್ಯಗಳ ಬಗೆ ಇಲ್ಲಿ ಜಿಲ್ಲಾವಾರು ವಿವರಗಳನ್ನು ಕೊಟ್ಟಿದ್ದಾರೆ. ಆ ಪ್ರಕಾರ ನನ್ನ ಜಿಲ್ಲೆಯನ್ನೇ ತೆಗೆದುಕೊಂಡರೂ ಸಹ ನನ್ನ ಜಿಲ್ಲೆಯಲ್ಲಿ ಒಟ್ಟು ಸುಮಾರು ೧೦ ತಾಲ್ಲೂಕುಗಳು ಇವೆ ಸರ್ಕಾರದ ಒಂದು ರಿಪೋರ್ಟ್ ಪ್ರಕಾರ ಒಟ್ಟು ೧೦ ತಾಲ್ಲೂಕುಗಳಲ್ಲಿ ಕೂಡ ಬರಗಾಲ ಪರಿಸ್ಥಿತಿ ಇದೆ ನಮ್ಮ ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆ ೨೦ ಲಕ್ಷದ ೮೦ ಸಾವಿರ ಎಂದು ತಾವೆ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಇದರಲ್ಲಿ ನಮ್ಮ ಜಿಲ್ಲೆಯಲ್ಲಿ ನೆರವು ನೀಡಿರುವಂತಹ ಜನರ ಸಂಖ್ಯೆಯನ್ನು ತೆಗೆದುಕೊಂಡರೆ ಒಟ್ಟು ೯ ಲಕ್ಷದ ೫೦ ಸಾವಿರ ಜನ ಮಾತ್ರ ಇನ್ನು ೨೦ ಲಕ್ಷದಷ್ಟು ಜನರಿಗೆ ತಾವು ನೆರವು ನೀಡಿಲ್ಲ ಅದೇ ರೀತಿಯಲ್ಲಿ ೯ ಲಕ್ಷಕ್ಕೂ ಮೇಲ್ಪಟ್ಟು ದನಗಳು ಇವೆ ಇದರಲ್ಲಿ ಎಷ್ಟು ಜಾನುವಾರುಗಳಿಗೆ ತಾವು ಮೇವನ್ನು ಒದಗಿಸಿದ್ದೀರಿ ? ಪ್ರತಿಯೊಬ್ಬರಿಗೂ ಕೂಲಿಯನ್ನು ಒದಗಿಸಿಕೊಡುತ್ತೇವೆಂದು ತಾವು ಹೇಳಿದ್ದೀರಿ ಆದರೆ ಆ ಕೆಲಸವನ್ನು ತಾವು ಮಾಡಿಲ್ಲ ತಮ್ಮ ವರದಿಯಲ್ಲಿ ತಿಳಿಸಿರುವಂತೆ ತಾವು ಕೆಲಸವನ್ನು ಮಾಡಿಲ್ಲ. ಜಿಲ್ಲಾಧಿಕಾರಿಗಳು ತಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ ಅಲ್ಲಿ ಒಂದು ಸಲ ಸ್ಕೇರ್ಸಿಟಿ ಮೀಟಿಂಗ್‌ನಲ್ಲಿ ಡಿಸ್ಕಷನ್ ಮಾಡಿದ್ದೇವೆ ಗೋಶಾಲೆಗೆ ದನಗಳನ್ನು ತಂದು ಬಿಡಬೇಕಾದರೆ ಆ ದನಗಳ ಜೊತೆಗೆ ಒಬ್ಬ ಮನುಷ್ಯ ಗೋಶಾಲೆಯಲ್ಲಿ ಇರಬೇಕೆಂದು ಹೇಳಿದರು ಗೋಶಾಲೆಯಲ್ಲಿ ದನಕ್ಕೆ ಸಂಬಂಧಪಟ್ಟ ಒಬ್ಬ ಮನುಷ್ಯ ಇರಬೇಕು ಕಾರಣ ಒಂದು ವೇಳೆ ಅವು ಏನಾದರೂ ಸತ್ತವು ಎಂದರೆ ಗೋಶಾಲೆಯವರ

೧–೩೦ ಪಿ ಎಂ

ಮೇಲೆ ಆಪಾದನೆ ಬರುತ್ತದೆ ಆ ರೀತಿ ಆಗುವುದು ಬೇಡ ದನಕ್ಕೆ ಸಂಬಂಧಪಟ್ಟ ಮನುಷ್ಯ ಗೋಶಾಲೆಯಲ್ಲಿರಬೇಕೆಂದು ಹೇಳಿದರು. ಇದು ಒಳ್ಳೆಯ ಸ್ಕೀಮ್ ಇದೆ ಆದರೆ ೫೦ ದನಗಳನ್ನು ತೆಗೆದುಕೊಂಡು ಜೊತೆಗೆ ೫೦ ಮಂದಿ ಬಂದರು ಎಂದರೆ ದನಗಳಿಗೆ ನೀರು ಇಟ್ಟಿರುತ್ತೀರಿ ಮೇವು ಇಟ್ಟಿರುತ್ತೀರಿ ಅವುಗಳಿಗೆ ಬಿಸಿಲಾಗುತ್ತದೆ ಎಂದು ಷೆಡ್ ಹೊಡೆದಿರುತ್ತೀರಿ ಆದರೆ ೫೦ ಮಂದಿ ಎಲ್ಲಿ ಮಲಗಿಕೊಳ್ಳಬೇಕು ಅವರು

ಏನು ತಿನ್ನಬೇಕು ಅವರು ಎಲ್ಲಿರುವುದು ಇದಕ್ಕೆ ಏನು ಮಾಡಬೇಕೆಂದು ಹೇಳಲಿಲ್ಲ. ಸರಕಾರ ಇದರ ಬಗ್ಗೆ ವಿಚಾರ ಮಾಡಿದೆಯೇ ? ದನಗಳಿಗೆ ರಕ್ಷಣೆ ಮಾಡಿದ್ದೀರಿ ಆದರೆ ದನದ ಜೊತೆ ಬರುವ ಮನುಷ್ಯನಿಗೆ ರಕ್ಷಣೆ ಎಲ್ಲಿ ? ಅದನ್ನು ಸರಕಾರ ವಿಚಾರ ಮಾಡಬೇಕು. ನನ್ನ ಕ್ಷೇತ್ರದಲ್ಲಿ ಸುಮಾರಾಗಿ ಈ ರಿಪೋರ್ಟ್ ಪ್ರಕಾರ ೩೫ ಹಳ್ಳಿಗಳಿಗೆ ತಾಂಡಾಗಳಿಗೆ ನೀರಿಲ್ಲ. ಅಲ್ಲಿ ಬೋರ್‌ವೆಲ್ ಇಲ್ಲ ಅಲ್ಲಿ ಯಾವ ಸವಲತ್ತುಗಳೂ ಇಲ್ಲ. ಟ್ರಾನ್ಸ್‌ಪೋರ್ಟೇಷನ್ ಮೂಲಕ ನೀರನ್ನು ಒದಗಿಸುತ್ತೇವೆ ಎಂದು ಹೇಳುತ್ತೀರಿ ಇದುವರೆಗೆ ಆ ಊರಿನ ಜನರಿಗೆ ಒಂದು ಲಾರಿ ನೀರು ಸಹಿತ ಕೊಟ್ಟಿಲ್ಲ ನೀರಿಲ್ಲದೆ ಬಹಳಷ್ಟು ಹಳ್ಳಿಗಳ ಜನ ತೊಂದರೆಗೀಡಾಗಿದ್ದಾರೆ ಇದನ್ನು ಶೀಘ್ರವಾಗಿ ಸರಕಾರ ಗಮನಕ್ಕೆ ತೆಗೆದುಕೊಳ್ಳಬೇಕು ಇದಲ್ಲದೆ ನನ್ನ ಕ್ಷೇತ್ರದಲ್ಲಿ ಸರಕಾರದ ರಿಪೋರ್ಟ್ ಪ್ರಕಾರ ಕಮಲಾಪುರ ಮತ್ತು ನನ್ನ ಕ್ಷೇತ್ರದಲ್ಲಿರತಕ್ಕ ಆಳಂದ್ ತಾಲ್ಲೂಕಿನ ಹಳ್ಳಿಗಳಲ್ಲಿ ಬರ ಬಿದ್ದಿದೆ ಎಂದು ಹೇಳಿದ್ದಾರೆ ಗುಲಬರ್ಗಾ ಜಿಲೆಯಲ್ಲಿ ಬಹಳಷ್ಟು ಬರಕ್ಕೆ ತುತ್ತಾಗಿರತಕ್ಕ ‍ೇತ್ರಗಳು ಎಂದರೆ ಕಮಲಾಪುರ ಮತ್ತು ಆಳಂದ್ ಕ್ಷೇತ್ರಗಳು ಈ ಕ್ಷೇತ್ರಗಳಲ್ಲಿ ಬರಗಾಲ ಪರಿಹಾರ ಕಾಮಗಾರಿಗಳಿಗೆ ಹೆಚ್ಚು ಹಣ ಖರ್ಚು ಮಾಡದೇ ಹೋದರೆ ಅಲ್ಲಿ ಜನ ಇರುವುದಕ್ಕೆ ಸಾಧ್ಯ ಇಲ್ಲ ಜನಗಳಿಗೆ ಅನುಕೂಲ ಮಾಡುವುದಕ್ಕೆ ಸಾಧ್ಯವಿಲ್ಲ. ನನ್ನ ಕ್ಷೇತ್ರದಲ್ಲಿ ಹೆಚ್ಚು ಗೋಶಾಲೆಗಳನ್ನು ತೆರೆಯಬೇಕು ರೇಡಿಯೋದಲ್ಲಿ ಪ್ರತಿ ದಿವಸ ಇಷ್ಟು ಗೋಶಾಲೆಗಳನ್ನು ತೆಗೆಯುತ್ತಿದ್ದೇವೆ ಇಷ್ಟು ಸವಲತ್ತು ಮಾಡಿದ್ದೇವೆ ಎಂದು ಪಕ್ಷದ ಹಿತದೃಷ್ಟಿಯಿಂದ ಹೇಳಿಕೆಗಳನ್ನು ಕೊಟ್ಟರೆ ಜನ ಸಹಿಸುವುದಕ್ಕೆ ಸಾಧ್ಯವಿಲ್ಲ. ನಾವು ವಿರೋಧ ಪಕ್ಷದವರಿದ್ದೇವೆ ವಿರೋಧ ಮಾಡುತ್ತೇವೆ ಎಂಬ ದೃಷ್ಟಿಯಿಂದ ನೀವು ಲೆಕ್ಕ ಹಾಕಿದರೆ ಜನ ಸಹಿಸುವುದಕ್ಕೆ ಸಾಧ್ಯ ಇಲ್ಲ ಜನಗಳಿಗೆ ಎಷ್ಟು ಸವಲತ್ತುಗಳು ಸಿಗಬೇಕೊ ಎಷ್ಟು ಅನುಕೂಲಗಳು ಸಿಗಬೇಕೋ ಅಷ್ಟು ಸಿಗುತ್ತಿಲ್ಲ ಆದ್ದರಿಂದ ಸರಕಾರ ತಕ್ಷಣ ಜನಗಳಿಗೆ ಸವಲತ್ತುಗಳನ್ನು ಒದಗಿಸುವ ದೃಷ್ಟಿಯಿಂದ ಕೆಲಸ ಮಾಡಬೇಕು ಬರಗಾಲ ನಿವಾರಣೆಗೆ ಬೇಕಾದಷ್ಟು ಕೆಲಸ ಮಾಡುತ್ತಿದ್ದೇವೆ ಜನರಿಗೆ ತೊಂದರೆ ಇಲ್ಲ ಎಂದು ಹೇಳುತ್ತಿದ್ದೀರಿ ಚೀಫ್ ಮಿನಿಸ್ಟರ್‌ರವರ ಬರಗಾಲದ ಫಂಡ್ ಎಂದು ಇದೆ ಅದಕ್ಕೆ ದೇಣಿಗೆ ಕೊಡುವಂತೆ ಜನರನ್ನು ಕೇಳುತ್ತಿದ್ದೀರಿ ಬರಗಾಲಕ್ಕೆ ನಾವೇ ಬೇಕಾದಷ್ಟು ಕೆಲಸ ಮಾಡುತ್ತಿದ್ದೇವೆ ಎಂದು ನೀವು ಹೇಳುವುದಾದರೆ ಈ ಫಂಡ್ ಏತಕ್ಕೆ ಬೇಕು. ಬರಗಾಲ ಇಲ್ಲ ಬರಗಾಲ ಇರುವ ಕಡೆ ಬಹಳ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದಮೇಲೆ ಈ ಫಂಡ್ ಏತಕ್ಕಾಗಿ ಬೇಕು ಏತಕ್ಕೆ ಇದಕ್ಕೆ ಜನರ ಕಡೆಯಿಂದ ಕಲೆಕ್ಷನ್ ಮಾಡುತ್ತಿದ್ದೀರಿ ಎಂದು ಕೇಳುತ್ತೇನೆ. ಚಂದಾ ವಸೂಲಿ ಏತಕ್ಕೆ ಮಾಡುತ್ತಿದ್ದೀರಿ ಚಂದಾ ವಸೂಲಿ ಯಾವ ದೃಷ್ಟಿಯಿಂದ ಮಾಡುತ್ತಿದ್ದೀರಿ ಎಂದರೆ ಬರಗಾಲ ಇದೆ ನಮ್ಮ ಹತ್ತಿರ ದುಡ್ಡಿಲ್ಲ ನೀವೆಲ್ಲಾ ಸಹಕಾರ ಮಾಡಿ ಎಂಬ ದೃಷ್ಟಿಯಿಂದ ಮಾಡುತ್ತಿದ್ದೀರಿ ಕಾಂಗ್ರೆಸ್ ಮೆಂಬರ್ಸ್ ಆರಿಸಿಬಂದ ಕ್ಷೇತ್ರದಲ್ಲಿ ಬರಗಾಲ ಇಲ್ಲ ಎಂದಲ್ಲ ಎಲ್ಲಾ ೧೭ ಜಿಲ್ಲೆಗಳಲ್ಲಿ ಬರಗಾಲ ಇದೆ ಈ ೧೭ ಜಿಲ್ಲೆಗಳ ಆರಿಸಿ ಬಂದಿರತಕ್ಕವರು ಬರೀ ಕಾಂಗ್ರೆಸ್ಸಿಗರಲ್ಲ ಜನತಾ ಪಕ್ಷದ ಸದಸ್ಯರೂ ಆರಿಸಿ ಬಂದಿದ್ದಾರೆ ಒಂದು ವೇಳೆ ಅವರಿಗೆ ಬರಗಾಲ ಇಲ್ಲ ಎಂದರೆ ಎಂದರೆ ಎಷ್ಟು ಕಡೆಯಿಂದ ಕಾಂಗ್ರೆಸ್ ಮೆಂಬರ್ಸ್ ಆರಿಸಿ ಬಂದಿರುತ್ತಾರೆ ಅಲ್ಲಿಗಾದರೂ ಮಾಡಿ

ಅಧ್ಯಕ್ಷರು.—ಟೈಮ್ ಆಯಿತು ಬೇಗ ಮುಗಿಸಿ

ಶ್ರೀ ಜಿ ರಾಮಕೃಷ್ಣ.—ನನ್ನ ಕ್ಷೇತ್ರದಲ್ಲಿ ಸರಕಾರ ಜನರಿಗೆ ಸವಲತ್ತುಗಳನ್ನು ಒದಗಿಸಿಕೊಡಬೇಕು ಗೋಶಾಲೆಗಳನ್ನು ತೆಗೆಯಬೇಕು ಜನಗಳಿಗೆ ಕೆಲಸ ಕೊಡಬೇಕು ಒಂದು ವೇಳೆ ನಮ್ಮ ಕ್ಷೇತ್ರದ ಜನತೆಗೆ ಸವಲತ್ತುಗಳನ್ನು ಒದಗಿಸಿಕೊಡುವುದರಲ್ಲಿ ಸರಕಾರ ಹಿಂದೆ ಬಿದ್ದರೆ ನಮ್ಮ ಕ್ಷೇತ್ರದ ಜನತೆ ಸಹಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್.(ಧಾರವಾಡ)–ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಇವತ್ತಿನ ಬರಗಾಲ ಬಹಳ ದೊಡ್ಡ ಬರಗಾಲ. ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಈ ಬರಗಾಲ ಬಹಳ ದೊಡ್ಡ ಪರಿಣಾಮವನ್ನು ಉಂಟು ಮಾಡಿದೆ. ಈಗಾಗಲೇ ಸತತವಾಗಿ ನಾಲ್ಕು ವರ್ಷಗಳಿಂದ ಈ ಬರಗಾಲವನ್ನು ನಮ್ಮ ರಾಜ್ಯ ಅನುಭವಿಸುತ್ತಾ ಬಂದಿದೆ. ಇವತ್ತಿನ ದಿವಸ ನಮ್ಮ ರಾಜ್ಯ ಸರಕಾರ ಬಹಳಷ್ಟು ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದು ಕೊಂಡಿರುವುದರ ಬಗ್ಗೆ ನಮ್ಮ ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ಪ್ರಕಾರ ಬಹಳ ಮಹತ್ವವಾದಂಥ ಅನೇಕ ಯೋಜನೆಗಳನ್ನು ಮಾಡಿ ಜನತೆಯ ಸೇವೆಯಲ್ಲಿ ಏನು ಒಂದು ನೀರಿನ ಕೊರತೆಯಾಗಲೀ, ದನಗಳಿಗೆ ಮೇವಿನ ಕೊರತೆಯಾಗಲೀ ಅವರ ಕೂಳಿನ ಸಮಸ್ಯೆಯನ್ನಾಗಲೀ. ಪರಿಹರಿಸಲಿಕ್ಕೆ ಸೂಕ್ತ

ವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದೆ. ಇವತ್ತಿನ ದಿವಸ ನಮ್ಮ ಕರ್ನಾಟಕ ರಾಜ್ಯದಲ್ಲಿ, ಅನೇಕ ವರ್ಷಗಳಿಂದ ಆಗುತ್ತಿರುವ ಮಳೆಯ ಪ್ರಮಾಣವನ್ನು ನೋಡುತ್ತಾ ಬಂದರೆ. ಪ್ರತಿ ವರ್ಷ ಮಳೆಯ ಪ್ರಮಾಣ ಕಡಿಮೆಯಾಗುತ್ತಾ ಬರುತ್ತಿರುವುದು ಕಂಡು ಬರುತ್ತದೆ. ಇದರಿಂದ ಒಂದು ಸೃಷ್ಟಿ ವಿಕೋಪ ಏನು ಉಂಟಾಗಿದೆ, ಇದಕ್ಕೆ ಕಾರಣ ಏನು ಎಂಬುದರ ಬಗ್ಗೆ ಸರಕಾರ ಬಹಳಷ್ಟು ವಿಚಾರ ಮಾಡಬೇಕಾಗಿದೆ. ಈಗ ನಾವು ಏನು ಬರಗಾಲವನ್ನು ಅನುಭವಿಸುತ್ತಿದ್ದೇವೆ ಇದಕ್ಕೆ ಮಳೆಯ ಪ್ರಮಾಣ ಕಡಿಮೆ ಆಗುತ್ತಿರುವುದೇ ಕಾರಣ. ನಮ್ಮ ರಾಜ್ಯದ ಸರಾಸರಿ ಮಳೆಯ ಪ್ರಮಾಣ ಅನೇಕ ವರ್ಷಗಳಿಂದ ಕಡಿಮೆಯಾಗುತ್ತಾ ಬರುತ್ತಿರುವುದರ ಕಡೆಗೆ ಸರಕಾರ ಗಮನ ಹರಿಸಬೇಕು ಹಾಗೂ ಇದರ ಬಗ್ಗೆ ಬಹಳಷ್ಟು ಮುಂಜಾಗ್ರತೆ ವಹಿಸಬೇಕು, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸರಕಾರ ಮೊಟ್ಟಮೊದಲ ಆದ್ಯತೆಯನ್ನು ಕೊಡಬೇಕಾಗಿದೆ. ಇದರ ಅನುಷ್ಠಾನವನ್ನು ಮಾಡಬೇಕಾಗಿದೆ ಹಾಗೂ ಮುಂದೆ ಬರುವಂತಹ ಬರಗಾಲವನ್ನು ಸಮರ್ಪಕವಾದ ರೀತಿಯಲ್ಲಿ ಎದುರಿಸುವಂತಹ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಸರಕಾರ ಹಾಕಿಕೊಳ್ಳಬೇಕಾಗಿದೆ. ಇವತ್ತಿನ ದಿವಸ ದನಗಳ ಸಲುವಾಗಿ ಗೋಶಾಲೆಗಳನ್ನು ಮಾಡಿರುತ್ತಾರೆ. ಗೋಶಾಲೆಗಳಲ್ಲಿ ಅನೇಕ ದನಕರುಗಳ ಸಂರಕ್ಷಣೆ ಮಾಡುತ್ತಿದ್ದಾರೆ. ಅವಕ್ಕೆ ಮೇವನ್ನು ಅನೇಕ ಕಡೆಗಳಿಂದ ಸಂಗ್ರಹಿಸಿ ಒದಗಿಸಲಾಗುತ್ತಿದೆ. ಅರಣ್ಯ ಇಲಾಖೆಯವರು, ಕೃಷಿ ಇಲಾಖೆಯವರು, ತೋಟಗಾರಿಕೆ ಇಲಾಖೆಯವರು, ಪಶುಪಾಲನಾ ಇಲಾಖೆಯವರು ಹುಲ್ಲು ಬೆಳೆಯುವ ಅನೇಕ ಕಾರ್ಯಕ್ರಮಗಳನ್ನು ಇವತ್ತು ತೆಗೆದುಕೊಂಡಿದ್ದಾರೆ. ಇದು ಬಹಳ ಮೆಚ್ಚಿಕೊಳ್ಳಬೇಕಾದ ವಿಚಾರ, ಇವತ್ತು ಏನು ೧೫ ಎಕರೆಗಿಂತ ಕಡಿಮೆ ಇರುವ ರೈತರು ದನಕರುಗಳನ್ನು ಗೋಶಾಲೆಯಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ನಾವು ವಿಚಾರ ಮಾಡಬೇಕು ಏಕೆಂದರೆ ಈಗ ನಾವು ಇವಷ್ಟು ಜನವರಿ ತಿಂಗಳಲ್ಲಿ ಇದ್ದೇವೆ. ಮಾರ್ಚ್, ಏಪ್ರಿಲ್ ಮೇ, ಜೂನ್ ತಿಂಗಳ ಹೊತ್ತಿಗೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ಇವತ್ತಿನ ದಿವಸ ಯಾವ ಮಧ್ಯಮ ರೈತ ಇದ್ದರೂ ಸಹ ಮೂರು ನಾಲ್ಕು ವರ್ಷದಿಂದ ಮಳೆ ಇಲ್ಲದ ಕಾರಣ ಬರಗಾಲದಲ್ಲಿ ಬೇಯುತ್ತಿರುವಂತಹ ರೈತ ಮೇವಿನ ಕೊರತೆಯನ್ನು ಎದುರಿಸುತ್ತಿದ್ದಾನೆ. ರೈತನಿಗೆ ೧೫ ಎಕರೆಗಿಂತ ಹೆಚ್ಚು ಇದ್ದರೂ ಸಹಿತ ಅವನ ಹತ್ತಿರ ಹುಲ್ಲು ಸಿಗುವುದಿಲ್ಲ. ಆದಕಾರಣ ೧೫ ಎಕರೆಗಿಂತ ಹೆಚ್ಚು ಇದ್ದರೂ ಸಹ ಅಂತಹವರ ದನಕರುಗಳನ್ನು ಗೋಶಾಲೆಗೆ ತಂದರೆ ಅವುಗಳನ್ನೂ ಸಹ ಗೋಶಾಲೆಯಲ್ಲಿ ಸಂರಕ್ಷಣೆ ಮಾಡಬೇಕಾದುದು ಸರಕಾರದ ಕರ್ತವ್ಯವಾಗಿದೆ. ಎಂತಹ ರೈತನೂ ಸಹ ದನಕ್ಕೆ ಮೇವನ್ನು ಹಾಕಲಿಕ್ಕೆ ಶಕ್ತಿ ಇದ್ದರೆ ಅದನ್ನು ಗೋಶಾಲೆಗೆ ತಂದು ಬಿಡುವುದಕ್ಕೆ ಹೋಗುವುದಿಲ್ಲ. ಆ ರೀತಿ ಮಾಡಿದರೆ ಅವನಿಗೆ ಇದು ಅವನ ಗ್ರಾಮದಲ್ಲಿ ಮಾನಸಿಕವಾದ ಹಾಗೂ ನೈತಿಕವಾದ ಪ್ರಶ್ನೆ ಆಗುತ್ತದೆ. ಮೇವು ಹಾಕಲು ಶಕ್ತಿ ಇದ್ದರೆ ಯಾರೂ ಗೋಶಾಲೆಗೆ ತಮ್ಮ ದನಕರುಗಳನ್ನು ತಂದು ಬಿಡುವುದಕ್ಕೆ ಹೋಗುವುದಿಲ್ಲ. ಆದಕಾರಣ ಮುಂಬರುವಂತಹ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಬರುವಂತಹ ದುಷ್ಕಾಲದ ಪರಿಸ್ಥಿತಿಯಲ್ಲಿ, ರೈತನಿಗೆ ೧೫ ಎಕರೆಗಿಂತ ಜಾಸ್ತಿ ಭೂಮಿ ಮಳೆ ಆಶ್ರಯದಲ್ಲಿ ಇದ್ದರೆ. ಆ ಜಮೀನಿನಲ್ಲಿ ಹುಲ್ಲು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಆದಕಾರಣ ಅಂತಹವರ ದನಕರುಗಳನ್ನೂ ಗೋಶಾಲೆಯಲ್ಲಿ ಸಂರಕ್ಷಣೆ ಮಾಡುವಂತಹ ಕ್ರಮವನ್ನು ಸರಕಾರ ತೆಗೆದುಕೊಳ್ಳಬೇಕು. ಬೇಕಾದರೆ ಅವರ ಹತ್ತಿರ ಪ್ರಮಾಣ ಪತ್ರ ಬರೆಸಿಕೊಳ್ಳಬಹುದು. ಹಾಗೇನಾದರೂ ಅವರು ತಮ್ಮಲ್ಲಿರುವ ಹುಲ್ಲನ್ನು ದುರುಪಯೋಗ ಪಡಿಸಿದ್ದೇ ಆದರೆ ಅವರ ಮೇಲೆ ಹಿಂದಿನಿಂದಲೂ ಆಕರಣೆ ಮಾಡುವಂತಹ ಯೋಜನೆ ಹಾಕಬೇಕು, ಇಂತಹವರ ದನಕರುಗಳನ್ನೂ ತುರ್ತಾಗಿ ಗೋಶಾಲೆಗೆ ತೆಗೆದುಕೊಳ್ಳುವಂತಹ ಯೋಚನೆ ಮಾಡಬೇಕು, ನೀರಿನ ಬಗ್ಗೆ ನಮ್ಮ ಸರಕಾರ ಸಾಕಷ್ಟು ಕೆಲಸ ಮಾಡಿದೆ. ಕೊಳವೆ ಬಾವಿಗಳನ್ನು ತೋಡಿ ಜನತೆಗೆ ಅನುಕೂಲ ಮಾಡಿಕೊಟ್ಟಿದೆ, ಗ್ರಾಮೀಣ ಭಾಗದಲ್ಲಿ ನೀರಿನ ಆಳ ಕೆಳಕ್ಕೆ ಹೋಗುತ್ತಿರುವುದರಿಂದ ಬೋರ್‌ವೆಲ್‌ನಲ್ಲೂ ಸಹಿತ ನೀರು ಸಿಗುತ್ತಿಲ್ಲ: ಇದರಿಂದ ಮುಂಬರುವ ಮೂರು ನಾಲ್ಕು ತಿಂಗಳಲ್ಲಿ ಬಹಳಷ್ಟು ನೀರಿನ ಸಮಸ್ಯೆ ಆಗುತ್ತದೆ. ಇದರ ಬಗ್ಗೆ ಮುಂಚಿತವಾಗಿ ಸರಕಾರ ಕ್ರಮ ತೆಗೆದುಕೊಳ್ಳಬೇಕು. ಅನೇಕ ಜನ ಶಾಸಕರುಗಳು ಹೇಳಿದಂತೆ ಬೋರ್‌ವೆಲ್‌ಗಳನ್ನು ತೋಡುವುದರಲ್ಲಿ ಅನೇಕ ಅವ್ಯವಹಾರಗಳು ಆಗಿದ್ದವು. ನೂರು ಫೀಟ್ ಬೋರ್‌ವೆಲ್ ತೆಗೆದು ೨೦೦ ಫೀಟ್ ಲೆಕ್ಕ ತೆಗೆದುಕೊಂಡಿರುವ ಪ್ರಕರಣಗಳು ಇವೆ ಎಂದು ಹೇಳಿದ್ದಾರೆ, ಈ ಅಂಶಗಳನ್ನು ಶಾಸಕರುಗಳು ಏನು ಹೇಳಿದರು ಅದನ್ನು ಈಗ ನೀರು ತಳಕ್ಕೆ ಹೋಗಿರುವುದರಿಂದ ಗುರುತಿಸುವುದಕ್ಕೆ ಸಾಧ್ಯ ಇದೆ. ಇವುಗಳನ್ನು ಪತ್ತೆ ಹಚ್ಚಿ ಅಂತಹ ಅಧಿಕಾರಿಗಳ ಮೇಲೆ, ಕಂಟ್ರಾಕ್ಟರುಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳು

ವುದಕ್ಕೆ ಸಾಧ್ಯ ಇದೆ. ಇದರ ಬಗ್ಗೆ ಸರಕಾರ ತೀವ್ರವಾಗಿ ವಿಚಾರ ಮಾಡಬೇಕು. ವಿದ್ಯುಚ್ಛಕ್ತಿ ಕೊರತೆಯಿಂದ ನಮ್ಮ ರಾಜ್ಯದಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುತ್ತಿವೆ. ಗ್ರಾಮಾಂತರ ಪ್ರದೇಶದಲ್ಲಿ ವೋಲ್ಟೇಜ್ ಸಮಸ್ಯೆ ಬಹಳ ಇದೆ. ಪಂಪ್‌ಸೆಟ್‌ಗಳಿಗೆ ೪೪೦ ವೋಲ್ಟೇಜ್ ಇರಬೇಕು. ಆದರೆ ಕೆಲವು ಸಲ ೨೫೦ ವೋಲ್ಟ್ ಬಂದು ಡ್ರಾಪ್ ಆಗಿ ಪಂಪ್‌ಸೆಟ್‌ಗಳು ಸುಟ್ಟುಹೋಗುವಂತಹ ಸ್ಥಿತಿ ಇದೆ. ಇದರಿಂದ ರೈತರ ಆರ್ಥಿಕ ಪರಿಸ್ಥಿತಿ ಕೆಡುತ್ತಿದೆ. ವೋಲ್ಟೇಜ್ ತೊಂದರೆಯಿಂದ ಪಂಪಸೆಟ್ ಸುಟ್ಟು ಹೋದರೆ, ಮತ್ತೆ ಸಾಲ ಸೋಲ ಮಾಡಿ ದುಡ್ಡನ್ನು ತಂದು, ಸರಿ ಮಾಡಿಸತಕ್ಕ ಪರಿಸ್ಥಿತಿ ಬರುತ್ತದೆ. ಆದಕಾರಣ ವಿದ್ಯುಚ್ಛಕ್ತಿ ಸರಬರಾಜು ಬಹಳ ಮುಖ್ಯ. ರೈತರ ಪಂಪಸೆಟ್‌ಗಳು ಸುಟ್ಟ ತಕ್ಷಣ ಅದನ್ನು ದುರಸ್ತಿಗೊಳಿಸುವ ಒಂದು ಯೋಜನೆ ಆಗಬೇಕು. ವಿದ್ಯುಚ್ಛಕ್ತಿ ಪಂಪ್ ಸುಟ್ಟ ತಕ್ಷಣ ವಿದ್ಯುಚ್ಛಕ್ತಿ ಇಲಾಖೆಯವರಿಗೆ ತಿಳಿಸುವಂತಹ ಕ್ರಮ ಸರಕಾರ ತೆಗೆದುಕೊಳ್ಳಬೇಕು. ಇದರ ಬಗ್ಗೆ ಸರಿಯಾಗಿ ವಿಚಾರ ಮಾಡಬೇಕು.

ವಿದ್ಯುಚ್ಛಕ್ತಿ ಪಂಪ್ ಸುಟ್ಟ ತಕ್ಷಣ ವಿದ್ಯುಚ್ಛಕ್ತಿ ಇಲಾಖೆಗೆ ತಿಳಿಸುವಂತಹ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು. ಅದರ ಬಗ್ಗೆ ಸೂಕ್ತವಾದ ವಿಚಾರಣೆ ಮಾಡಿಸಬೇಕು. ಇದರ ದೋಷ ಏನು, ಇದರಿಂದ ಏನಾಗುತ್ತಿದೆ. ಇದರಿಂದ ಸಣ್ಣ ರೈತರಿಗೆ ಏನು ತೊಂದರೆಯಾಗುತ್ತಿದೆ ಎಂಬುದನ್ನು ವಿಚಾರ ಮಾಡಬೇಕು. ಇವತ್ತು ತಾವು ಜಲ ಅನ್ವೇಷಣೆ ಮಾಡುವುದಕ್ಕೆ ಒಂದು ಸೆಲ್ ನಿರ್ಮಾಣ ಮಾಡಬೇಕು. ಈ ಸೆಲ್ ಜಲ ಸಮಸ್ಯೆಯನ್ನು ಪೂರ್ಣವಾಗಿ ಅಧ್ಯಯನ ಮಾಡಿ ಮುಂಬರುವ ದಿನಗಳಲ್ಲಿ ಇಂತಹ ಸಮಸ್ಯೆ ಬರದಂತೆ ಅನ್ವೇಷಣೆ ಮಾಡಬೇಕು. ಬಡ ರೈತರು, ಮಧ್ಯಮ ರೈತರು, ಇವರುಗಳ ಭೂಮಿಯಲ್ಲಿ ಸರ್ಕಾರವೇ ಬೋರ್‌ವೆಲ್ ಹಾಕಬೇಕು. ಇಂಡಸ್ಟ್ರಿಯಲ್ ಮಾಡುವುದಕ್ಕೆ ಪ್ರಯತ್ನ ಮಾಡಿ ಅರ್ಜಿ ಹಾಕಿದರೆ ಎಲ್ಲವನ್ನು ತಾವೇ ರೆಕಾರ್ಡ್ ಬಿಲ್ಡ್ ಅಪ್ ಮಾಡಿ ಇಂಡಸ್ಟ್ರಿಯಲ್‌ಗೆ ಅನುಕೂಲ ಮಾಡಿಕೊಡುತ್ತೀರಾ, ಅದೇ ರೀತಿ. ಸಣ್ಣ ರೈತ, ಮಧ್ಯಮ ತರಗತಿಯ ರೈತ. ಅಂತಹವರು ಅರ್ಜಿಯನ್ನು ಹಾಕಿದರೆ ತಾವೇ ರೆಕಾರ್ಡ್ ಬಿಲ್ಡ್ ಅಪ್ ಮಾಡಿ ನೆಲ ಅನ್ವೇಷಣಾ ಪರಿಷ್ಕರಣದ ಇಲಾಖೆಯ ಮೂಲಕ ಅವರು ನೀರನ್ನು ಕಂಡುಹಿಡಿದು ಪಂಪ್ ಸೆಟ್‌ನ್ನು ಇನ್‌ಸ್ಟಾಲ್ ಮಾಡುವಂತಹ ಕಾರ್ಯವನ್ನು ಸರ್ಕಾರ ಇವತ್ತು ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದರ ಜೊತೆಗೆ ಇವತ್ತು ಹಸಿರು ಕಾರ್ಡುಗಳ ಮೂಲಕ ಬಡವರಿಗೆ, ರೈತರಿಗೆ, ಆಹಾರ ಧಾನ್ಯಗಳನ್ನು ಒದಗಿಸಿ ಕೊಡುತ್ತಿದ್ದಾರೆ, ಇವತ್ತು ಕಡುಬಡವರು, ಕೂಲಿಗಾರರು, ಈ ಆಹಾರ ಧಾನ್ಯವನ್ನು ತೆಗೆದು ಕೊಳ್ಳುತ್ತಾ ಇದ್ದಾರೆ. ಈಗ ನಿರ್ದಿಷ್ಟವಾಗಿ ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಕಂದಾಯ ಇಲಾಖೆಗೆ ಯಾವ ಗ್ರಾಮದಲ್ಲಿ ಆದರಲ್ಲೂ ಕಡುಬಡವರು ಎಷ್ಟು ಸಂಖ್ಯೆಯಲ್ಲಿದ್ದಾರೆ, ಮಧ್ಯಮ ವರ್ಗದವರು ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂಬುದನ್ನು ಗುರುತಿಸಿ ಪಟ್ಟಿಯನ್ನು ಪ್ರಕಟಿಸಬೇಕು. ಇದರ ಪ್ರಕಾರ ಗ್ರಾಮದಿಂದ ತಾಲ್ಲೂಕು, ತಾಲ್ಲೂಕಿನಿಂದ ಜಿಲ್ಲೆಗಳಿಗೆ ಈ ಅಂಕಿ ಸಂಖ್ಯೆಗಳನ್ನು ಪಡೆಯುವುದು ಬಹಳ ಅವಶ್ಯಕತೆ ಇದೆ. ಈ ರೇಷನ್ ಕಾರ್ಡಿನಿಂದ ಇವತ್ತು ಕಾಳುಗಳನ್ನು ವಿತರಣೆ ಮಾಡಲಾಗುತ್ತಿದೆ. ಮುಂಬರುವ ಸಹಾಯ ಸವಲತ್ತುಗಳನ್ನು ರೈತರಿಗೆ, ಚಿಕ್ಕರೈತರಿಗೆ, ಕಡುಬಡವರಿಗೆ, ಕೂಲಿಗಾರರಿಗೆ ಕೊಡಬೇಕಾದಂತಹ ದೃಷ್ಟಿಯಲ್ಲಿ, ಕೂಲಿಗಾರರು ಎಷ್ಟಿದ್ದಾರೆ, ಚಿಕ್ಕ ರೈತರು ಎಷ್ಟಿದ್ದಾರೆ, ಮಧ್ಯಮ ವರ್ಗದ ರೈತರೆಷ್ಟಿದ್ದಾರೆ, ದೊಡ್ಡ ರೈತರೆಷ್ಟಿದ್ದಾರೆ. ಈ ಎಲ್ಲಾ ಅಂಕಿ ಅಂಶಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಂಗ್ರಹಿಸುವುದು ಬಹಳ ಅವಶ್ಯಕತೆ ಇದೆಯೆಂದು ನಾನು ಹೇಳುತ್ತಾ ಇದ್ದೇನೆ. ಇದರಿಂದ ಜನಗಳಿಗೆ ಅನುಕೂಲವಾಗುತ್ತದೆ. ಇನ್ನು ಮುಖ್ಯವಾಗಿ ಕೆರೆ ಕಟ್ಟೆಗಳ ವಿಚಾರ. ಕೆರೆ ಕಟ್ಟೆಗಳನ್ನು ಕಟ್ಟುವುದಕ್ಕೆ ಬದಲು ಈಗಿರುವ ಕೆರೆ ಕಟ್ಟೆಗಳ ಹೂಳನ್ನು ತೆಗೆದು ಅಲ್ಲಿ ಹೆಚ್ಚು ನೀರು ನಿಲ್ಲುವಂತೆ ಮಾಡಬೇಕು. ಯಾವುದೇ ಒಂದು ಕೆರೆಯನ್ನು ಬಿಡದೆ ಸಾಧ್ಯವಾದಷ್ಟು ಮಟ್ಟಿಗೆ ಎಲ್ಲಾ ಕೆರೆಯ ಹೂಳನ್ನು ತೆಗೆಯುವುದಕ್ಕೆ ದೃಢ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಇರುವಂತಹ ಅನೇಕ ಕೆರೆ ಕಟ್ಟೆಗಳನ್ನು ರೀಪೇರಿ ಮಾಡಿಸುವುದಕ್ಕೆ ಆದ್ಯತೆಯನ್ನು ಕೊಡಬೇಕು. ಇದರ ಜೊತೆಗೆ ಚಿಕ್ಕ ಚಿಕ್ಕ ನೀರಾವರಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕು. ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಏತ ನೀರಾವರಿ, ಚಿಕ್ಕ ನೀರಾವರಿ ಮಾಡುವುದಕ್ಕೆ ಸಾಕಷ್ಟು ಆದ್ಯತೆಯನ್ನು ಕೊಡಬೇಕು. ಈಗಾಗಲೇ ನಾನು ಹೇಳಿದಂತೆ ಎಲ್ಲೆಲ್ಲಿ ಚಿಕ್ಕ ರೈತರ ಸಂಖ್ಯೆ ಇದೆಯೋ ಅಲ್ಲೆಲ್ಲಾ ಸರ್ಕಾರ ಖುದ್ದಾಗಿ ಬೋರ್‌ಗಳನ್ನು ಹಾಕಿ ಪಂಪ್‌ಸೆಟ್‌ಗಳನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಆದ್ಯತೆಯನ್ನು ಕೊಡಬೇಕು. ಅಷ್ಟೇ ಪ್ರಮಾಣದಲ್ಲಿ

ಇದಕ್ಕೆ ಆದ್ಯತೆಯನ್ನು ಕೊಡಬೇಕು. ಏಕೆಂದರೆ ಸರಾಸರಿ ನೀರಾವರಿ ಪ್ರಮಾಣ ೨೦ ಭಾಗ ಇದ್ದು ಇನ್ನು ೮೦ ಭಾಗ ಮಳೆಯ ಆಶ್ರಯದಲ್ಲಿರುವಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ. ಇದು ಶಾಶ್ವತವಾದ ಬರಗಾಲ. ನಮಗೆ ಹೀಗೆಯೇ ಕಾಡುತ್ತಾ ಇರುವುದರಿಂದ ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇದರ ಜೊತೆಗೆ ಧಾರವಾಡ ಮತ್ತು ಹುಬ್ಬಳ್ಳಿ, ಕಾರ್ಪೊರೇಷನ್ ಸರಹದ್ದಿನಲ್ಲಿರುವುದರಿಂದ ಅಲ್ಲಿ ಒಂದು ಕಾರ್ಪೊರೇಷನ್ ಶಾಲೆಯೂ ಸಹ ಇದೆ. ಧಾರವಾಡ ಸಹಾ ೧೧ ಹಳ್ಳಿಗಳಿಂದ ಕೂಡದಂತಹ ಒಂದು ನಗರ ಮತ್ತು ನನ್ನ ಸರಹದ್ದಿನಲ್ಲಿ ಅನೇಕ ಗ್ರಾಮಗಳು ಸಹ ಬರುತ್ತವೆ. ಅವೆಲ್ಲವೂ ಸಾಕಷ್ಟು ಒಕ್ಕಲತನವನ್ನು ಅವಲಂಭಿಸಿರುವ ಕುಟುಂಬಗಳು ಆಗಿವೆ. ಅಲ್ಲಿ ಹರಿಜನರು, ಬಡವರು ಕಡುಬಡವರು, ಸಣ್ಣ ರೈತರು ಇರುವುದರಿಂದ ಈ ಜನ ಬಹಳ ತೊಂದರೆಗೆ ಒಳಗಾಗಿದ್ದಾರೆ ಮತ್ತು ಅನೇಕ ಕಡೆಗಳಲ್ಲಿ ಹೊಲಕ್ಕೆ ಹೋಗಿ ಕೆಲಸ ಮಾಡಿದರೆ, ನೀರು ಕುಡಿಯುವುದಕ್ಕೆ ಇಲ್ಲದೆ ಇರುವುದರಿಂದ ಬಹಳಷ್ಟು ಸಮಸ್ಯೆಯಾಗಿದೆ. ಇನ್ನು ಕೆರೆಗಳನ್ನು ಪಟ್ಟಣ ಪ್ರದೇಶಗಳಲ್ಲಿ ಮುಚ್ಚಿದ್ದಾರೆ. ಈ ಕೆರೆಗಳನ್ನು ಮುಚ್ಚಿರುವುದರಿಂದ ಬಹಳ ಸಮಸ್ಯೆಯಾಗಿದೆ. ರೈತರಿಗೆ ಕುಡಿಯಲಿಕ್ಕೆ ಅನುಕೂಲವಾಗುವಂತಹ ಬೋರ್‌ಗಳನ್ನು ಹಾಕಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕು. ನಮ್ಮ ನಗರದಲ್ಲಿ ಮೂರು ಕೆರೆಗಳಿವೆ, ಶಾಶ್ವತವಾಗಿ ನೀರುನಿಲ್ಲುವುದಕ್ಕೆ ಇಲ್ಲಿರುವ ಹೂಳುಗಳನ್ನು ತೆಗೆದುಕೊಡಬೇಕೆಂದು ನಾನು ಮಾನ್ಯ ಲೋಕೋಪಯೋಗಿ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ರಾಷ್ಟ್ರೀಯ ಹೆದ್ದಾರಿಯ ನಾಲ್ಕನೇ ನಂಬರಿನ ಬೈಪಾಸ್ ರೋಡ್ ಆಗಬೇಕು. ಇನ್ನು ಕೆಲಸ ಶುರುಮಾಡಿಲ್ಲ. ೪ನೇ ನಂಬರಿನ ಹುಬ್ಬಳ್ಳಿ ಮತ್ತು ಧಾರವಾಡ ಬೈಪಾಸಿನ ಕೆಲಸ ತೆಗೆದುಕೊಳ್ಳುವುದರಿಂದ ಅಲ್ಲಿನ ಜನಗಳಿಗೆ ಕೆಲಸ ಕೊಟ್ಟಂತೆ ಆಗುತ್ತದೆ. ಈ ಕ್ರಮವನ್ನು ಮಾನ್ಯ ಲೋಕೋಪಯೋಗಿ ಸಚಿವರಾದ ದೇವೇಗೌಡರು ತೆಗೆದ ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹೆದ್ದಾರಿ ಕೆಲಸ ಆಗುವುದರಿಂದ ಬೆಳೆಯುತ್ತಿರುವ ಜನತೆಗೆ ಹೆಚ್ಚು ಕೆಲಸ ಮಾಡಲು ಅನುಕೂಲವಾಗುತ್ತದೆ. ಈಗಾಗಲೇ ಸಾಕಷ್ಟು ಟ್ರಾಫಿಕ್ ಒತ್ತಡ ಹೆಚ್ಚಾದಂತೆ ಇದೆ. ಈ ದೃಷ್ಟಿಯಿಂದ ಕೆಲಸ ತೆಗೆದುಕೊಳ್ಳಬೇಕು. ಚಿಕ್ಕ ಉದ್ಯಮ ಮತ್ತು ನೀರಾವರಿ ಈ ಎಲ್ಲಾ ಯೋಜನೆಗಳಿಗೆ ಹೆಚ್ಚಿನ ಮಹತ್ವವನ್ನು ಕೊಡಬೇಕೆಂದು ಹೇಳುತ್ತೇನೆ. ಅದೂ ಅಲ್ಲದೆ ಗ್ರಾಮದ ಭಾಗದಲ್ಲಿ, ಪ್ರತಿಯೊಂದು ಹಳ್ಳಿಗಳಲ್ಲೂ ಅರಣ್ಯವನ್ನು ಬೆಳೆಸುವಂತಹ ವ್ಯವಸ್ಥೆಯನ್ನು ಮಾಡಿಕೊಡಬೇಕು. ಅರಣ್ಯದಲ್ಲಿ ಬೇವಿನ ಮರಗಳನ್ನು, ಮಾವಿನ ಮರಗಳನ್ನು, ಹುಣಸೇ ಮರಗಳನ್ನು ಬೆಳೆಸುವಂತಹ ವ್ಯವಸ್ಥೆಯನ್ನು ಮಾಡಿಕೊಡಬೇಕು. ಗ್ರಾಮದ ಜನಸಂಖ್ಯೆಗನುಗುಣವಾಗಿ ಸರ್ಕಾರ ಭೂಮಿಯನ್ನು ಕೊಟ್ಟು ಅಲ್ಲೆಲ್ಲಾ ಅರಣ್ಯವನ್ನು ಬೆಳೆಸುವುದರಿಂದ, ಈಗ ಏನು ನಾವು ಸೃಷ್ಟಿಯ ವಿಕೋಪಕ್ಕೆ ಗುರಿಯಾಗಿದ್ದೇವೋ ಅದನ್ನು ತಪ್ಪಿಸಿಕೊಂಡ ಹಾಗೆ ಆಗುತ್ತದೆ. ಅದು ಅಲ್ಲದೆ ಅವರ ಆದಾಯ ಗ್ರಾಮಕ್ಕೆ ಬರುವಂತೆ ವ್ಯವಸ್ಥೆ ಮಾಡಬೇಕು. ಚಿಕ್ಕ ಅರಣ್ಯವನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕು. ಮತ್ತು ಸರ್ಕಾರ ಜಮೀನಿನಲ್ಲಿ ಹುಲ್ಲುಗಾವಲನ್ನು ಬೆಳೆಸುವಂತಹ ಯೋಜನೆಯನ್ನು ಸರ್ಕಾರ ಮಾಡಬೇಕು. ಇವೆಲ್ಲಕ್ಕೂ ಮುಖ್ಯವಾದ ಆದ್ಯತೆಯನ್ನು ಕೊಡಬೇಕು ಮತ್ತು ನೀರಾವರಿಗೂ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಜೊತೆಗೆ ವಿದ್ಯುಚ್ಛಕ್ತಿಗೂ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ಮತ್ತು ರೈತನಿಗೆ ಹೆಚ್ಚು ಕೂಲಿ ಮತ್ತು ಉದ್ಯೋಗ ಕೊಡಬೇಕು. ಈ ನೀರಾವರಿ ಮತ್ತು ಲೋಕೋಪಯೋಗಿ ಕೆಲಸಗಳನ್ನು ಒದಗಿಸಿ ಕೊಡಬೇಕು. ಮುಂಬರುವ ಕಷ್ಟಕಾಲದಲ್ಲಿ ಶಾಶ್ವತವಾದ ಯೋಜನೆಗಳನ್ನು ನಾನು ಸೂಚಿಸುವಂತೆ ಮಾಡಿಕೊಡಬೇಕೆಂದು ಸರ್ಕಾರವನ್ನು ಮತ್ತು ಎಲ್ಲರಿಗೂ ನಾನು ಮನವಿಮಾಡಿಕೊಂಡು, ಕೇಂದ್ರ ಸರ್ಕಾರ ಕೂಡ ಇದಕ್ಕೆ ನ್ಯಾಯವಾಗಿ, ಯಾವುದೇ ರಾಜಕೀಯ ಮಾಡದೆ ಕರ್ನಾಟಕದ ಜನತೆಯ ಪರವಾಗಿ ಮತ್ತು ಪಶುಪ್ರಾಣಿ ರಕ್ಷಣೆಯ ದೃಷ್ಟಿಯಿಂದ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರವು ಕೇಳಿರುವ ಈ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡಿಕೊಡಬೇಕೆಂದು ಕೇಳಿಕೊಂಡು, ಇದರ ಸದುಪಯೋಗ ಕರ್ನಾಟಕದ ಜನತೆಗೆ ಸಿಗುವಂತಾಗಬೇಕು. ಈಗ ವಿರೋಧ ಪಕ್ಷದ ಧುರೀಣರು ಹಾಗೂ ಎಲ್ಲಾ ವಿರೋಧಪಕ್ಷದ ಸದಸ್ಯರು ಕಷ್ಟದಲ್ಲಿರುವ ಇವತ್ತಿನ ಈ ಒಂದು ಪ್ರಸಂಗದಲ್ಲಿ ಕೇಂದ್ರವನ್ನು ಒತ್ತಾಯ ಮಾಡಿ ಈ ಹಿಂದೆ ಉಳಿದಂತಹ ಹಣವನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟು ಶಾಶ್ವತವಾದ ಈ ಬರಗಾಲ ಪರಿಹಾರಕ್ಕೆ ಸಹಕರಿಸಬೇಕೆಂಬ ವಿಚಾರವನ್ನು ಅವರಿಗೂ ಸಹಾ ತಿಳಿಸಿ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಎನ್. ಭಾಸ್ಕರಪ್ಪ (ಬೆಳ್ಳಾವಿ).—ಸನ್ಮಾನ್ಯ ಅಧ್ಯಕ್ಷರೇ, ಈ ವರೆವಿಗೂ, ನಮ್ಮ ವಿರೋಧಪಕ್ಷದ ಸ್ನೇಹಿತರು ಈ ಒಂದು ಬರಗಾಲ ವಿಚಾರದಲ್ಲಿ ಸೂಕ್ತವಾದ ಭಾಷಣವನ್ನು ಮಾಡಿದ್ದಾರೆ. ನನಗೆ ಅವರ ಬಗ್ಗೆ ಕನಿಕರ ಉಂಟಾಗಿದೆ. ಕಾರಣ ಏನೆಂದರೆ ೩೫ ವರ್ಷಗಳ ಕಾಲ ರಾಜ್ಯದಲ್ಲೂ, ಕೇಂದ್ರದಲ್ಲೂ ಆಡಳಿತವಿದ್ದು, ಅಂತಹ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶದ ಆರ್ಥಿಕ ವ್ಯವಸ್ಥೆಗೆ, ಗ್ರಾಮಾಂತರ ಪ್ರದೇಶದ ಅಭ್ಯುದಯಕ್ಕೆ ಕೆಲಸ ಮಾಡದೇ ಇವತ್ತು ಕುರ್ಚಿ ಬದಲಾವಣೆಯಾಗಿದೆ ಎನ್ನುವ ಒಂದೇ ಕಾರಣದ ಮೇಲೆ ಬಡವರ ಬಗ್ಗೆ ರೈತರ ಬಗ್ಗೆ ಕಳಕಳಿಯನ್ನು ಹೊಂದಿರುವುದಕ್ಕೆ ನನಗೆ ತುಂಬಾ ಕನಿಕರವುಂಟಾಗಿದೆ. ಬಂಧುಗಳೇ, ಇವತ್ತು ಏನು ೩೮ ವರ್ಷಗಳಿಂದಲೂ ಗ್ರಾಮ ಪ್ರದೇಶಗಳಲ್ಲಿ ನೀರಿನ ವ್ಯವಸ್ಥೆಯಾಗಲಿ ಇಲ್ಲ. ಗ್ರಾಮಂದಲ್ಲಿರತಕ್ಕ ಬಡವರಿಗೆ, ಕೈ ತುಂಬಾ ಕೆಲಸ ಸಿಕ್ಕಿಲ್ಲ, ಹೊಟ್ಟೆ ತುಂಬಾ ಅನ್ನವಿಲ್ಲ, ಮೈ ತುಂಬಾ ಬಟ್ಟೆ ಇಲ್ಲ. ಇದಕ್ಕೆ ಯಾರು ಕಾರಣ ಕರ್ತರು ಎಂಬುದರ ಬಗ್ಗೆ ರಾಜಕಾರಣಿಗಳು ತಮ್ಮ ಆತ್ಮ ಶೋಧನೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಇದನ್ನು ಮಾದರಿಯಾಗಿಟ್ಟುಕೊಂಡು ನಮ್ಮ ಸರ್ಕಾರ ಹಿಂದಿನವರು ಮಾಡದೆ ಇರುವ ತಪ್ಪುಗಳನ್ನು ಮಾಡದೆ, ಒಳ್ಳೆಯ ಕೆಲಸಗಳನ್ನು, ಅಂದರೆ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತೆ ಬರಗಾಲ ಬಂದಾಗ ಜನರು ಧೈರ್ಯದಿಂದ ಕೆಲಸ ಮಾಡತಕ್ಕ ಶಕ್ತಿ ನಮ್ಮ ಆಡಳಿತದಲ್ಲಿ ಎಲ್ಲರಿಗೂ ಕೊಡಲಿ, ಸರ್ಕಾರಕ್ಕೆ ಈ ಭಾವನೆ ಬರಲಿಯೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಸ್ನೇಹಿತರೆ, ಈಗ ನನ್ನ ಜಿಲ್ಲೆಯ ಬಗ್ಗೆ ಕೆಲವು ಮಾತುಗಳನ್ನು ತಮ್ಮ ಮುಂದೆ ಇಡುತ್ತೇನೆ. ನಮ್ಮ ತುಮಕೂರು ಜಿಲ್ಲೆಯ ಸುಮಾರು ೨,೭೨೮ ಗ್ರಾಮಗಳಿಂದ ಕೂಡಿದೆ, ಅದರಲ್ಲಿ ೨,೪೩೪ ಗ್ರಾಮಗಳಲ್ಲಿ ಅಂದರೆ ಸುಮಾರು ೫೫೪ ಗ್ರಾಮ ಪಂಚಾಯಿತಿಗಳು ಅಭಾವಕ್ಕೆ ಒಳಗಾಗಿದೆ. ಅದರಲ್ಲೂ ಮಧುಗಿರಿ ತಾಲ್ಲೂಕು, ಶಿರಾ ತಾಲ್ಲೂಕು, ಪಾವಗಡ ತಾಲ್ಲೂಕು ತೀವ್ರ ಅಭಾವಕ್ಕೆ ಒಳಗಾಗಿವೆ. ಇದರ ಜೊತೆಗೆ ಚಿಕ್ಕನಾಯಕನಹಳ್ಳಿಯ ಹುಲಿಯಾಳ, ಗುಬ್ಬಿ ತಾಲ್ಲೂಕಿನ ನಾಗಾಲ್ವಾಡಿ. ನಿಟ್ಟೂರು, ಚೇಳೂರು ಈ ಪ್ರದೇಶಗಳು ಹೆಚ್ಚಿನ ತೀವ್ರ ಬರಗಾಲಕ್ಕೆ ಒಳಗಾಗಿದೆ.

ಕೃಷಿ ಇಲಾಖೆಯವರು ಅಂದಾಜು ಮಾಡಿರುವಂತೆ, ೩,೮೧,೪೧೮ ಎಕರೆ ಪ್ರದೇಶದಲ್ಲಿ, ಸುಮಾರು ೨ ಲಕ್ಷ ೬೯ ಸಾವಿರದ ೩೦೬ ಎಕರೆ ಪ್ರದೇಶ ಅಂದರೆ ಶೇಕಡ ೭೯ಕ್ಕಿಂತ ಹೆಚ್ಚು ಭಾಗ ಅಭಾವಕ್ಕೆ ಒಳಗಾಗಿದೆ. ಈ ಜಿಲ್ಲೆಯಲ್ಲಿ ತೀವ್ರ ಅಭಾವ ಪರಿಸ್ಥಿತಿಗೆ ಒಳಗಾಗಿರುವ ಪ್ರದೇಶಗಳಲ್ಲಿ ೭೧,೮೪೦ ಸಣ್ಣ ರೈತರು, ೧,೩೮,೩೪೧ ಮಧ್ಯಮ ವರ್ಗದ ರೈತರು, ೧,೧೫,೪೩೧ ಕೃಷಿ ಕಾರ್ಮಿಕರೂ ಇದ್ದಾರೆ. ಈ ಬರಗಾಲ ಕಾರ್ಯಕ್ರಮಗಳನ್ನು ವ್ಯವಸ್ಥಿತ ರೀತಿಯಲ್ಲಿ, ದಕ್ಷತೆಯಿಂದ ನಿರಂತರವಾಗಿ ಮಾಡುವ ವ್ಯವಸ್ಥೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅಭಾವ ಪ್ರದೇಶಗಳಲ್ಲಿ ಜಾನುವಾರುಗಳಿಗೆ ಮೇವು ಸರಬರಜು ಮಾಡುವ; ಜನರಿಗೆ ಉದ್ಯೋಗ ಕೊಡುವಂತಹ ಕಾರ್ಯಕ್ರಮ ಹಾಕಿಕೊಂಡಿದೆ, ಜನರಿಗೆ ಹಸಿರು ಕಾರ್ಡ್ ಕೊಡುವ ಮೂಲಕ, ರೇಷನ್ ಕೊಡುತ್ತಿದ್ದಾರೆ. ಪಾವಗಡ ತಾಲ್ಲೂಕಿನ, ವೈ. ಎನ್. ಹೊಸಕೋಟೆಯಲ್ಲಿ ವಾಹನದ ಮೂಲಕ ನೀರನ್ನು ಸರಬರಾಜು ಮಾಡುತ್ತಿದ್ದಾರೆ. ೬೨೨ ಕೊಳವೆ ಬಾವಿಗಳನ್ನೂ, ೭೭೦೦ ಬೋರ್‌ವೆಲ್‌ಗಳನ್ನೂ ಹಾಕಿಸಿದ್ದಾರೆ ಇವು ದುರಸ್ತಿಗೆ ಬಂದ ತಕ್ಷಣ, ದುರಸ್ತಿ ಮಾಡುವ ಕಾರ್ಯಕ್ರಮ ಇದೆ ಕುಡಿಯುವ ನೀರಿಗೆ ಹೆಚ್ಚು ತೊಂದರೆ ಆಗದಂತೆ ಹೆಚ್ಚು ಹೆಚ್ಚು ನೀರನ್ನು ಕೊಡತಕ್ಕ ಕಾರ್ಯಕ್ರಮ ಹಾಕಿಕೊಂಡಿದೆ ಮೇವಿಗಾಗಿ ಪ್ರತಿ ತಿಂಗಳೂ ಸುಮಾರು ಜಿಲ್ಲೆಗೆ ೯ ಸಾವಿರ ಟನ್ ಮೇವು ಬೇಕಾಗಿದೆ. ಅದಕ್ಕಾಗಿ ಜಿಲ್ಲೆಯ ರೇಷ್ಮೆ ಇಲಾಖೆಯವರು ಕೃಷಿ ಇಲಾಖೆಯವರು ಪಶುಸಂಗೋಪನಾ ಇಲಾಖೆಯವರು ಸರ್ಕಾರಿ ಫಾರಂಗಳನ್ನು ಮಾಡಿ ಹೆಚ್ಚು ಹೆಚ್ಚು ಹುಲ್ಲನ್ನು ಬೆಳೆಯತಕ್ಕ ಕಾರ್ಯಕ್ರಮ ಇದೆ. ಎರಡು ಸಾವಿರ ಟನ್ ಮೇವನ್ನು ಸಾಗಿಸುವಂತಹ ವ್ಯವಸ್ಥೆ ಇದೆ. ಇವೆಲ್ಲವೂ ಬಡ ರೈತರಿಗೆ ಕೊಡುವಂತಹ ವ್ಯವಸ್ಥೆ ಆಗಿದೆ. ಅಲ್ಲದೆ ಕೆರೆ ಅಂಗಳದಲ್ಲಿ ಹುಲ್ಲು ಬೆಳೆಯತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಕೃಷಿ ಕಾರ್ಮಿಕರಿಗೆ ಕೇಂದ್ರ ಸಹಕಾರಿ ಬ್ಯಾಂಕ್‌ನಿಂದ ಸಾಲ ಕೊಡುವಂತಹ ವ್ಯವಸ್ಥೆಯೂ ಇದೆ. ಇದರಿಂದ ಜನ ಹುಮ್ಮಸ್ಸಿನಿಂದ ಮುಂದೆ ಬರುತ್ತಿದ್ದಾರೆ. ಈ ರೀತಿ ಬೆಳದಂಥ ಹುಲ್ಲಿಗೆ ಸರ್ಕಾರ ಸೂಕ್ತವಾದಂಥ ರೇಟನ್ನು ಕೊಟ್ಟು, ಹುಲ್ಲು ಯಾರಿಗೆ ಬೇಕೋ ಅವರಿಗೆ ಕೊಡತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ೫೯೭ ಟನ್ ಹುಲ್ಲನ್ನು ಶೇಖರಿಸಿ ಇಟ್ಟಿದ್ದಾರೆ. ತಾರೀಖು ೧೫-೧-೧೯೮೬ ರಿಂದ ಮಧುಗಿರಿ ತಾಲ್ಲೂಕಿನಲ್ಲಿ, ಪಾವಗಡ ತಾಲ್ಲೂಕಿನಲ್ಲಿ ಮತ್ತು ಶಿರಾ ತಾಲ್ಲೂಕಿನಲ್ಲಿ ಗೋಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಅನೇಕ ರೈತರು ಗೋಶಾಲೆಗಳಲ್ಲಿ ತಮ್ಮ ದನಗಳನ್ನು ತಂದು

ಬಿಡುತ್ತಿದ್ದಾರೆ. ನಿರಂತರವಾಗಿ ಸಾಕಷ್ಟು ಮೇವನ್ನು ಕೊಡತಕ್ಕ ವ್ಯವಸ್ಥೆ ಇದೆ, ನೀರಿನ ವ್ಯವಸ್ಥೆ ಇದೆ ಔಷಧಿ ವ್ಯವಸ್ಥೆ ಮಾಡಿದ್ದಾರೆ. ಎಲ್ಲಾ ಜಾನುವಾರುಗಳಿಗೂ ಜೀವವಿಮೆ ಮಾಡಿ, ರೈತನಿಗೆ ಒಂದು ನಂಬಿಕೆ ಬರತಕ್ಕಂಥ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಈ ಡಿಸೆಂಬರ್ ಅಂತ್ಯದವರೆಗೆ ಸರ್ಕಾರಿ ಇಲಾಖೆಯಿಂದ ೩೬೫ ಟನ್, ಹೊರ ಜಿಲ್ಲೆಗಳಿಂದ ೫೯೭ ಟನ್, ಮಂತಿಕೆ ಮುಖಾಂತರ ಒಂದು ಸಾವಿರ ಟನ್ ಹುಲ್ಲು ಸಂಗ್ರಹವಾಗುತ್ತದೆ. ಅಭಾವ ಪ್ರದೇಶಗಳಲ್ಲಿ ರಸ್ತೆ ಕಾಮಗಾರಿಗಳು, ಕೆರೆ ಕಾಮಗಾರಿ, ಅಣೆಕಟ್ಟುಗಳ ಕೆಲಸ ಸಾಕಷ್ಟು ನಡೆಯುತ್ತಾ ಇದೆ. ಕೆರೆಯಲ್ಲಿ ಹೂಳು ತೆಗೆಯತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ನಮ್ಮ ಜಿಲ್ಲೆಯಲ್ಲಿ ೨೭೬ ಲಕ್ಷ ರೂಪಾಯಿಗಳ ಕಾಮಗಾರಿ ಕೆಲಸಗಳನ್ನು ಮಾಡಿದ್ದಾರೆ. ಅದರಲ್ಲಿ ಇವತ್ತು ಪ್ರತಿ ದಿನ ೧೦,೧೪೦ ಜನ ಕೆಲಸ ಮಾಡುತ್ತಿದ್ದಾರೆ. ೧೭.೫೦ ಲಕ್ಷ ರೂಪಾಯಿಗಳ ಅಂದಾಜಿನ ೫೮ ಕಾಮಗಾರಿಗಳ ಕೆಲಸ ನಡೆಯುತ್ತಾ ಇದೆ. ಮಾರ್ಚಿ, ಏಪ್ರಿಲ್‌ನಿಂದ ಸುಮಾರು ೨೦,೦೦೦ ಜನಗಳು ಕೆಲಸ ಮಾಡುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪ್ರತಿ ತಿಂಗಳೂ ೫೦ ಲಕ್ಷಕ್ಕೂ ಹೆಚ್ಚು ಸಹಾಯ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಜಿಲ್ಲೆಯಲ್ಲಿ ೧,೯೬,೦೦೦ ಹಸಿರು ಕಾರ್ಡುಗಳನ್ನು ಕೊಟ್ಟಿದ್ದು, ಅಕ್ಕಿ, ರಾಗಿ ಕೊಡತಕ್ಕಂಥ ವ್ಯವಸ್ಥೆ ಇದೆ. ೭೨೦ ನ್ಯಾಯ ಬೆಲೆ ಅಂಗಡಿಗಳ ಮೂಲಕ ಪ್ರತಿ ತಿಂಗಳೂ ಜನತೆಗೆ ರೇಷನ್ ಹಂಚುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ತೀವ್ರವಾದ ಅಭಾವ ಪರಿಹಾರ ನಡೆಯುತ್ತಿರುವುದರಿಂದ, ಮುಂದೆ ಮೇ, ಜೂನ್ ತಿಂಗಳಲ್ಲಿ ಮಳೆ ಆದಂಥ ಸಂದರ್ಭದಲ್ಲಿ ರೈತರ ಹತ್ತಿರ ಹಣ ಇರುವುದಿಲ್ಲ, ಗೊಬ್ಬರ ಇರುವುದಿಲ್ಲ, ಬೀಜ ಇರುವುದಿಲ್ಲ. ಅದಕ್ಕೋಸ್ಕರ ಸರ್ಕಾರ ಯಾವ ಪ್ರದೇಶದಲ್ಲಿ ಭೀಕರ ಬರ ಇದೆ ಅಂತಹ ಕಡೆ ರೈತರಿಗೆ ಉಚಿತವಾಗಿ ಬೀಜಗಳನ್ನೂ, ಗೊಬ್ಬರಗಳನ್ನೂ ಕೊಟ್ಟು ರೈತ ತನ್ನ ಕಾಲಿನ ಮೇಲೆ ನಿಂತುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕೆಲವು ಭಾಗಗಳಲ್ಲಿ ಗಂಜಿ ಕೇಂದ್ರಗಳನ್ನು ಪ್ರಾರಂಭಿಸಬೇಕಾಗುತ್ತದೆ. ಈ ಕಾರ್ಯಕ್ರಮಗಳನ್ನೂ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಲ್ಲದೆ ಗ್ರಾಮಾಂತರ ಪ್ರದೇಶದ ತೀವ್ರ ಬರಗಾಲದಿಂದ ಕೂಡಿದ ಪ್ರದೇಶಗಳಲ್ಲಿನ ಮಾತೆಯರಿಗೆ ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ತುಮಕೂರು ಜಿಲ್ಲೆಗೆ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡದೇಹೋದರೆ, ಬರಗಾಲದಲ್ಲಿ ಅಷ್ಟೇ ಕಷ್ಟವಾಗುತ್ತದೆ. ತಮ್ಮ ಬೇರೆ ಎಲ್ಲಾ ಕಾರ್ಯಕ್ರಮಗಳನ್ನೂ ರದ್ದುಗೊಳಿಸಿ, ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತುಮಕೂರು ಜಿಲ್ಲೆಗೆ ಈಗಾಗಲೇ ಪ್ರಾರಂಭವಾಗಿರುವ ಹೇಮಾವತಿ ಯೋಜನೆಯನ್ನು ಮುಗಿಸಿ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಈ ಹೇಮಾವತಿ ಯೋಜನೆಯಿಂದ, ಸುಮಾರು ೪ ಲಕ್ಷ ಹೆಕ್ಟೇರ್‌ಗೆ ನೀರು ಒದಗುತ್ತದೆ. ಈ ವಿಚಾರದಲ್ಲಿ ಶಾಸಕರೂ ಕೂಡ ಜನತೆಯ ಸಂಪರ್ಕ ಮಾಡಿದ್ದಾರೆ. ಈ ಹೇಮಾವತಿ ಯೋಜನೆಯ ವ್ಯಾಪ್ತಿಯಲ್ಲಿ ಬರತಕ್ಕ ನಾಲ್ಕು ಲಕ್ಷ ಎಕರೆಯ ಜನರೂ, ಒಂದು ಎಕರೆಗೆ ೫೦೦ ರೂಪಾಯಿಗಳಂತೆ ಕೊಡಲು ಮುಂದೆ ಬರುತ್ತಿದ್ದಾರೆ. ಇದನ್ನು ಉಪಯೋಗಿಸಿಕೊಂಡು, ನಮ್ಮ ಜಿಲ್ಲೆಗೆ ಹೇಮಾವತಿ ಯೋಜನೆಯನ್ನು ಪೂರ್ಣ ಮಾಡಿಕೊಡಬೇಕು. ಬೆಂಗಾಡು ಆಗಿರತಕ್ಕಂಥ ತುಮಕೂರು ಜಿಲ್ಲೆಯ ಭೂಮಿಯನ್ನು ಹಸಿರನ್ನಾಗಿ ಮಾಡಬೇಕೆಂದು ನಮ್ಮ ನೆಚ್ಚಿನ ನಾಯಕರಾದ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಕೇಳಿಕೊಳ್ಳುತ್ತೇನೆ. ಈ ಯೋಜನೆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ, ಈ ಜಿಲ್ಲೆಗೆ ಮುಂದೆ ಬರಗಾಲ ಬರದಹಾಗೆ ನೋಡಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಗಂಭೀರವಾದಂಥ ಬರಗಾಲದ ವಾತಾವರಣದಲ್ಲಿ, ನಾವು ಶಾಸನ ಸಭೆಯಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದೇವೆ. ಮೊದಲನೆಯದಾಗಿ, ಬೆಳಗಾಂ ಜಿಲ್ಲೆ ಎಂದ ತಕ್ಷಣ, ಸಕ್ಕರೆ ಕಾರ್ಖಾನೆಗಳು ಇರತಕ್ಕ, ಕಬ್ಬು ಬೆಳೆಯುತಕ್ಕ ಜಿಲ್ಲೆ ಎಂಬ ಕಲ್ಪನೆ ಬರುತ್ತದೆ. ಬೆಳಗಾಂ ಜಿಲ್ಲೆಯಲ್ಲಿ ೧೦ ತಾಲ್ಲೂಕುಗಳಿವೆ. ಈ ೧೦ ತಾಲ್ಲೂಕುಗಳಲ್ಲಿ ೩ ತಾಲ್ಲೂಕುಗಳು ಭೀಕರವಾದ ಬರಗಾಲಕ್ಕೆ ತುತ್ತಾಗಿವೆ. ಬೆಳಗಾಂ ಜಿಲ್ಲೆಯ ಪರವಾಗಿ ಮಾತನಾಡುವುದಾದರೆ, ಅಲ್ಲಿ ೩೦ ಲಕ್ಷ ಜನಸಂಖ್ಯೆ ಇದೆ, ೧೦ ಲಕ್ಷ ಜಾನುವಾರುಗಳ ಸಂಖ್ಯೆ ಇದೆ. ಈ ೧೦ ಲಕ್ಷ ಜಾನುವಾರುಗಳಲ್ಲಿ ೫ ಲಕ್ಷ ಜಾನುವಾರುಗಳು ಇವತ್ತು ಬರಗಾಲಕ್ಕೆ ತುತ್ತಾಗಿವೆ. ಶೇಕಡ ೫೦ ಭಾಗ ಜಾನುವಾರುಗಳಿಗೆ ಕಷ್ಟವಾಗಿದೆ.

೨-೦೦ ಪಿ.ಎಂ.

ಈ ಬರಗಾಲಕ್ಕೆ ಯಶಸ್ವಿಯಾದ ತಾಲ್ಲೂಕು ಎಂದರೆ ನನ್ನ ತಾಲ್ಲೂಕು ಅಥಣಿ ಈ ತಾಲ್ಲೂಕಿನಲ್ಲಿ ಯಾವಾಗಲೂ ಬರಗಾಲ ಇದೆ. ಅಲ್ಲದೆ ಬೆಳಗಾಂ ಜಿಲ್ಲೆಯ ಸೌದತ್ತಿ, ರಾಮದುರ್ಗ, ಅಥಣಿ ಈ ೩ ತಾಲ್ಲೂಕುಗಳೂ ಕೂಡ ಭೀಕರ ಬರಗಾಲ ಪ್ರದೇಶವಾಗಿದೆ. ಈಗಾಗಲೇ ಸರ್ಕಾರದವರು ಅಲ್ಲಿ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎನ್ನುವುದರ ಬಗ್ಗೆ ಸ್ಪಷ್ಟ ಚಿತ್ರವನ್ನು ಮಾನ್ಯ ಕಂದಾಯ ಮಂತ್ರಿಗಳು ಕೊಟ್ಟಿದ್ದಾರೆ ಅಥಣಿ ತಾಲ್ಲೂಕು ಯಾವಾಗಲೂ ಸಹ ಬರಗಾಲಕ್ಕೆ ತುತ್ತಾಗುವ ಪ್ರದೇಶ ಎಂದು ಎಲ್ಲರಿಗೂ ಗೊತ್ತು. ಹಿಂದೆ ಮನಸ್ಸು ಮಾಡಿದ್ದರೆ ಈ ತಾಲ್ಲೂಕು ಬರಗಾಲಕ್ಕೆ ತುತ್ತಾಗದಂತೆ ಮಾಡಬಹುದಾಗಿತ್ತು. ತಮಗೆ ಹೇಳಬೇಕಾದರೆ ೧೯೭೨-೭೩ನೇ ಇಸವಿಯಲ್ಲಿ ಹಿಪ್ಪರಗಿ ಆಣೆಕಟ್ಟಿಗೆ ೫ನೇ ಪಾಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡಬೇಕೆಂದಿದ್ದುದನ್ನು ತೆಗೆಸಿಹಾಕಿದರು. ಆದುದರಿಂದ ಆ ಭಾಗದಲ್ಲಿ ಇಂದು ಸಾವಿರಾರು ಜನರು, ಲಕ್ಷಾಂತರ ಜನರು ಈ ಬರಗಾಲಕ್ಕೆ ತುತ್ತಾಗಿದ್ದಾರೆ. ಅಲ್ಲಿ ಬರಗಾಲ ಉದ್ಭವವಾಗುವುದಕ್ಕೆ ಕಾರಣರು ಯಾರು? ಈ ಸರ್ಕಾರ ಬಂದಮೇಲೆ ಸುದೈವದಿಂದ ೭ನೇ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವಂತೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಪ್ರಯತ್ನ ಮಾಡಿದರು. ಅವರು ಡೆಲ್ಲಿಗೆ ಹೋದಾಗ ಇದರ ಬಗ್ಗೆ ಶ್ರೀಮಾನ್ ಶಂಕರಾನಂದ್‌ರವರ ಜೊತೆಯಲ್ಲಿ ಸಮಾಲೋಚನೆ ಮಾಡಿ, ನಂತರ ಪ್ಲಾನಿಂಗ್ ಕಮೀಷನ್ ರವರೊಂದಿಗೂ ಸಹ ಮಾತನಾಡಿ, ಇದನ್ನು ಪ್ಲಾನಿಂಗ್ ಕಮೀಷನ್‌ನಲ್ಲಿ ಅಪ್ರೂವ್ ಮಾಡಿಸಿಕೊಂಡಿದ್ದಾರೆ. ಅದಕ್ಕಾಗಿ ಅಥಣಿ ತಾಲ್ಲೂಕಿನ ಜನರ ಪರವಾಗಿ ನಾನು ಅವರಿಗೆ ಅಪಾರವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ನಮ್ಮ ಅಥಣಿ ತಾಲ್ಲೂಕಿನ ಬರಗಾಲದ ಬಗ್ಗೆ ಮಾತನಾಡಿದರಲ್ಲಾ ಇವರು ಯಾವತ್ತು ಅಲ್ಲಿಗೆ ಬಂದಿದ್ದರೋ ನನಗೆ ಗೊತ್ತಿಲ್ಲ. ವಿರೋಧಪಕ್ಷದ ನಾಯಕರಾದ ಶ್ರೀ ಎಸ್. ಬಂಗಾರಪ್ಪನವರು ಅಲ್ಲಿಗೆ ೧೦ ನಿಮಿಷ ಬಂದು ಭಾಷಣ ಮಾಡಿದರು, ಇವರು ಯಾವತ್ತು ಬಂದಿದ್ದರೋ ನನಗೆ ಗೊತ್ತಿಲ್ಲ. ಅಲ್ಲಿಂದ ೬೦ ಸಾವಿರ ಜನರು ಬೇರೆ ಕಡೆ ವಲಸೆ ಹೋಗಿದ್ದಾರೆ ಎಂದು ಹೇಳಿದರು. ಇದು ಪತ್ರಿಕೆಯಲ್ಲೂ ಸಹ ಬಂದಿದೆ. ಇದರ ಸ್ಪಷ್ಟ ಚಿತ್ರವನ್ನು ತಮಗೆ ಹೇಳಬಯಸುತ್ತೇನೆ. ನನ್ನ ಅಥಣಿ ಕ್ಷೇತ್ರದ ಜನಸಂಖ್ಯೆ ೩ ಲಕ್ಷ, ಈ ಭಾಗಗಳಲ್ಲಿ ಯಾವಾಗಲೂ ಸಹ ಇಲ್ಲಿ ಬರಗಾಲ ಇರಲಿ, ಇಲ್ಲದೇ ಇರಲಿ ೬೦ ಸಾವಿರ ಜನರು ನೆರೆರಾಜ್ಯದ ಮಹಾರಾಷ್ಟ್ರದ ರಬಕವಿ, ಬನಹಟ್ಟಿ ಕಬ್ಬು ಕೊಯಿಲಿನ ಕಾಲದಲ್ಲಿ ಹೋಗುತ್ತಾರೆ. ಎತಕ್ಕೆಂದರೆ ಅಲ್ಲಿ ಅವರಿಗೆ ದಿನಕ್ಕೆ ೧೫ ರೂಪಾಯಿ ಕೂಲಿ ಸಿಕ್ಕುತ್ತದೆ ಇಲ್ಲಿ ಅವರಿಗೆ ದಿನಕ್ಕೆ ೩-೪ ರೂಪಾಯಿ ಕೂಲಿ ಸಿಗುತ್ತದೆ. ಇಲ್ಲಿ ಕೂಲಿ ಕಡಿಮೆ ಎಂದು ಅಲ್ಲಿಗೆ ಯಾವಾಗಲೂ ಇಲ್ಲಿಂದ ೩೦-೪೦ ಸಾವಿರ ಜನರು ಹೋಗುತ್ತಾರೆ. ಇಲ್ಲಿ ಬರಗಾಲ ಇರಲಿ ಇಲ್ಲದೇ ಇರಲಿ ಪ್ರತಿವರ್ಷವೂ ಬೇರೆ ಕಡೆಗೆ ಹೋಗುತ್ತಾರೆ. ಹಾಗೆ ಹೋದಾಗ ಅಲ್ಲಿ ಕುಯ್ಯಲು ಮುಗಿದ ಮೇಲೆ, ಇಲ್ಲಿ ಮಳೆ ಬಿದ್ದಾಗ ಮತ್ತೆ ಕೂಡಲೇ ಇಲ್ಲಿಗೆ ವಾಪಸ್ಸು ಬಂದುಬಿಡುತ್ತಾರೆ. ಹೀಗಿರುವಾಗ ೬೦ ಸಾವಿರ ಜನರು ವಲಸೆ ಹೋಗಿದ್ದಾರೆ ಎಂದು ಹುಯ್ಯಲೆಬ್ಬಿಸುವುದು ಸರಿಯಿಲ್ಲ.

ಇನ್ನು ಇಲ್ಲಿ ಕೂಲಿ ಕೊಡುವ ವಿಷಯದಲ್ಲಿ ಸರ್ಕಾರಕ್ಕೆ ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಏನೆಂದರೆ ಈಗ ಕೂಲಿ ಒಂದು ದಿನಕ್ಕೆ ೭ ರೂಪಾಯಿ ೮೦ ಪೈಸೆಯಂತೆ ಏನು ಕೊಡುತ್ತಿದ್ದಾರೋ, ಅದನ್ನು ಯಾವ ಲೆಕ್ಕಾಚಾರದಲ್ಲಿ ಕೊಡುತ್ತಿದ್ದಾರೋ ಗೊತ್ತಿಲ್ಲ. ಅದನ್ನು ರೌಂಡ್ ಫಿಗರ್ ಮಾಡಿ ೮ ರೂಪಾಯಿನಂತೆ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅಲ್ಲದೆ ಕೊಡುವಾಗ ೨೦ ಪೈಸೆ ಚಿಲ್ಲರೆ ಸಿಕ್ಕದೇ ಇರುವುದರಿಂದ ಅಧಿಕಾರಿಗಳಿಗೆ ಕರೆಕ್ಟ್ ಆಗಿ ೭-೮೦ ಕೊಡುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಅದನ್ನು ರೌಂಡ್ ಫಿಗರ್ ಮಾಡಬೇಕು ಎಂದು ಹೇಳುತ್ತೇನೆ. ಇನ್ನೂ ಮಾನ್ಯ ಸದಸ್ಯರು ಅಲ್ಲಲ್ಲಿ ೨ ಸಾವಿರ ಜನಕ್ಕೂ ಕೆಲಸ ಕೊಟ್ಟಿಲ್ಲ ಎನ್ನುವ ಮಾತನ್ನು ಹೇಳಿದರು. ನಾನು ಕಣ್ಣಾರೆ ನೋಡಿದ್ದೇನೆ. ಈ ವಿಚಾರದಲ್ಲಿ ಬಹುಮುಖ್ಯವಾದ ಒಂದು ವಿಷಯವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲೇಬೇಕಾಗಿದೆ. ನಿಜವಾಗಿ ಹೇಳಬೇಕಾದರೆ, ನನ್ನ ಕ್ಷೇತ್ರವನ್ನು ತೆಗೆದುಕೊಂಡರೆ ಅಲ್ಲಿ ಕೂಲಿಗಾಗಿ ೨ ಸಾವಿರ ಜನರೂ ಸಹ ಸಿಕ್ಕುವುದಿಲ್ಲ. ಒಂದು ಮನೆಯಲ್ಲಿ ಮುದುಕರು ಇರುತ್ತಾರೆ, ಚಿಕ್ಕಚಿಕ್ಕಮಕ್ಕಳು ಇರುತ್ತಾರೆ, ಅವರನ್ನೆಲ್ಲಾ ಲೆಕ್ಕಕ್ಕೆ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ: ಬರಗಾಲ ಪ್ರದೇಶದಲ್ಲಿ ಮ್ಯಾಕ್ಸಿಮಮ್ ಎಂದರೆ ೫೦೦-೬೦೦ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬಹುದು.

ಉದಾಹರಣೆಗೆ ಹೇಳುವುದಾದರೆ ಒಂದು ಮನೆಯಲ್ಲಿ ೧೦ ಜನ ಇದ್ದರೆ ಆ ಮನೆಯಲ್ಲಿ ಒಬ್ಬ ಗಂಡಸಿಗೆ ಮತ್ತು ಒಂದು ಹೆಣ್ಣಾಳಿಗೆ ಕೆಲಸ ಕೊಡಲಿ, ಎಲ್ಲರಿಗೂ ಕೆಲಸ ಕೊಡಿ ಎಂದು ಕೇಳಿದರೆ ಬೇರೆಯವರು ಉಪವಾಸ ಮಾಡಬೇಕಾಗಿ ಬರುತ್ತದೆ. ಆದುದರಿಂದ ನನ್ನ ಒಂದು ಸಲಹೆ ಒಂದು ಗಂಡಾಳು ಮತ್ತು ಒಂದು ಹೆಣ್ಣಾಳಿಗೆ ಕೆಲಸ ಕೊಡಬೇಕೆಂದು ಹೇಳುತ್ತೇನೆ. ಜೊತೆಗೆ ಒಂದು ಹೆಣ್ಣಾಳಿಗೆ ಮತ್ತು ಒಂದು ಗಂಡಾಳಿಗೆ ಒಂದು ದಿವಸಕ್ಕೆ ೮ ರೂಪಾಯಿಯಂತೆ ೬ ದಿವಸವೂ ಕೂಲಿ ಸಿಗುವ ಹಾಗೆ ಮಾಡಬೇಕು. ಕನಿಷ್ಟಪಕ್ಷ ಈರೀತಿ ಲೆಕ್ಕಾಚಾರ ಹಾಕಿದರೆ ಅವರಿಗೆ ಒಟ್ಟು ಒಂದು ವಾರಕ್ಕೆ ಇಬ್ಬರಿಗೂ ಸೇರಿ ೯೬ ರೂಪಾಯಿ ಬಂದ ಹಾಗಾಗುತ್ತದೆ ಅದರಲ್ಲಿ ಅವರು ೧೬ ರೂಪಾಯಿ ಧಾನ್ಯ ಏನು ತೆಗೆದುಕೊಳುತ್ತಾರ ಅದರಲ್ಲಿ ಅಕ್ಕಿ ೨ ಕೆಜಿ ಏನು ಕೊಡುತ್ತೀರೋ ಅದರ ಜೊತೆಗೆ ಜೋಳ ಮತ್ತು ಗೋಧಿಯನ್ನೂ ಸಹ ಕೊಡಬೇಕು ಎಂದು ಹೇಳುತ್ತೇನೆ. ಅಲ್ಲಲ್ಲಿ ಕೆಲವರು ಇದನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ, ಅವರು ಕೆಲಸ ಕೊಡುವಾಗ ಕೆಲವನ್ನು ಕಾಂಟ್ರಾಕ್ಟ್ ಬೇಸಿಸ್ ಪದ್ಧತಿಯಲ್ಲಿ ಕೊಡುತ್ತಾರೆ. ಇದರ ಬಗ್ಗೆ ಅವರು ಗಮನಕೊಡಬೇಕು. ಇನ್ನೊಂದು ಬಹು ಮುಖ್ಯವಾದ ವಿಷಯ ಎನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಎಲ್ಲರಿಗೂ ಅನುಕೂಲವಾಗಲಿ, ಆದರ್ಶವಾಗಿರಲಿ ಎಂದು ಕಛೇರಿಗಳಲ್ಲಿ ಕೆಲಸಮಾಡುವ ವೇಳೆಯನ್ನು ವಾರಕ್ಕೆ ೫ ದಿವಸ ಅಂತ ಮಾಡಿದರು. ಈಗ ಆದರಿಂದ ಎಲ್ಲರಿಗೂ ಕೂಡ ತೊಂದರೆ ಯಾಗಿದೆ. ತಮಗೆ ಹೇಳಬೇಕಾದರ ಹಿರಿಯ ಅಧಿಕಾರಿಗಳು ಮಂತ್ರಿಗಳಿಗೆ, ಶಾಸಕರಿಗೆ ಸರಿಯಾಗಿ ಸಿಕ್ಕುವುದಿಲ್ಲ. ವಾರಕ್ಕೆ ೫ ದಿವಸ ಅಂತ ಏನು ಮಾಡಿದ್ದೀರಿ, ಸೋಮವಾರದಿಂದ ಶುಕ್ರವಾರದವರೆಗೆ ಕೆಲಸ ಮಾಡಬೇಕು ಅಂತ ಏನು ಮಾಡಿದ್ದೀರಿ ಆ ಸಂದರ್ಭದಲ್ಲಿ ಶಾಸಕರುಗಳಿಗಾಗಲಿ, ಮಂತ್ರಿಗಳಿಗಾಗಲಿ ಮಂತ್ರಿಗಳಿಗಾಗಲಿ ಅವರು ಹೋದಾಗ ಸಿಕ್ಕದೇ ಇರುವುದರಿಂದ ಇದನ್ನು ಬದಲಾವಣೆ ಮಾಡಿ ವಾರಕ್ಕೆ ೬ ದಿವಸವೂ ಕೂಡ ಕೆಲಸಮಾಡುವಂತೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸು ತ್ತೇನೆ. ವಾರಕ್ಕೆ ೫ ದಿವಸ ಅಂತ ತಾವು ಏನು ಒಂದು ಸದುದ್ದೇಶ ಇಟ್ಟುಕೊಂಡು ಮಾಡಿದಿರೋ, ಅವರಿಗೆ ಸ್ವಲ್ಪ ವಿಶ್ರಾಂತಿ ಸಿಗಲಿ ಎಂದು ಏನು ಮಾಡಿದಿರೋ ಅದರಿಂದ ಈಗ ಅದರಲ್ಲೂ ಬರಗಾಲ ಇರುವುದರಿಂದ ಇದರಿಂದ ತೊಂದರೆ ಯಾಗುತ್ತದೆ. ಈ ಸಂದರ್ಭದಲ್ಲಿ ಅಂದರೆ ಈಗ ಬರಗಾಲ ಇರುವು ದರಿಂದ ವಾರಕ್ಕೆ೬ ದಿವಸ ಅಲ್ಲ ೭ ದಿವಸವೂ ಕೆಲಸ ಮಾಡಬೇಕಾಗುವ ಸಂದರ್ಭ ಇರುವುದರಿಂದ, ಈಗ ಇರತಕ್ಕಂತ ಕಛೇರಿಯ ಟೈಂ ಅನ್ನು ಬದಲಾವಣೆ ಮಾಡಿ ವಾರಕ್ಕೆ ೬ ದಿವಸ ಕೆಲಸ ಮಾಡುವ ಹಾಗೆ ಮಾಡಬೇಕು ಎಂದು ನಾನು ಕಳಕಳಿಯಿಂದ ಹೇಳುತ್ತೇನೆ.

ಇನ್ನು ಈ ಬರಗಾಲದ ದುಡ್ಡಿನ ಹಂಚಿಕೆಯ ಪ್ರಮಾಣದ ಬಗ್ಗೆ ಹೇಳಬೇಕಾದರೆ, ಮಾನ್ಯ ಕಂದಾಯ ಮಂತ್ರಿಗಳು ಡೆಪ್ಯೂಟಿ ಕಮೀಷನರಿಗೆ ಆದೇಶ ಕೊಟ್ಟಿದ್ದಾರೆ. ಏನೆಂದರೆ ೧೦೦ರಲ್ಲಿ ೫೦ ಪರ್ಸೆಂಟ್ ಲಿಫ್ಟ್ ಇರಿಗೇಷನ್‌ಗೆ, ೩೦ ಪರ್ಸೆಂಟ್ ಫಾರೆಸ್ಟ್ ಅಫಾರೆಸ್ಟೇಷನ್‌ಗೆ, ೧೦ ಪರ್ಸೆಂಟ್ ರೋಡ್‌ಗೆ, ೧೦ ಪರ್ಸೆಂಟ್ ಬಿಲ್ಡಿಂಗ್‌ಗೆ ಖರ್ಚು ಮಾಡಬೇಕು ಎಂದು ಹೇಳಿದ್ದಾರೆ. ನಾನು ಹೇಳು ತ್ತೇನೆ, ಈ ಲಿಫ್ಟ್ ಇರಿಗೇಷನ್‌ಗೆ ಕೊಟ್ಟಿರುವ ಹಣವನ್ನು ಇನ್ನೂ ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಶಾಶ್ವತವಾದಂಥಾ ಕೆಲಸಗಳನ್ನು ತೆಗೆದುಕೊಂಡು ಈ ಬರಗಾಲ ಇರುವಂಥಾ ಪ್ರದೇಶಗಳಲ್ಲಿ ಮಾಡಿದರೆ ಮುಂದೆ ಬರತಕ್ಕಂಥ ಬರಗಾಲ ಸ್ವಲ್ಪ ಕಡಿಮೆಯಾಗುತ್ತದೆ. ಅದರಿಂದ ಈ ಅರಣ್ಯ ಅಭಿವೃದ್ಧಿಗೆ ೩೦ ಪರ್ಸೆಂಟ್ ಅಂತ ಏನು ಹಣ ಇಟ್ಟಿದ್ದೀರಿ ಇದನ್ನು ೬೦ ಪರ್ಸೆಂಟಿಗೆ ಏರಿಸಬೇಕೆಂದು ಹೇಳುತ್ತೇನೆ. ತಾವು ಒಂದು ಕಡೆ ಅರಣ್ಯ ಅಭಿವೃದ್ಧಿಯಾಗಬೇಕೆಂದು ಹೇಳುತ್ತೀರಿ, ಇನ್ನೊಂದು ಕಡೆ ಅರಣ್ಯವನ್ನು ಕಡಿಯುತ್ತಾ ಇದ್ದಾರೆ, ಅದನ್ನು ಬೆಳಸಬೇಕೆಂದು ಹೇಳುತ್ತೀರಿ. ಅರಣ್ಯ ಬೆಳೆಸುವುದರಲ್ಲಿ ಮಾಡ ತಕ್ಕಂಥಾ ಕೆಲಸ ಅಷ್ಟು ತೃಪ್ತಿಕರವಾಗಿ ಕಂಡುಬರುತ್ತಾ ಇಲ್ಲ. ಇದರಲ್ಲಿ ಏನಾಗಿದೆ ಎಂದರೆ. ಅರಣ್ಯ ಬೆಳೆಸುವುದಕ್ಕೆ ಪ್ರತಿಯೊಬ್ಬರೂ ೧೦ ಗುಂಡಿಯನ್ನು ತೆಗೆಯಬೇಕು, ಒಂದು ದಿವಸಕ್ಕೆ ಒಂದು ಗುಂಡಿಗೆ ೧೦ ರೂಪಾಯಿನಂತೆ ಕೊಡುತ್ತೇವೆಂದು ಹೇಳಿದ್ದೀರಿ. ಇದರಲ್ಲಿ ಲೋಪ ಇದೆ- ಏನೆಂದರೆ ಅವನು ದಿನಾಲೂ ಒಂದು ಗುಂಡಿ ತೆಗೆದು ೧೦ ರೂಪಾಯಿ ತೆಗೆದುಕೊಳ್ಳುವುದಿಲ್ಲ, ಏನು ಮಾಡುತ್ತಾನೆಂದರೆ ಒಂದೇ ದಿನದಲ್ಲಿ ೧೦ ಗುಂಡಿಯನ್ನೂ ಸಹ ತೆಗೆದು ೧೦೦ ರೂಪಾಯಿ ತೆಗೆದುಕೊಳ್ಳುತ್ತಾನೆ. ಅಲ್ಲಿಗೆ ೧೦ ರೂಪಾಯಿನ ಕೆಲಸಕ್ಕೆ ೧೦೦ ರೂಪಾಯಿ ಕೊಟ್ಟ ಹಾಗಾಗುತ್ತದೆ. ಅವನ ದಿನದ ಲೆಕ್ಕಾಚಾರದ ಕೂಲಿ ತೆಗೆದು ಕೊಂಡರೆ ನ್ಯಾಯವಾಗಿ ೧೦ ರೂಪಾಯಿ ಕೊಡಬೇಕು, ಇನ್ನು ೯೦ ರೂಪಾಯಿ ಜಾಸ್ತಿ ಕೊಟ್ಟ ಹಾಗಾಗುತ್ತದೆ, ಇದರಿಂದ ನಮಗೆ ೯೦ ರೂಪಾಯಿ ನಷ್ಟವಾಗುವುದಿಲ್ಲವೇ? ತಾವು ಇದರಲ್ಲಿ ಅರಣ್ಯ ಅಭಿವೃದ್ಧಿಗಾಗಿ ೩೦ ಪರ್ಸೆಂಟ್ ಇಟ್ಟಿದ್ದೇವೆಂದು ಹೇಳಿದ್ದೀರಿ. ಅದು ಬಹಳ ಕಡಿಮೆ, ಜಾಸ್ತಿ ಮಾಡ

ಬೇಕು ಎಂದು ಹೇಳುತ್ತೇನೆ. ಹಾಗೆಯೇ ಏತ ನೀರಾವರಿ ಯೋಜನೆಯ ಕೆಲಸಕ್ಕೆ ಇಟ್ಟಿರತಕ್ಕಂಥಾ ಹಣವನ್ನು ಸಹ ಜಾಸ್ತಿ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ವಿಷಯ ಏನೆಂದರೆ, ಗೋಶಾಲೆ ಬಗ್ಗೆ ಮಾನ್ಯ ಸದಸ್ಯರೊಬ್ಬರು ಒಂದು ಮಾತು ಹೇಳಿದರು. ಏನೆಂದರೆ, ಗೋಶಾಲೆಯಲ್ಲಿ ನೀರಿನ ವ್ಯವಸ್ಥೆ ಇಲ್ಲ ಎಂದು. ಅವರಿಗೆ ಹೇಳಬಯಸುತ್ತೇನೆ. ನೀರಿನ ವ್ಯವಸ್ಥೆ ಇಲ್ಲದೆ ಗೋಶಾಲೆ ಮಾಡಿಲ್ಲ, ನೀರಿನ ವ್ಯವಸ್ಥೆ, ಷೆಡ್ಡಿನ ವ್ಯವಸ್ಥೆ, ಮೇವಿನ ವ್ಯವಸ್ಥೆ ಎಲ್ಲವನ್ನೂ ಮಾಡಿದ್ದಾರೆ. ನನ್ನ ಕ್ಷೇತ್ರವಾದ ಅಥಣಿ ತಾಲ್ಲೂಕನ್ನೇ ತೆಗೆದುಕೊಳ್ಳಿ. ಅಲ್ಲಿ ೩ ಬೋರ್ ವೆಲ್ ಇದೆ, ಮೇವಿನ ವ್ಯವಸ್ಥೆ, ನೀರಿನ ವ್ಯವಸ್ಥೆ, ಷೆಡ್ಡಿನ ವ್ಯವಸ್ಥೆ ಇವೆಲ್ಲಾ ಇವೆ. ಅಷ್ಟೇ ಅಲ್ಲದೆ, ದನವನ್ನಾಗಲ್ಲಿ, ಎತ್ತನ್ನಾಗಲಿ ರೈತ ತೆಗೆದುಕೊಂಡು ಬರುತ್ತಾನೋ ಅವನಿಗೂ ಸಹ ವ್ಯವಸ್ಥೆ ಮಾಡಿದ್ದಾರೆ. ಏತಕ್ಕೆಂದರೆ, ಯಾವನೇ ರೈತನಾಗಲಿ ತನ್ನ ದನವನ್ನಾಗಲಿ, ಎತ್ತನ್ನಾಗಲಿ, ಹಸುಗಳನ್ನಾಗಲಿ ಸಾಕಬೇಕಾದರೆ ಮಕ್ಕಳಿಗಿಂತಲೂ ಹೆಚ್ಚಿನ ಪ್ರೀತಿಯಿಂದ ಸಾಕುತ್ತಾನೆ. ಹೀಗೆ ತಾನು ಪ್ರೀತಿಯಿಂದ ಸಾಕುತ್ತಿದ್ದಂಥಾ ಎತ್ತನ್ನಾಗಲಿ, ಹಸುವನ್ನಾಗಲಿ ಬೇರೆಯವರ ಕೈಗೆ ಕೊಟ್ಟಾಗ ಆ ರೈತನನ್ನೂ ಸಹ ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳಬೇಕಾದ್ದು ಸಹ ನಮ್ಮ ಕರ್ತವ್ಯವಾಗಿರುತ್ತದೆ. ಆದುದರಿಂದ ಯಾವ ರೈತ ತನ್ನ ಎತ್ತನ್ನು ದನಗಳನ್ನು ಗೋಶಾಲೆಯಲ್ಲಿ ಬಿಡುತ್ತಾನೋ ಅವನಿಗೆ ಗೋಶಾಲೆಯಲ್ಲಿ ಇರುವುದಕ್ಕೆ ತಕ್ಕ ವ್ಯವಸ್ಥೆ ಮಾಡಿದ್ದೇವೆ, ಹಾಗೆಯೇ ಹಾಲು ಹಿಂಡುವ ದನಗಳನ್ನು ಬಿಟ್ಟರೆ ಅವನಿಗೆ ಹಾಲು ತೆಗೆದುಕೊಂಡು ಹೋಗುವ ವ್ಯವಸ್ಥೆಯನ್ನೂ ಸಹ ಮಾಡಿದ್ದೇವೆ. ಆ ದನಗಳು, ಎತ್ತುಗಳು ಎಲ್ಲಿಯವರೆಗೆ ಆ ಗೋಶಾಲೆಯಲ್ಲಿ ಇರುತ್ತವೋ ಅಲ್ಲಿಯವರೆಗೂ ಆ ರೈತನೂ ಸಹ ಇರುವ ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಸದಸ್ಯರು ನೀರಿಲ್ಲದೆ ಇರುವ ಗೋಶಾಲೆ ಇದೆ ಅಂತ ಏನು ಹೇಳಿದರೋ ಅಂಥ ಗೋಶಾಲೆಗಳನ್ನು ನಾನು ಎಲ್ಲೂ ನೋಡಿಲ್ಲ. ವಿರೋಧಪಕ್ಷದವರು ಬಹುಶಃ ಈ ವ್ಯವಸ್ಥೆಗಳೆಲ್ಲಾ ಇರುವುದನ್ನು ನೋಡಿಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು.—ಬೇಗನೆ ಮುಗಿಸಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಾನು ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಬೇಗನೆ ಮುಗಿಸುತ್ತೇನೆ. ೧೦ ನಿಮಿಷ ಟೈಂ ಕೊಡಿ ಸಾಕು.

ಅಧ್ಯಕ್ಷರು.—ಬೇರೆಯವರೂ ಮಾತನಾಡಬೇಕು, ಬೇಗನೆ ಮುಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಬರಗಾಲದ ವಿಷಯದ ಬಗ್ಗೆ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರಿಗೆ ತಾವು ಏತಕ್ಕೆ ತೊಂದರೆ ಕೊಡುತ್ತೀರಿ ?

ಅಧ್ಯಕ್ಷರು.—ನನಗೆ ಗೊತ್ತು ನೀವೇನೂ ನನಗೆ ಹೇಳಬೇಕಾಗಿಲ್ಲ. ಖರ್ಗೆಯವರೇ ತಾವು ದಯವಿಟ್ಟು ಕೂತುಕೊಳ್ಳಿ. ಲೀಲಾದೇವಿ ಪ್ರಸಾದ್‌ರವರೇ ತಾವು ಬೇಗನೆ ಮುಗಿಸಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಬರಗಾಲಪೀಡಿತ ಪ್ರದೇಶದಿಂದ ಬಂದಿರತಕ್ಕಂಥಾ ನಾನು ಶಾಸಕಿಯಾಗಿರುವುದರಿಂದ ಅಲ್ಲಿಯ ವಿದ್ಯಮಾನಗಳ ಬಗ್ಗೆ ಈ ಗೋಶಾಲೆಯ ಒಂದು ವ್ಯವಸ್ಥೆ ಬಗ್ಗೆ ಹೇಳಿಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಈ ಗೋಶಾಲೆ ಬಗ್ಗೆ ಇನ್ನೂ ಒಂದು ವಿಷಯ ಹೇಳಬೇಕಾದರೆ ಇನ್ನೂ ಒಂದು ಹೆಚ್ಚಿನ ವ್ಯವಸ್ಥೆ ಮಾಡಿದ್ದೇವೆ. ಅದೇನೆಂದರೆ, ಯಾವ ದನಗಳು ಅಶಕ್ತವಾಗಿರುತ್ತವೋ ಅಂತಹ ದನಗಳನ್ನು ಗೋಶಾಲೆಯಲ್ಲಿ ಬಿಡುವ ಒಂದು ವ್ಯವಸ್ಥೆ ಮಾಡಿದ್ದೇವೆ. ಅದನ್ನು ಕಟುಕರ ಮನೆಗೆ ಹೊಡೆಯುತ್ತಾರೆ ಎಂದು ಜನ ಏನು ಹೇಳುತ್ತಾರೆ. ಅದು ಸರಿಯಲ್ಲ. ಅಶಕ್ತವಾಗಿರತಕ್ಕಂಥಾ ದನಗಳನ್ನು ಗೋಶಾಲೆಗೇನೇ ತಂದು ಬಿಡುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಬಹುಶಃ ಇವತ್ತು ಕಟುಕರ ಮನೆಗೆ ಹೋಗತಕ್ಕಂಥ ಗೋವುಗಳು ಗೋಶಾಲೆಗೆ ಬಂದಿವೆ. ಬರ ಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಗ್ಗೆ ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗಿದೆ. ಮುಂದಿನ ಏಪ್ರಿಲ್, ಮೇ ತಿಂಗಳಲ್ಲಿ ನೀರಿನ ಪರಿಸ್ಥಿತಿ ಇನ್ನೂ ಗಂಭೀರವಾಗಬಹುದು. ಸಾಕಷ್ಟು ಬೋರ್‌ವೆಲ್‌ಗಳನ್ನು ತೆಗೆಯುತ್ತಿದ್ದಾರೆ. ಆದರೆ ಹಳ್ಳಿಗಳಲ್ಲಿ ಬೋರ್‌ವೆಲ್‌ಗಳು ಕೆಟ್ಟರೆ ದುರಸ್ತಿ ಮಾಡಬೇಕು ಎಂದು ಹೇಳುತ್ತೇನೆ. ಪ್ರತಿಯೊಂದು ತಾಲ್ಲೂಕು ಹೆಡ್ ಆಫೀಸಿನಲ್ಲಿ ಬೋರ್‌ವೆಲ್

ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತೆ ಯಾರ್ಯಾರ ಬಾವಿಯಲ್ಲಿ ನೀರಿದೆ ಅವರಿಗೆ ಪಂಪ್‌ಸೆಟ್ ಹಾಕುವುದಕ್ಕೆ ವಿದ್ಯುಚ್ಛಕ್ತಿಗೆ ಪರ್ಮಿಷನ್ ಕೊಡಬೇಕು ಎಂದು ಕೆಲವರು ಹೇಳಿದರು. ಅಂತಹ ರೈತರ ಬಾವಿಯಲ್ಲಿ ನೀರಿದ್ದರೆ ಪಂಪ್‌ಸೆಟ್ ಕೊಡುತ್ತೇವೆ, ಜೊತೆಗೆ ಬರಗಾಲ ಮುಗಿಯು-ವವರೆಗೆ ಆ ಹಳ್ಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಕಂಡೀಷನ್ ಹಾಕಬೇಕು. ಪ್ರಯಾರಿಟಿ ಬೇಸಿಸ್ ಮೇಲೆ ಕೊಡಬೇಕು. ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಇಲ್ಲೇ ಇದ್ದಾರೆ. ರೈತರ ಬಾವಿಯಲ್ಲಿ ನೀರಿದ್ದರೆ ಅಂತಹ ರೈತರು ಬರಗಾಲ ಮುಗಿಯುವವರೆಗೆ ಆ ಹಳ್ಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಕಂಡೀಷನ್ ಹಾಕಬೇಕು, ವಿದ್ಯುಚ್ಛಕ್ತಿ ಮಂತ್ರಿಗಳು ಪವರ್ ಕೊಡಬೇಕು. ಈ ರೀತಿ ಮಾಡಿದರೆ ಬಹಳ ಮಟ್ಟಿಗೆ ಕಡಿಮೆಯಾಗಬಹುದು, ಇದರ ಬಗ್ಗೆ ಗಮನ ಹರಿಸಬೇಕು ಎಂದು ಹೇಳುತ್ತಾ ಇದ್ದೇನೆ. ಇತ್ತೀಚೆಗೆ ಕೇಂದ್ರ ಸರ್ಕಾರದವರು ನಮ್ಮಲ್ಲಿ ಸಾಕಷ್ಟು ಧಾನ್ಯ ಸವಲತ್ತಿದೆ, ಅದನ್ನು ಹಂಚುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಅದನ್ನು ಸುಸ್ವಾಗತ ಮಾಡುತ್ತಾ ಇದ್ದೇನೆ. ಹಿಪ್ಪರಗಿ ಬ್ಯಾರೇಜು ಪ್ರದೇಶ ಇದೆ. ರಾಜ್ಯ ಸರ್ಕಾರದವರು ಅಥಣಿಯಲ್ಲಿ ಶಾಶ್ವತ ಪರಿಹಾರ ಕಾರ್ಯಕ್ಕೆ ಮನ್ನಣೆ ಕೊಡಬೇಕು. ಮಾನ್ಯ ಕಂದಾಯ ಮಂತ್ರಿಗಳಲ್ಲಿ ಮತ್ತು ಮಾನ್ಯ ನೀರಾವರಿ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಬರಗಾಲದಲ್ಲಿ ವಾರ್-ಫುಟಿಂಗ್ ಕಾರ್ಯಕ್ರಮ ಪ್ರಾರಂಭ ಮಾಡಬೇಕು. ಮುಂದಿನ ಬಡ್ಜೆಟ್‌ನಲ್ಲಿ ಸಾಕಷ್ಟು ಹಣವನ್ನು ಕೊಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಒಳ್ಳೆಯ ಕೆಲಸ ಮಾಡಿದಾಗ ಅದನ್ನು ಹೇಳುವುದು ನಮ್ಮ ಕರ್ತವ್ಯ. ಬರಗಾಲದ ದವಡೆಗೆ ತುತ್ತಾಗಿರತಕ್ಕಂಥ ಜನತೆಗೆ ಅನುಕೂಲವಾಗುವಂತೆ ಆ ಪ್ರದೇಶಗಳಲ್ಲಿ ಶಾಶ್ವತ ಪರಿಹಾರ ಕಾರ್ಯಗಳನ್ನು ಮಾಡಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷ ಮಹಾಶಯರೆ, ಈ ಮಾನ್ಯ ಸಭೆಯಲ್ಲಿ ಯಾರ್ಯಾರು ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ ಅವರು ಈ ರಾಜ್ಯದಲ್ಲಿ ಬರ, ಕ್ಷಾಮ ಏನು ಬಂದಿದೆ ಅದರ ಬಗ್ಗೆ ವಿವರವಾಗಿ ಹೇಳಿದ್ದಾರೆ. ಅವರು ಯಾವ ಯಾವ ವಿಷಯಗಳನ್ನು ಹೇಳಿದ್ದಾರೆ ಅದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ಈ ಕರ್ನಾಟಕ ರಾಜ್ಯದಲ್ಲಿ ಬರ ಬಂದಿದೆ, ೩ ವರ್ಷಗಳಿಂದ ಬರ ಬಂದಿದೆ. ಈ ಮನೆಯಲ್ಲಿ ಯಾರಾದರೂ ೩ ವರ್ಷಗಳ ಹಿಂದೆ ಜನತಾ ಪಕ್ಷದವರು ಅಧಿಕಾರಕ್ಕೆ ಬಂದರು ಅಲ್ಲಿಂದ ಇಲ್ಲಿಯವರೆಗೆ ಬರ ಬಿಡಲಿಲ್ಲ ಎಂಬ ವಾದವನ್ನು ಇಟ್ಟರೆ ಅದನ್ನು ನಾನು ಒಪ್ಪುವುದಿಲ್ಲ. ಬರ ಬಂದಿದೆ, ಅದನ್ನು ಎದುರಿಸಬೇಕು. ಬರ ಬರಲಿಕ್ಕೆ ಕಾರಣಗಳು ಏನು ಎನ್ನುವುದನ್ನು ಮಾನ್ಯ ಜೆಲ್ಲದ್ ಅವರು ಹೇಳಿದ್ದಾರೆ. ಅದನ್ನು ನಾನು ಒಪ್ಪಿದ್ದೇನೆ. ಕಾಡನ್ನು ಸಂರಕ್ಷಣೆ ಮಾಡುವ ಬಗ್ಗೆ, ಕಾಡನ್ನು ಬೆಳೆಸುವ ಬಗ್ಗೆ ಅವರು ಸಾಕಷ್ಟು ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಕಾಡು ಕಡಿಯುವುದನ್ನು ೫ ವರ್ಷ ನಿಲ್ಲಿಸಬೇಕು, ಆದರಿಂದ ನಮಗೆ ಆದಾಯ ಬೇಕಾಗಿಲ್ಲ, ಅದರಿಂದ ಆದಾಯ ಬರುವುದು ಅಷ್ಟರಲ್ಲೇ ಇದೆ. ಆದ್ದರಿಂದ ಸರ್ಕಾರದವರು ಕಾಡುಗಳನ್ನು ಕಡಿಯತಕ್ಕ ಕಾರ್ಯಕ್ರಮವನ್ನು ತಕ್ಷಣ ನಿಲ್ಲಿಸಬೇಕು ಎಂದು ತಮಗೆ ಮನವರಿಕೆ ಮಾಡುತ್ತಾ ಇದ್ದೇನೆ ಹಿಂದೆ ನಾನು ರೆವಿನ್ಯೂ ಮಂತ್ರಿಯಾಗಿದ್ದೆ. ಶ್ರೀ ಮಾನ್ ಬೊಮ್ಮಾಯಿಯವರು ಇವತ್ತಿನ ದಿವಸ ಕಂದಾಯ ಮಂತ್ರಿಗಳಾಗಿದ್ದಾರೆ. ನಾನು ಇಂತಹ ಪರಿಸ್ಥಿತಿಯನ್ನು ಎದುರಿಸತಕ್ಕ ಕಾಲ ಬಂದಿತ್ತು. ನನಗೆ ಯಾವ ಅಧಿಕಾರವೂ ಇದ್ದಿಲ್ಲ. ನಾನು ಬರಗಾಲದ ಬಗ್ಗೆ ಭಾಷಣ ಮಾಡುತ್ತಿದ್ದೆ, ಯಾರಾದರೂ ಬೇರೆ ಇಲಾಖೆಯವರು ಮಾಡಿರತಕ್ಕ ಕೆಲಸಗಳಿಗೆ ಮನ್ನಣೆ ಕೊಡುತ್ತಿದ್ದೆ. ಆರ್ಥಿಕ ಶಾಖೆಯಿಂದ ಹಣ ಕೊಡುತ್ತಿದ್ದರು. ಕಂದಾಯ ಮಂತ್ರಿಗೆ ಏನು ಅಧಿಕಾರ ಇದೆ ಅಂದರೆ ಏನೇನೂ ಅಧಿಕಾರ ಇರಲಿಲ್ಲ, ನಾನು ಇದ್ದಾಗ. ಈಗ ಪುನರ್ಪರಿಶೀಲನೆ ಮಾಡಿದಾಗ ಹೆಚ್ಚು ಹೆಚ್ಚು ಅಧಿಕಾರ ಕೊಟ್ಟಿದ್ದಾರೋ ಗೊತ್ತಿಲ್ಲ. ಈಗ ಬರಗಾಲ ಬಂದಾಗ, ವರ್ಷಂಪ್ರತಿ ಬರಗಾಲ ಬಂದಾಗ ತುರ್ತು ಪರಿಸ್ಥಿತಿ ಎಂದು ಅದನ್ನು ಪರಿಗಣಿಸಲೇಬೇಕು. ಯಾರಾದರೂ ಮಂತ್ರಿಯಾಗಲಿ, ಮುಖ್ಯ ಮಂತ್ರಿಯಾಗಲೀ ಅದರ ಜವಾಬ್ದಾರಿಯನ್ನು ತಾವೇ ವಹಿಸಿಕೊಳ್ಳಬೇಕು. ವಹಿಸಿಕೊಳ್ಳದೇ ಹೋದರೆ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲಿಕ್ಕೆ ಆಗುವುದಿಲ್ಲ. ಮತ್ತೆ ಪ್ರತಿಯೊಬ್ಬ ಮಂತ್ರಿಯೂ ಅವರವರ ಖಾತೆಯಲ್ಲಿ ಯಥಾಪ್ರಕಾರ ಕೆಲಸಕಾರ್ಯಗಳನ್ನು ಮಾಡುತ್ತಾ ಹೋದರೆ, ಹಲವಾರು ಶಾಖೆಗಳು ಇರುವುದರಿಂದ ಅವರಲ್ಲೇ ಭಿನ್ನಾಭಿಪ್ರಾಯಗಳು ಬಂದು ಅವರು ತಮ್ಮ ಕರ್ತವ್ಯವನ್ನು ತುರ್ತಾಗಿ ಮಾಡತಕ್ಕಂಥಾದ್ದು ತಡವಾಗುತ್ತದೆ. ಹೀಗಾಗಿ ಏನು ಕೆಲಸ ಮಾಡಬೇಕಾಗಿದೆ ಅದಕ್ಕೆ ಹರಕತ್ತಾಗಿ

ತಡವಾಗುತ್ತದೆ. ತಮ್ಮನ್ನು ಕಂಡರೆ ನನಗೆ ಬಹಳ ಕನಿಕರವಾಗುತ್ತದೆ. ಕಾರಣವೇನೆಂದರೆ, ಬೇರೆ ಶಾಖೆಯವರು ಮಾಡಿದರೆ ಕೆಲಸದಲ್ಲಿ ತಾವೇ ಮಾಡಿದ ಹಾಗೆ ಭಾಷಣ ಮಾಡುತ್ತೀರಿ ಸ್ವಾಮಿ, ಈಗ ಕರ್ನಾಟಕ ರಾಜ್ಯದಲ್ಲಿ ಇವರ ಅಂಕಿ ಸಂಖ್ಯೆಗಳ ಪ್ರಕಾರ ೧,೮೬,೯೫,೭೪೪ ಬರಪೀಡಿತ ಜನ ಇರುತ್ತಾರೆ. ದನಗಳು ೯೪,೧೧,೮೦೪ ಇದೆ. ಇದನ್ನು ಸಂರಕ್ಷಣೆ ಮಾಡಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎನ್ನುವುದು ಮುಖ್ಯ. ಆ ಜನಗಳ ಪೈಕಿ ಬಡವರು, ನಿರ್ಗತಿಕರಾಗಿರತಕ್ಕವರು ೨೦,೭೫,೪೯೧ ಜನರಿದ್ದಾರೆ. ಕೂಲಿ ಮಾಡತಕ್ಕವರು, ಸಣ್ಣ ಹಿಡುವಳಿದಾರರು ೯,೯೮,೫೮೫ ಜನ ಇದ್ದಾರೆ. ಅತಿ ಸಣ್ಣ ಹಿಡುವಳಿದಾರರು ೯,೬೨,೧೯೬ ಜನ ಇದ್ದಾರೆ. ಒಟ್ಟು ಸಂಖ್ಯೆ ೩೫,೪೬,೧೬೨ ಇದೆ. ಇವತ್ತು ಈ ಸಮಸ್ಯೆಯನ್ನು ಎದುರಿಸಬೇಕಾಗಿದೆ. ತಮ್ಮ ಅಂಕಿಅಂಶಗಳ ಪ್ರಕಾರ ೫ ಲಕ್ಷದ ೫ ಸಾವಿರ ೬೪೭ ಜನರಿಗೆ ಮಾತ್ರ ನೀವು ಕೂಲಿ ಕೊಟ್ಟಿದ್ದೀರಿ. ೩೫ ಲಕ್ಷದಲ್ಲಿ ೫ ಲಕ್ಷ ಜನರಿಗೆ ಮಾತ್ರ ಕೊಟ್ಟಿದ್ದೀರಿ, ೩೦ ಲಕ್ಷಕ್ಕೆ ಕೊಡಲಿಕ್ಕೆ ಆಗಲಿಲ್ಲ. ೩೦ ಲಕ್ಷ ಜನ ಭೂಹೀನರು, ಕೂಲಿಗಾರರು, ಬಡವರು, ನಿರ್ಗತಿಕರು ಇದ್ದಾರೆ, ಅವರ ಕಡೆ ನೋಡುವವರು ಯಾರು. ೩ ವರ್ಷಗಳಿಂದ ಇದು ಪರಂಪರೆಯಾಗಿ ಬಂದಿದೆ. ತಾವು ಅಧಿಕಾರಕ್ಕೆ ಬಂದಿದ್ದೀರಿ. ಕಾಂಗ್ರೆಸ್‌ನವರು ಏನೂ ಮಾಡಲಿಲ್ಲ ಎನ್ನುವ ವಾದ ಅಲ್ಲ. ಇದು ರಾಜ್ಯದ ಸಮಸ್ಯೆ, ನಿಮ್ಮ ಸಮಸ್ಯೆ ಅಲ್ಲ, ಕಾಂಗ್ರೆಸ್ ಸಮಸ್ಯೆಯಲ್ಲ, ಜನತಾಪಕ್ಷದ ಸಮಸ್ಯೆಯಲ್ಲ, ಇದು ರಾಜ್ಯದ ಸಮಸ್ಯೆ. ಈ ಸಮಸ್ಯೆಯನ್ನು ಪರಿಹರಿಸಬೇಕು, ಎದುರಿಸಬೇಕು. ಭಿನ್ನಭಾವವಿಲ್ಲದೆ ಒಂದಾಗಿ ಈ ಸಮಸ್ಯೆಯನ್ನು ಬಗೆಹರಿಸಲೇಬೇಕು. ೩೦ ಲಕ್ಷ ಜನರ ಬಗ್ಗೆ ಏನು ಗಮನಕೊಟ್ಟಿಲ್ಲ, ಅಂತಹ ಜನಗಳಿಗೆ ಸಹಾಯ ಮಾಡಲು ನೀವು ನಿಶ್ಶಕ್ತರಾಗಿದ್ದೀರಿ, ಆ ಜನರು ಹೇಗೆ ಜೀವನ ಮಾಡಬೇಕು. ಪಾಪುಲರ್ ಸ್ಕೀಂ ತಂದಿರಿ, ಎರಡು ರೂಪಾಯಿಗೆ ಅಕ್ಕಿ ಕೊಡುತ್ತೇವೆ, ಸೀರೆ, ಪಂಚೆ ಕೊಡುತ್ತೇವೆಂದು ಹೇಳಿದಿರಿ. ಇದರ ಬಗ್ಗೆ ಶ್ರೀಮತಿ ನಾಗರತ್ನಮ್ಮನವರು ಹೇಳಿದರು. ಅದನ್ನು ಮಾಡಿ, ಬೇಡ ಎಂದು ಹೇಳುವುದಿಲ್ಲ. ತಮಿಳುನಾಡು, ಆಂಧ್ರದಲ್ಲಿ ೨ ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುತ್ತಾರೆ, ಕರ್ನಾಟಕ ರಾಜ್ಯದಲ್ಲೂ ಕೊಡುತ್ತೇವೆಂದು ಹೇಳಿದಿರಿ. ಆದರೆ ೩೦ ಲಕ್ಷ ನಿರ್ಗತಿಕರೇನಿದ್ದಾರೆ ಅವರು ನಿಮ್ಮ ಮಾತಿನಲ್ಲಿ ನಂಬಿಕೆ ಇಟ್ಟು ನಿಮಗೆ ಓಟ್ ಕೊಟ್ಟು ಕಳಿಸಿದ್ದಾರೆ.

ಇನ್ನೂ ೩೦ ಲಕ್ಷ ಪರದೇಶಿಗಳಾಗಿದ್ದಾರೆ. ನಿರ್ಗತಿಕರಾಗಿದ್ದಾರೆ, ತಾವು ಅಧಿಕಾರಕ್ಕೆ ಬರುವಂಥಾದ್ದು ಆಗಿ ಹೋಯಿತು ಈಗ ೨೦-೩೦ ಲಕ್ಷ ಜನರಿಗೆ ಎರಡು ರೂಪಾಯಿ ಅಕ್ಕಿ, ಜೋಳ, ರಾಗಿ ಕೊಟ್ಟಿದ್ದೀರಿ. ಇದರ ಬಗ್ಗೆ ಪರಿಶೀಲನೆ ಮಾಡಿ ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ. ಅಧಿಕಾರ ವರ್ಗ ಯಾವ ರೀತಿಯಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ ಎನ್ನುವುದನ್ನು ನೋಡಬೇಕಾಗುತ್ತದೆ. ಜನರು ಹಸಿವಿನ ಬೇನೆಯಿಂದ ನರಳುತ್ತಿದ್ದಾರೆ. ಕಣ್ಣೀರಿಡುತ್ತಿದ್ದಾರೆ, ಇವತ್ತು ಅವರ ಕಣ್ಣೀರು ಒರಸದೆ ಇದ್ದರೆ ಹೇಗೆ ಒಂದು ತಿಂಗಳಲ್ಲಿ ೧೫ ದಿವಸ ಕೆಲಸ ಕೊಡುವುದಾದರೆ ೫೬ ಕೋಟಿ ರೂಪಾಯಿ ಬೇಕಾಗುತ್ತದೆ. ಅಂದರೆ ಒಂದು ತಿಂಗಳು ಪೂರ್ಣ ಕೆಲಸ ಕೊಡುವುದಾದರೆ ೧೧೨ ಕೋಟಿ ರೂಪಾಯಿ ಬೇಕಾಗುತ್ತದೆ ಮೂರು ತಿಂಗಳಿಗೆ ಒಟ್ಟು ೩೩೬ ಕೋಟಿ ರೂಪಾಯಿ ಬೇಕಾಗುತ್ತದೆ, ನಾಲ್ಕು ತಿಂಗಳಿಗೆ ಇನ್ನೂ ಜಾಸ್ತಿಯಾಗುತ್ತದೆ. ಸ್ವಾಮಿ, ೫೩ ಕೋಟಿ ರೂಪಾಯಿ ಕೇಂದ್ರದಿಂದ ಕೊಟ್ಟಿದ್ದಾರೆ, ೨೦ ಕೋಟಿ ರೂಪಾಯಿ ಕೊಟ್ಟಿಲ್ಲ ಎಂದು ಹೇಳುತ್ತೀರಿ. ನೀವು ಇನ್ನೂ ಹಣವನ್ನು ಇದರಲ್ಲಿ ತೊಡಗಿಸುತ್ತೇವೆಂದು ಹೇಳಿದ್ದೀರಿ. ನೀವು ೯೬ ಕೋಟಿ ರೂಪಾಯಿಯಷ್ಟು ಏನೋ ಹಾಕಿದ್ದೇವೆಂದು ಹೇಳುತ್ತಿದ್ದೀರಿ. ಈ ಹಣದಿಂದ ಯಾವುದು ಸಾರ್ಥಕವಾಗುತ್ತದೆ. ಇವತ್ತಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆಯೇ. ಇನ್ನೂ ೩೦೦ ಕೋಟಿ ರೂಪಾಯಿ ಎಲ್ಲಿಂದ ತರುತ್ತೀರಿ. ಅದನ್ನು ತರಬೇಕಾದರೆ, ಈಗ ನೀವು ಎಲ್ಲಾ ಕಾಮಗಾರಿ ನಿಲ್ಲಿಸಿ ಇದಕ್ಕೆ ಉಪಯೋಗಿಸಬೇಕಾಗುತ್ತದೆ. ಎಲ್ಲಾ ಕಾಮಗಾರಿ ನಿಲ್ಲಿಸಿದರೆ ನಿಮ್ಮ ಗಂಟು ಏನು ಹೋಗುತ್ತದೆ. ಕಾಮಗಾರಿಗೆ ಏತಕ್ಕೆ ಗಮನ ಕೊಡಬೇಕು. ಹಲವಾರು ಸಾರಿ ಈ ಸದನದಲ್ಲಿ ಹೇಳಿದ್ದೇನೆ. ಈ ಒಂದು ಬರಗಾಲ ಪರಿಸ್ಥಿತಿ, ಕ್ಷಾಮ ಏನಿದೆ ಇದು ದೇಶದ ಸಮಸ್ಯೆ ಎಂದು ತಿಳಿದುಕೊಳ್ಳಬೇಕು. ರಾಷ್ಟ್ರ ಈ ಹೊರೆಯನ್ನು ಹೊರಬೇಕು, ರಾಜ್ಯ ಹೊರಬೇಕು, ರಾಜ್ಯದ ಸಮಸ್ಯೆ ಯಾವುದು, ರಾಷ್ಟ್ರದ ಸಮಸ್ಯೆ ಯಾವುದು. ಬಹಳ ಮಳೆ ಬಂದಾಗ ಅದರಿಂದ ನಷ್ಟವಾಗುತ್ತದೆ. ಸಮುದ್ರ ಏನಾದರೂ ಉಕ್ಕಿ ವಿಕೋಪಕ್ಕೆ ಬಂದರೆ ಆಗಲೂ ತೊಂದರೆಯಾಗುತ್ತದೆ ಬರ ಬಂದರೆ ತೊಂದರೆಯಾಗುತ್ತದೆ. ಈ ಮೂರು ಸಮಸ್ಯೆಗಳು ಏನಿವೆ, ಅವು ರಾಷ್ಟ್ರದ ಸಮಸ್ಯೆ ಎಂದು ಪರಿಗಣಿಸಿ, ರಾಷ್ಟ್ರ ವಿವಿಧ ರೂಪದಲ್ಲಿ ನಿರ್ವಹಿಸಲಿಕ್ಕೆ ನಾವು ಆಗ್ರಹಪಡಿಸಬೇಕು. ಅದನ್ನು ಈ ಸಭೆ ಮಾಡಲೇ ಬೇಕಾಗುತ್ತದೆ.

ಕೇಂದ್ರದವರು ೫೩ ಕೋಟಿ ರೂಪಾಯಿ ಕೊಟ್ಟರೂ ಅವರು ಕೊಟ್ಟೇ ಇಲ್ಲ ಎಂದು ಕೇಂದ್ರದ ಕಡೆ ಗಮನ ಕೊಟ್ಟು ನೀವು ಹಾಗೆ ಕಾಯುತ್ತಿದ್ದರೆ ಹೇಗೆ ಬಗೆಹರಿಸುತ್ತೀರಾ. ಕೇಂದ್ರವನ್ನು ಟೀಕೆ ಮಾಡುತ್ತಿದ್ದರೆ ಹೇಗೆ ಬಗೆಹರಿಸುತ್ತೀರಾ. ಇದು ಜನತಾ ಪಕ್ಷದ ಸಮಸ್ಯೆ ಅಲ್ಲ. ರಾಜ್ಯದ ಸಮಸ್ಯೆ, ವಿಧಾನಸೌಧದ ಸಮಸ್ಯೆ. ನಾವೆಲ್ಲಾ ಒಟ್ಟಿಗೆ ಸೇರಿ ಒತ್ತಾಯ ಮಾಡಿ ಹೇಳಬೇಕು. ಜನರು ಇವತ್ತು ಸಾಯುತ್ತಿದ್ದಾರೆ ೩೦ ಲಕ್ಷ ಜನರಿಗೆ ಕೆಲಸ ಕೊಡಲಿಕ್ಕೆ ಆಗಿಲ್ಲ, ಅವರು ಸಾಯುತ್ತಿದ್ದಾರೆ, ಅವರ ಸಮಸ್ಯೆಗಳನ್ನು ಬಗೆಹರಿಸಬೇಕು. ಆ ಬಗ್ಗೆ ಆಗ್ರಹಪಡಿಸದೇ ಹೋದರೆ ನೀವು ಹೇಗೆ ಪರಿಹಾರ ಕಾರ್ಯ ಮಾಡುತ್ತೀರಾ ದಯಮಾಡಿ ಹೇಳಿ. ಈಗ ೯೪ ಲಕ್ಷ ದನಗಳು ಇವೆ. ಒಂದು ನೂರು ಗೋಶಾಲೆಗಳನ್ನು ತೆರೆದಿದ್ದೇವೆ ಎಂದು ಹೇಳುತ್ತೀರಿ, ಒಂದೊಂದು ಗೋಶಾಲೆಗಳಲ್ಲೂ ಒಂದು ನೂರು ದನಗಳು ಅಂದರೆ ಒಂದು ಲಕ್ಷ ಆಗುತ್ತದೆ. ಬರಪೀಡಿತ ಪ್ರದೇಶಗಳಲ್ಲಿರತಕ್ಕ ೯೪ ಲಕ್ಷ ದನಗಳಿಗೆ ನೀವು ಏನು ಮಾಡುತ್ತೀರಿ. ಇವತ್ತು ಹರಿಯಾನದಿಂದ ಮೇವು ತಂದಿರತಕ್ಕದ್ದು ಆಗುತ್ತದೆಯೇ. ಇದನ್ನು ನೀವು ಯಾವ ಒಂದು ಯೋಜನೆಯ ಪ್ರಕಾರ ಆಲೋಚನೆ ಮಾಡಿ ಪ್ರಜ್ಞಾವಂತರಾಗಿ ಮಾಡಿದ್ದೀರ. ೯೪ ಲಕ್ಷದಲ್ಲಿ ಒಂದು ಲಕ್ಷ ದನಗಳಿಗೆ ಪರಿಹಾರ ಕೊಡುವುದಾದರೆ ಇನ್ನುಳಿದ ೯೩ ಲಕ್ಷ ದನಗಳಿಗೆ ಯಾವಾಗ ಕೊಡುತ್ತೀರಿ. ಅವು ಸತ್ತಮೇಲೆ ಕೊಡುತ್ತೀರಾ. ಎಲ್ಲಾ ಸತ್ತು ಹೋಗಿವೆ, ಸಾಯುತ್ತಿವೆ, ಮಾರಾಟವಾಗಿವೆ, ತಾವು ಹೆಮ್ಮೆಯಿಂದ ಎದೆ ತಟ್ಟಿ ಹೇಳಿ ನೋಡೋಣ. ಇವತ್ತು ಇರತಕ್ಕ ಬರಗಾಲದಲ್ಲಿ ೯೩ ಲಕ್ಷ ದನಗಳಿಗೂ ಮೇವು ಕೊಡಲೇ ಬೇಕಾಗುತ್ತದೆ. ಅವುಗಳು ಸತ್ತಮೇಲೆ ಕೊಡಬೇಕೆಂದು ಯೋಜನೆ ಹಾಕಿದ್ದೀರಾ. ಗೋಶಾಲೆ ಕಟ್ಟಬೇಕೆಂದು ಮಾಡಿದ್ದೀರಿ, ಅವುಗಳನ್ನು ಇನ್ನೂ ಪೂರೈಸಿದ್ದೀರೋ ಇಲ್ಲವೋ ಗೊತ್ತಿಲ್ಲ. ಅದನ್ನು ಪೂರೈಸದೇ ಹೋದರೆ ಅದು ಬಹಳ ಅಪರಾಧವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲಾ ದನಗಳಿಗೂ ಅನುಕೂಲ ಮಾಡಿ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಈ ದೇಶದಲ್ಲಿ ಮಾರ್ವಾಡಿಗಳು ಇದ್ದಾರೆ. ಅವರಿಗೆ ಬರ ಬರಲಿ, ಏನೇ ಬರಲಿ ಈ ದೇಶದ ಹಣವೆಲ್ಲಾ ಮಾರ್ವಾಡಿಗಳ ಕೈಗೆ ಹೋಗುತ್ತದೆ. ಇನ್ನು ಸೋಮವಾರದಿಂದ ಲೆಜಿಸ್ಲೇಚರ್ ಸೆಕ್ರಿಟರಿಯೇಟ್ ನೌಕರರು ಜಾಸ್ತಿ ಹಣ ಕೊಡಬೇಕೆಂದು ಹೇಳಿ ಸ್ಟ್ರೈಕ್ ಹೋಗುತ್ತಿದ್ದಾರೆ. ಅವರಿಗೆ ಜಾಸ್ತಿ ಹಣ ಕೊಟ್ಟೆವು ಎಂದು ಇಟ್ಟುಕೊಳ್ಳೋಣ, ಅದು ಮಾರ್ವಾಡಿ ಕೈಗೆ ಹೋಗುತ್ತದೆ. ಆದ್ದರಿಂದ ಅವರು ದೇಶದ ಹಣವನ್ನೆಲ್ಲಾ ಇಟ್ಟುಕೊಂಡಿರುವಾಗ ಒಬ್ಬೊಬ್ಬರು ೧೦-೨೦ ದನಗಳನ್ನು ಏತಕ್ಕೆ ಸಾಕಬಾರದು. ಅವರಿಗೆ ದನಗಳನ್ನು ಸಾಕುವಂತೆ ಹೇಳಬೇಕು. ಹಿಂದೆ ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ ಕರ್ನಾಟಕದಲ್ಲಿ ಇರಬಾರದು ಎಂದು ಪಾನ್ ಬ್ರೋಕರ್‌ಗಳನ್ನು ಓಡಿಸಿದ್ದೆ. ಆ ಕಾಲಕ್ಕೆ ಅವರು ಹೆದರಿದ್ದರು. ಈಗ ಎಲ್ಲಾ ಬಂದಿದ್ದಾರೆ. ನಮ್ಮ ದೇಶದ ಹಣ ಎಲ್ಲಾ ಅವರ ಕೈಗೆ ಹೋಗುವುದರಿಂದ ಅವರಿಗೆ ದನಗಳನ್ನು ಸಾಕಲಿಕ್ಕೆ ಹೇಳಬೇಕು. ಇನ್ನು ಅಭಿವೃದ್ಧಿ ಕಾರ್ಯದ ಬಗ್ಗೆ ಹೇಳಬೇಕೆಂದರೆ, ಎನ್‌ಆರ್‌ಇಪಿ, ಡಿಪಿಎಪಿ, ಈ ಕಾರ್ಯಕ್ರಮಗಳೇ ಬೇರೆ, ಸ್ಕೇರ್‌ಸಿಟಿ ವರ್ಕ್ಸ್ ಬೇರೆ. ನಾನು ಹೃದಯದಲ್ಲಿ ಸಂಕಟಪಟ್ಟು ಒಂದು ಮಾತನ್ನು ಹೇಳುತ್ತಿದ್ದೇನೆ. ಇವೊತ್ತು ಮಿನಿಮಮ್ ವೇಜಸ್ ಆ್ಯಕ್ಟ್ ಪ್ರಕಾರ ರೂ. ೭-೮೦ ಪೈಸೆ ಕೊಡುತ್ತೇವೆ ಅಂದರೆ ಕೆಲಸಕ್ಕೆ ಯಾರು ಬರುತ್ತಾರೆ. ಇವರು ಕೊಡುವಂಥ ಹಣಕ್ಕೆ ಒಂದೂವರೆ ಸೇರು ಅಕ್ಕಿ ಬರುತ್ತದೆ. ೧೦ ರೂಪಾಯಿ ಆದರೂ ಕೊಡಬೇಕು.

ಅಧ್ಯಕ್ಷರು.—೧೦ ರೂಪಾಯಿ ಪ್ರಕಾರ ಕೊಟ್ಟರೆ ಒಂದು ತಿಂಗಳು ಪೂರ್ತಿ ಕೆಲಸ ಮಾಡಿದವರಿಗೆ ೩೦೦ ರೂಪಾಯಿ ಸಿಕ್ಕುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಇವತ್ತು ಮಿನಿಮಮ್ ವೇಜಸ್‌ಗೆ ಗೌರವ ಕೊಡುವುದು ಬೇಡವೇ. ಕೇಂದ್ರದವರು ನಿಗದಿಮಾಡಿ ಕಳುಹಿಸಿದ್ದಾರೆ ಅಂದರೆ, ರೂ. ೭-೮೦ ಪೈಸೆಗೆ ಇನ್ನೂ ನಾಲ್ಕೈದು ರೂಪಾಯಿ ಸಬ್ಸಿಡಿ ಕೊಟ್ಟು ಜನರು ಕೆಲಸಕ್ಕೆ ಬರುವಂತೆ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ರೂ. ೭-೮೦ ಪೈಸೆ ಇರತಕ್ಕದ್ದು ೧೦ ರೂಪಾಯಿಗೆ ಫಿಕ್ಸ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಕೃಷ್ಣನ್‌ರವರಿಗೆ ಮಾತನಾಡಲಿಕ್ಕೆ ಚಟ ಎಂದು ಕಾಣುತ್ತದೆ. ಅವರು ಸುಮ್ಮನೆ ಇದ್ದರೆ ಒಳ್ಳೆಯದು, ಮಿನಿಮಮ್ ವೇಜಸ್ ಆ್ಯಕ್ಟ್ ಪ್ರಕಾರ ೯ ರೂಪಾಯಿ ಮಾಡಿದ್ದೇವೆ ಅವರಿಗೆ ಗೊತ್ತಿಲ್ಲ. ರೂ. ೯-೨೦ ಪೈಸೆ ಏನೋ ಮಾಡಿದ್ದೇವೆ. ದಯಮಾಡಿ ೧೦ ರೂಪಾಯಿಗಳಿಗೆ ಕಡಿಮೆ ಇಲ್ಲನಂತೆ ಕೂಲಿ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದು ಬೆಸ್ಟ್ ಸಜೆಷನ್. ತಾವು ಸಬ್ಸಿಡಿ ಕೊಡಿ, ಏನಾದರೂ ಮಾಡಿ ಅವರು ರಜದ ದಿವಸ ಸೇರಿ ಕೆಲಸ ಮಾಡಿದರೆ ಒಂದು ತಿಂಗಳಿಗೆ ೩೦೦ ರೂಪಾಯಿ ಆಗುತ್ತದೆ,

೨-೩೦ ಪಿ. ಎಂ.

ಶ್ರೀ ಬಿ. ಬಸವಲಿಂಗಪ್ಪ.—ಜನಗಳನ್ನು ನೇಮಿಸುವಂಥ ಕೆಲಸ ಮಾಡಿಲ್ಲ. ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ, ಡಿಪಿಎಪಿ ಕಾರ್ಯಕ್ರಮಗಳನ್ನು ಬಿಟ್ಟು, ಯಾವ ಕಾರ್ಯಕ್ರಮಗಳನ್ನು, ಯಾವ ಕೆಲಸಗಳನ್ನೂ ಎಂದೂ ಮಾಡಿಲ್ಲ. ಕಂಟ್ರಾಕ್ಟರ್ ಮುಖಾಂತರ ಕೆಲಸ ಮಾಡಿದ್ದೀರಿ. ಕಂಟ್ರಾಕ್ಟರ ಮುಖಾಂತರ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ. ಕೂಲಿಯನ್ನು ಜಾಸ್ತಿಮಾಡಿ ಜನಗಳಿಗೆ ಕೆಲಸ ಕೊಡಬೇಕು, ಆ ಕೆಲಸವನ್ನು ಮಾಡಿದ್ದೀರಾ ? ಯಾವ ತಾಲ್ಲೂಕಿನಲ್ಲಿ ಏನೇನು ಕೆಲಸ ಕೊಡಲಾಗಿದೆ, ಯಾವ ಯಾವ ಯೋಜನೆ ಪ್ರಕಾರ ಕೊಡಲಾಗಿದೆ ಎಷ್ಟು ಜನ ಕೂಲಿಕಾರರು ಕೆಲಸ ಮಾಡುತ್ತಿದ್ದಾರೆ ಎನ್ನುವಂಥ ಪಟ್ಟಿಯನ್ನು ಮಾಡಬೇಕೆನ್ನುವ ನಿಯಮವನ್ನು ನಾನು ಇದ್ದಾಗಲೇ ಮಾಡಿದ್ದೆ. ಅದನ್ನು ಮತ್ತೆ ಮಾಡಿದ್ದೀರಾ ? ಯಾವ ಯಾವ ಊರಿನಲ್ಲಿ ಮಾಡಿದ್ದೀರಿ ? ಮೂರು ವರ್ಷಗಳ ಹಿಂದೆ ತಯಾರು ಮಾಡಿದಂಥ ಪಟ್ಟಿ ಇತ್ತು, ಈಗ ಅದು ಕೂಡ ಅಧಿಕಾರಿಗಳ ಕೈಯಲ್ಲಿ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ೨೩೦೦ ಜನ ಕೂಲಿಗಾರರು ಇದ್ದಾರೆ. ಅಧಿಕಾರಿಗಳ ಹತ್ತಿರ ಯೋಜನೆಗಳ ಕರಡುಗಳಾಗಲೀ, ಕೂಲಿಗಾರರ ಪಟ್ಟಿಗಳಾಗಲೀ ಇಲ್ಲ. ಅಧಿಕಾರಿಗಳಿಗೆ ಯೋಜನೆಗಳು ಯಾವುವು ಎನ್ನುವುದೇ ಗೊತ್ತಿಲ್ಲ. ಅವುಗಳ ಅರಿವು ಇಲ್ಲ, ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ, ಅಧಿಕಾರಿಗಳ ಕೈಯಲ್ಲಿ ಯೋಜನೆಗಳ ಪಟ್ಟಿ ಇರಬೇಕು. ಪ್ರತಿ ಗ್ರಾಮದಲ್ಲಿಯೂ ಕೂಲಿಗಾರರ ಪಟ್ಟಿ ಇಡಬೇಕು, ಜನಗಳಿಗೆ ತಕ್ಷಣ ಕೆಲಸ ಕೊಡಬೇಕು. ಈ ವಿಷಯವನ್ನು ಪ್ರತಿ ಮೀಟಿಂಗ್‌ನಲ್ಲಿಯೂ ಹಲವಾರು ಸಾರಿ ಹೇಳಿದ್ದೇನೆ. ನನ್ನ ತಾಲ್ಲೂಕಿನಲ್ಲಿ ಇದುವರೆಗೆ ೨೪೦ ಜನಕ್ಕೆ ಕೆಲಸ ಕೊಟ್ಟಿದ್ದೇವೆಂದು ಬರೆದಿದ್ದಾರೆ, ಇದನ್ನು ಬರೆಯುವುದಕ್ಕೆ ನಾಚಿಕೆಯಾಗಲಿಲ್ಲವೆ ? ಅಭಿವೃದ್ಧಿ ಕಮೀಷನರ್‌ರವರು ಬರೆದಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಬರಗಾಲ ಇದ್ದು, ಸುಮಾರು ೧೨,೦೦೦ ಜನ ಲ್ಯಾಂಡ್‌ಲೆಸ್ ಲೇಬರರ್ಸ್ ಇದ್ದರೂ ೩೪೦ ಜನಕ್ಕೆ ಮಾತ್ರ ಕೆಲಸ ಕೊಟ್ಟಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಬೆಂಗಳೂರು ನಾರ್ತ್ ತಾಲ್ಲೂಕಿನಲ್ಲಿ ರೂ. ೭.೮೦ ಪೈಸೆ ಕೂಲಿ ಕೊಡುವುದರಿಂದ ಜನ ಯಾರೂ ಬರುವುದಿಲ್ಲ,

ಶ್ರೀ ಬಿ. ಬಸವಲಿಂಗಪ್ಪ.—ಜಾಲಪ್ಪನವರು ಬಡವರು ಆಗಿದ್ದರು, ಈಗ ಒಂದು ತರಹ ಆಗಿದ್ದಾರೆ,

ಶ್ರೀ ಆರ್. ಎಲ್. ಜಾಲಪ್ಪ.—ನಾನು ಈ ಜಿಲ್ಲೆಯ ಮಂತ್ರಿಯಾಗಿದ್ದೇನೆ, ನಮ್ಮಲ್ಲಿ ಬರ ಇದ್ದೂ ಆದರೂ ಶೇಕಡ ೬೦ರಷ್ಟು ಬೆಳೆಯಾಗಿದೆ. ಕೆಲಸವಾಗಬೇಕೆಂದು ಹೇಳಿ, ನಮಗಿಂತ ಕಷ್ಟದಲ್ಲಿರುವವರಿಗೆ ಮೊದಲು ಕೊಡೋಣ. ನಮಗೆ ಸದ್ಯಕ್ಕೆ ತೊಂದರೆ ಇಲ್ಲ. ಮಾರ್ಚಿ, ಏಪ್ರಿಲ್‌ವರೆಗೆ ತೊಂದರೆ ಏನೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ತಾವು ರೈತರಿಗೆ ಕೊಟ್ಟಿರತಕ್ಕ ಸಾಲ ವಸೂಲಿ ಮಾಡುವುದಕ್ಕೆ ಪ್ರಯತ್ನ ಮಾಡಿ, ನಿಮ್ಮನ್ನು ಹಿಡಿಸಿಕೊಂಡು ಬರುತ್ತಾರೆ, ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ ಯೋಜನೆ ಮುಖಾಂತ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಪಾಠಶಾಲೆಗಳ, ರಸ್ತೆಗಳ ದುರಸ್ತಿ ಕೆಲಸ, ಸಾಮೂಹಿಕ ಕಟ್ಟಡಗಳು, ಕೆರೆಗಳ ಮತ್ತು ಕಾಲುವೆಗಳು ಹೂಳು ತೆಗೆಸತಕ್ಕ ಕೆಲಸ, ಕಾಡಿನಲ್ಲಿ ಮರಗಳನ್ನು ನೆಡತಕ್ಕ ಕೆಲಸ, ಹೊಲಗಳಲ್ಲಿ ಒಡ್ಡುಗಳನ್ನು ಹಾಕಿಸತಕ್ಕಂಥ ಕೆಲಸ, ದನಗಳ ಆಸ್ಪತ್ರೆಗಳನ್ನು ಕಟ್ಟಿಸಿಕೊಂಡಂಥ ಕೆಲಸ, ಕಂದಾಯ ಇಲಾಖೆ ನೌಕರರು, ಅಭಿವೃದ್ಧಿ ಇಲಾಖೆಯ ನೌಕರರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಸಿ ಕೊಡವಂಥ ಕೆಲಸವನ್ನು ಮಾಡಿ, ಪಂಚಾಯಿತಿ ಕಟ್ಟಡಗಳು, ಗ್ರಾಮಗಳಿಗೆ ಚರಂಡಿ ವ್ಯವಸ್ಥೆ ಮಾಡುವುದರ ಮೂಲಕ ಶಾಶ್ವತ ಸಂಪತ್ತನ್ನು ಕಲ್ಪಿಸಿಕೊಡಬೇಕು, ಸೃಷ್ಟಿಸಬೇಕೆಂದು ವಿನಯದಿಂದ ಹೇಳುತ್ತೇನೆ. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಎರಡೂವರೆ ಲಕ್ಷ ಜನ ಇದ್ದು, ೩೪,೦೦೦ ಜನ ಕೂಲಿಗಾರರು ಇದ್ದಾರೆ. ಕೂಲಿವಾರು ಪಟ್ಟಿ ಮಾಡಿಲ್ಲ, ಕಂಟ್ರಾಕ್ಟರ್ ಮುಖಾಂತರ ೨೪೦ ಜನರಿಗೆ ಉದ್ಯೋಗ ಕೊಟ್ಟಿದ್ದೀರಿ, ಆರ್. ಎಲ್. ಇ. ಜಿ. ಪಿ. ಯೋಜನೆಯಲ್ಲಿ ಒಂದು ರೂಪಾಯಿ ಕೂಡ

ಖರ್ಚು ಮಾಡಿಲ್ಲ. ಒಡ್ಡಿಗೋಸ್ಕರ ಎಷ್ಟು ಖರ್ಚು ಮಾಡಿದ್ದೀರಿ. ಅಧಿಕಾರಿಗಳು ಮಾತ್ರ ದಪ್ಪ ದಪ್ಪಗೆ ಚನ್ನಾಗಿದ್ದಾರೆ ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ, ೧೯೪ ಶಾಲೆಗಳಿದ್ದು, ೧೨೮ ಶಾಲೆಗಳಿಗೆ ಕಟ್ಟಡ ಇಲ್ಲ. ಛಾವಣಿ ಇಲ್ಲ, ರಿಪೇರಿಗಾಗಿ ಕೊಟ್ಟಿದ್ದ ೮೮,೦೦೦ ರೂಪಾಯಿಗಳನ್ನು ವಾಪಸ್ಸು ತೆಗೆದುಕೊಂಡಿದ್ದೀರಿ. ಸರ್ಕಾರದ ವೈಖರಿ ಹೀಗಿದೆ. ಹಣವನ್ನು ಖರ್ಚು ಮಾಡಬಾರದೆಂದು ಆದೇಶ ಕೊಟ್ಟಿದ್ದೀರಿ. ಐಆರ್‌ಡಿಪಿ ಯೋಜನೆಯಲ್ಲಿ ೧೯೮೪–೮೫ನೇ ಇಸವಿಯಲ್ಲಿ ೨೨೫ ಅರ್ಜಿಗಳು ಬ್ಯಾಂಕುಗಳ ಮೂಲಕ ಸಾಲ ಪಡೆಯುವುದಕ್ಕೆ ಬಂದಿದ್ದರೂ, ಲೀಡ್ ಬ್ಯಾಂಕುಗಳು ಒಂದೇ ಒಂದು ಅರ್ಜಿಯನ್ನೂ ಮಂಜೂರು ಮಾಡಿಲ್ಲ. ಮತ್ತೆ ೧೯೮೫–೮೬ನೇ ಸಾಲಿಗೆ ೩೦೦ ಅರ್ಜಿಗಳು ಬಂದಿವೆ. ಅದರಲ್ಲಿಯೂ ಕೂಡ ಒಂದು ಅರ್ಜಿಯನ್ನು ಮಂಜೂರು ಮಾಡಿಲ್ಲ, ಕೂಡಲೇ ಹಣ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ೧೯೮೫–೮೬ನೇ ಸಾಲಿಗೆ ೩೩೦ ಮನೆಗಳನ್ನು ಮಂಜೂರು ಮಾಡಿದ್ದರೂ ಕೂಡ ಒಂದೇ ಒಂದು ಮನೆಯನ್ನು ನನ್ನ ತಾಲ್ಲೂಕಿನಲ್ಲಿ ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡಿಲ್ಲ. ೨೮ ಮನೆಗಳು ಅಪೂರ್ಣವಾಗಿವೆ. ಬೆಂಗಳೂರು ಉತ್ತರ ತಾಲ್ಲೂಕಿನ ನಮ್ಮ ಬೋರ್ಡಿಗೆ ತಕ್ಷಣ ೨೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಿಂದಿನ ಸರ್ಕಾರದವರು ಜನತಾ ಮನೆಗಳಿಗೆ ದುಡ್ಡು ಕೊಡಬೇಕಾಗಿಲ್ಲವೆಂದು ಹೇಳಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಸಾಲದ ರೂಪದಲ್ಲಿ ಕಟ್ಟಿಸಿಕೊಟ್ಟಿದ್ದೇವೆಂದು ಹೇಳಿಲ್ಲ. ಹುಡ್ಕೋದಿಂದ ಸಾಲ ತಂದು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಸಾಲ ವಾಪಸ್ಸು ಕೊಡದಿದ್ದರೆ ದುಡ್ಡು ಕೊಡುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಬರಗಾಲ ಬಂತೆಂದು ನಾವೆಲ್ಲ ಭಾಷಣ ಮಾಡಿದ್ದೇವೆ. ಸುಖವಾಗಿರುವವರನ್ನು ನಾನು ಪಟ್ಟಿಮಾಡಿದ್ದೇವೆ. ಸುಖವಾಗಿರುವವರು ಯಾರೆಂದರೆ ಸರ್ಕಾರಿ ಅಧಿಕಾರಿಗಳು ಪುಸ್ತಕ ಬರೆಯುವ ಜನ, ಸ್ಟೇಜ್ ಮೇಲೆ ಕುಣಿಯುವ ಜನ, ರೇಷ್ಮೆ ಸೀರೆಯನ್ನು ಹುಟ್ಟುಕೊಂಡು ಹಾಡುವ ಜನ, ವೇಷ ಹಾಕಿಕೊಂಡು ನಟನೆ ಮಾಡುವವರು ಅಂದರೆ ಸಿನಿಮಾದವರು ಇವರಿಗೆ ಬರ ಇಲ್ಲ. ವ್ಯಾಪಾರಸ್ಥರು, ಸರ್ಕಾರದ ಮಧ್ಯವರ್ತಿಗಳು. ದಳ್ಳಾಳಿಗಳು, ದೇವರ ಬೊಂಬೆಗಳನ್ನು ಸೃಷ್ಟಿಮಾಡಿಕೊಂಡು ಪೂಜೆ ಮಾಡುವವರು ಜನರನ್ನು ಮರಳು ಮಾಡುವವರು ಮಠಾಧಿಪತಿಗಳು ಹೋಟೆಲ್ ನಡೆಸುವವರು ಇವರುಗಳೆಲ್ಲ ಸುಖವಾಗಿದ್ದಾರೆ.

ಕೊನೆಯದಾಗಿ ನಾನೊಂದು ಸಲಹೆ ಮಾಡುತ್ತೇನೆ, ಆರ್ಟಿಕಲ್ ೩೬೦ (೩) ಅದನ್ನು ತಾವು ಓದಿ. ರಾಜ್ಯಾಂಗದ ಪ್ರಕಾರ ಸರ್ಕಾರ ಉಳಿಯಬೇಕಾದರೆ ಸರ್ಕಾರ ನಿರಂತರವಾಗಿ ಕೆಲಸ ಮಾಡಬೇಕಾದರೆ, ಕಾರ್ಯಕ್ರಮಗಳನ್ನು ಪೂರೈಸಬೇಕಾದರೆ ಆರ್ಥಿಕ ತುರ್ತು ಪರಿಸ್ಥಿತಿಯನ್ನು ನೀವು ಕರ್ನಾಟಕ ರಾಜ್ಯದಲ್ಲಿ ತರದಿದ್ದರೆ ನೀವು ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ನನ್ನ ಸ್ಪಷ್ಟ ಅಭಿಪ್ರಾಯ. ಅದು ತಪ್ಪಿರಬಹುದು; ಅದರ ಪ್ರಕಾರ ನೀವು ವಾದ ಮಾಡಿ. ನೀವು ಶಾಸಕರಿಗೆ ಸಂಬಳ ಕೊಡುವುದನ್ನು ನಿಲ್ಲಿಸುತ್ತೀರಿ, ಅಂದರೆ ಇದರ ಅರ್ಥವೇನು ? ಸರ್ಕಾರದಲ್ಲಿ ಹಣದ ವ್ಯವಸ್ಥೆ ಇಲ್ಲ, ಹಣದ ಮುಗ್ಗಟ್ಟು ಇದೆ; ಹಣದ ಮುಗ್ಗಟ್ಟು ಇದೆಯೆಂದು ಕೇಂದ್ರದ ಕಡೆ ನೋಡಬೇಡಿ. ಇದನ್ನು ಪರಿಹಾರ ಮಾಡುವುದಕ್ಕೆ ಒಂದು ಮಾರ್ಗವನ್ನು ಕಂಡುಹಿಡಿದುಕೊಳ್ಳಬೇಕು. ರಾಜ್ಯಾಂಗದ ಆರ್ಟಿಕಲ್ ೩೬೦(೩) ಪ್ರಕಾರ ಹಣಕಾಸಿನ ತುರ್ತು ಪರಿಸ್ಥಿತಿಯನ್ನು ಜಾರಿಗೆ ತಂದು ಆರ್ಥಿಕ ಮುಗ್ಗಟ್ಟನ್ನು ನಿವಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ನಿಮಗೆ ಬೇರೆ ಮಾರ್ಗವಿಲ್ಲವೆಂದು ನಾನು ಈ ಮಾತನ್ನು ಹೇಳಿದ್ದೇನೆ. ನಾನು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜ್ಞಾನದೇವ ಶಿವನಾಗಪ್ಪ ದೊಡ್ಡಮೇಟಿ (ರೋಣ) ಮಾನ್ಯ ಅಧ್ಯಕ್ಷರೆ, ಬರಗಾಲ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು ಎನ್ನುವ ಚಿಂತನೆ ಸಭೆಯಲ್ಲಿ ನಡೆದಿದೆ. ಆದರೆ ವಾಸ್ತವಿಕವಾಗಿ ನಾವು ಹೇಳುವುದನ್ನು ಕೇಳಬೇಕು. ಸರ್ಕಾರ ಬರಗಾಲ ಪರಿಹಾರ ಕಾರ್ಯದಲ್ಲಿ ಕೈಗೊಂಡ ಕಾರ್ಯಕ್ರಮಗಳ ವಾಸ್ತವ ಚಿತ್ರವನ್ನು ಆರ್ಥಿಕವಾಗಿ ಹಾಗೂ ಭೌತಿಕವಾಗಿ ಅಂಕಿಅಂಶಗಳನ್ನು ನಮಗೆ ಒದಗಿಸಿದ್ದೀರಿ. ಆದರೆ ನಾವು ನಮ್ಮ ಶಾಸನಸಭಾ ಕ್ಷೇತ್ರಗಳಿಗೆ ಹೋಗಿ ಕೊಟ್ಟಿರತಕ್ಕ ಅಂಕಿಅಂಶಗಳ ಸತ್ಯಾಸತ್ಯತೆಯನ್ನು ಸ್ವತಃ ಪರಿಶೀಲಿಸಿದರೆ ಅದರಲ್ಲಿ ಪೂರ್ಣ ತಪ್ಪು ಎನ್ನುವುದು ಗೊತ್ತಾಗುತ್ತದೆ. ಅದನ್ನು ಬಿಟ್ಟು ನೀವು

ಕೊಟ್ಟ ಅಂಕಿಅಂಶಗಳನ್ನು ಆಧಾರವಾಗಿಟ್ಟುಕೊಂಡು ಮಾತನಾಡಿದರೆ ಅದು ಕಲ್ಪನೆಯ ಮಾತಾದೀತು ಎಂದು ಹೇಳುತ್ತೇನೆ. ಬಹುಶಃ ವಿರೋಧ ಪಕ್ಷದ ನಾಯಕರಾದಿಯಾಗಿ ಎಲ್ಲರೂ ರಾಜ್ಯಪಾಲರ ಭಾಷಣ ಕೇಳಲಿಕ್ಕೆ ಕೈಗೆ ಕಪ್ಪುಪಟ್ಟಿಯನ್ನು ಕಟ್ಟಿಕೊಂಡು ಬಂದಿದ್ದರು, ಕಪ್ಪು ಪಟ್ಟಿಯನ್ನು ತೆಗೆದು ಬಹುತೇಕ ಸರ್ಕಾರದ ತಲೆಗೆ ಕಟ್ಟಿದ್ದಾರೆಂದು ನನಗನ್ನಿಸುತ್ತದೆ. ಅದರಲ್ಲೂ ಮಾನ್ಯ ವಿರೋಧಪಕ್ಷದ ಕೆಲವು ಸದಸ್ಯರು ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ. ಜನರಿಗೆ ಕೈತುಂಬ ಕೆಲಸ ಕೊಡುವುದರಲ್ಲಿ ಒಂದು ವಾರದಲ್ಲಿ ಏಳು ದಿವಸ ಕೆಲಸ ಕೊಡದಿದ್ದರೂ ಕೂಡ ಕನಿಷ್ಟಪಕ್ಷ ನಾಲ್ಕೈದು ದಿವಸಗಳಾದರೂ ಕೆಲಸವನ್ನು ಕೊಡುವಂತಹ ಒಂದು ಪ್ರಯತ್ನ ಆಗಬೇಕು. ರೈತ ಹೇಗೆ ಮುಗಿಲನ್ನು ನೋಡುತ್ತಾನೆ, ಅದೇ ರೀತಿ ರಾಜ್ಯಸರ್ಕಾರ ಕೇಂದ್ರ ಸರ್ಕಾರದ ಕಡೆ ಮುಖಮಾಡಿ ನೋಡಬೇಕಾಗಿದೆ. ರೈತ ಮುಗಿಲಿನ ಮೋಡ ನೋಡಿ ಮಳೆ ಸುರಿಯುತ್ತದೆ ಎನ್ನುವ ಆಶಾಭಾವನೆಯಿಂದ ರೈತ ಮುಗಿಲನ್ನು ನೋಡಿದ. ರೈತನ ನಿರೀಕ್ಷೆಯಂತೆ ಅಕಾಲಿಕವಾಗಿ ಸ್ವಲ್ಪ ಮಳೆ ಬಂತು, ಹಾಗೆಯೇ ರಾಜ್ಯಸರ್ಕಾರ ಕೇಂದ್ರಸರ್ಕಾರದ ಕಡೆ ನೋಡಿದ್ದು ಆಯಿತು. ಆದರೆ ಅದು ಎಷ್ಟರಮಟ್ಟಿಗೆ ಆರ್ಥಿಕ ಸಮಸ್ಯೆಯನ್ನು ಬಗೆಹರಿಸುವಲ್ಲಿ ತನ್ನ ಪಾತ್ರವನ್ನು ವಹಿಸಿದೆ ಎನ್ನುವುದನ್ನು ಕೂಡ ನಾವು ನೋಡಬೇಕು. ಬರಗಾಲದ ಕೆಲಸಕಾರ್ಯಗಳನ್ನು ಸಮರೋಪಾದಿಯಲ್ಲಿ ತೆಗೆದುಕೊಳ್ಳಬೇಕೆಂದು ಎಲ್ಲರೂ ಹೇಳುತ್ತಿದ್ದಾರೆ. ಅಂದರೆ ಬರಗಾಲ ಕಾಮಗಾರಿಯಲ್ಲಿ ಆಯಾಯ ಕ್ಷೇತ್ರಗಳಲ್ಲಿ ಶಾಶ್ವತವಾದ ಉಪಯುಕ್ತವಾದ ಕೆಲಸಗಳನ್ನು ತೆಗೆದುಕೊಳ್ಳ ಬೇಕು. ಬರಗಾಲ ಯಾವುದೇ ಸರಕಾರವಿರಲಿ ಅದು ಒಂದು ಸವಾಲು, ನಾವು ಕಠಿಣ ಪರಿಸ್ಥಿತಿಯಲ್ಲಿದ್ದೇವೆ ಅದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು. ಬರಗಾಲ ಪರಿಸ್ಥಿತಿ ಇರುವಾಗ ರಾಜಕೀಯ ಹುನ್ನಾರ ಕಟ್ಟುವಂತಹ ಕೆಲಸ ಮಾಡುವುದು ಅದು ಯಾರೇ ಆಗಿರಲಿ ಅದು ಸರಿಯಲ್ಲ. ಚಳುವಳಿ ನೆಪದಲ್ಲಿ ರಾಜಕೀಯ ಹುನ್ನಾರ ನಡೆದಂತಹ ಉದಾಹರಣೆಗಳು ಇವೆ ಯಾವ ಹಾವು ಯಾವ ಪ್ರಕಾರ ಎಲ್ಲೆಲ್ಲಿ ಅಡಗಿರುತ್ತದೆ ಎನ್ನುವುದನ್ನು ಬಹಳ ಸೂಕ್ಷ್ಮವಾದ ರೀತಿಯಲ್ಲಿ ಕಂಡು ಹಿಡಿಯುವುದು ನಮ್ಮ ಕರ್ತವ್ಯ. ಒಂದು ರೀತಿ ನಮ್ಮ ರೋಣ ತಾಲ್ಲೂಕಿನಲ್ಲಿ ದನಗಳ ಚಳುವಳಿ ನಡೆಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ದನಗಳ ಚಳುವಳಿ ಕೂಡ ನಡೆಯಿತು. ದನಗಳ ಚಳುವಳಿ ಮಾಡಿದ್ದು ಬಹಳ ವಿಷಾದನೀಯ. ದನಗಳ ಚಳುವಳಿಯನ್ನು ಹೇಗೆ ಮಾಡಿದರು ಅಂದರೆ, ನರೆಗಲ್ಲುವಿನಲ್ಲಿ ಒಂದು ಕಾರ್ಯಕ್ರಮ ಇಟ್ಟರು, ಇದು ಮಾನ್ಯ ಕೆ.ಎಚ್. ಪಾಟೀಲ್‌ರಿಗೆ ಗೊತ್ತು, ನರೆಗಲ್ಲು ಮೊದಲೇ ದನಗಳ ಸಂತೆ ನಡೆಯುವ ಜಾಗ. ಅದರ ಬಗ್ಗೆ ವಿಸ್ತಾರವಾದ ಟೀಕೆಟಿಪ್ಪಣಿಗಳು ಬಂದಿವೆ. ಅದು ಮೊದಲೆ ಕಟುಕರ ಸಂತೆ. ಈಗ ಅಲ್ಲಿ ಅದೇ ಸುಗ್ಗಿ, ಈ ಸಲ ಆ ಸುಗ್ಗಿ ಸ್ವಲ್ಪ ಜಾಸ್ತಿಯಾಗಿದೆ. ಇದನ್ನು ವಿಸ್ತೃತವಾಗಿ ನಿವಾರಣೆ ಮಾಡುವ ಕಾಲಕ್ಕೆ, ಅನೇಕ ರಾಜಕೀಯ ವ್ಯಕ್ತಿಗಳು ಅಲ್ಲಿಗೆ ಬಂದು ಪ್ರಚೋದಕ ಭಾಷಣಗಳನ್ನು ಮಾಡಿ ಹೋಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಯಾವುದೆ ಪ್ರಚೋದಕ ಭಾಷಣಗಳನ್ನು ಮಾಡಿದರೂ ದನಗಳಿಗೆ ಹುಲ್ಲು ಬರುವುದಿಲ್ಲ. ದನಗಳನ್ನು ಸಂತೆಯಲ್ಲಿ ಕೂಡಿಹಾಕಿ ಗಜೇಂದ್ರ ಘಡಕ್ಕೆ ತೆಗೆದುಕೊಂಡು ಹೋಗುವ ಒಂದು ಕಾರ್ಯ ಮಾಡಿದರು. ಅಂದರೆ ಅಲ್ಲಿಂದ ದನಗಳನ್ನು ತೆಗೆದುಕೊಂಡು ಹೋಗುವುದು ಅಷ್ಟೇ ಇವರಿಗೆ ಗೊತ್ತು. ದನಗಳಿಗೆ ಮೇವು ಹಾಕಬೇಕೆನ್ನುವುದು ತೆಗೆದುಕೊಂಡು ಹೋದವರಿಗೆ ಗೊತ್ತಿರಲಿಲ್ಲ. ದನಗಳನ್ನು ತೆಗೆದುಕೊಂಡು ಹೋಗಿ ತಹಶೀಲ್ದಾರ್‌ರವರ ಕಛೇರಿಯ ಮುಂದೆ ಕೂಡಿಹಾಕಿ. ದನಗಳ ಪ್ರದರ್ಶನ ಮಾಡಬೇಕೆನ್ನುವ ಉದ್ದೇಶದಿಂದ ಮಾಡಿದ್ದರು. ತಹಶೀಲ್ದಾರರ ಕಛೇರಿಯ ಮುಂದೆ ದನಗಳು ನಿಲ್ಲಲಿಲ್ಲ. ಮನುಷ್ಯರು ಮಾಡುವ ಭಾಷಣ ಕೇಳಲಿಕ್ಕೆ ದನಗಳು ಮನುಷ್ಯರಲ್ಲ. ದನಗಳು ಎಲ್ಲಿಯವರೆಗೆ ನಿಂತಾವು? ಅವು ಕೂಡ ಪ್ರಾಣಿಗಳು ಇವರ ಭಾಷಣ ಕೇಳಲಿಲ್ಲ ಒಂದೊಂದೆ ಹಸಿರು ಎಲ್ಲಿತ್ತು ಅಲ್ಲಿಗೆ ಮೇವಿಗಾಗಿ ಹೋಗಿಬಿಟ್ಟವು.

ಹೀಗೆ ಅವರು ಬಂದು ಅಲ್ಲಿ ರಾಜಕೀಯ ಭಾಷಣವನ್ನು ಮಾಡಿ, ಜನರು ಉದ್ರೇಕಗೊಳ್ಳುವ ರೀತಿಯಲ್ಲಿ ಭಾಷಣವನ್ನು ಮಾಡಿ, ಜನತೆಯನ್ನು ಒಂದು ರೀತಿಯಲ್ಲಿ ಪ್ರಚೋದನೆ ಮಾಡಿದರು. ಈ ರೀತಿಯ ಭಾಷಣವನ್ನು ಮಾಡುವುದರಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕಾಗುತ್ತದೆಯೇ ? ಈ ರೀತಿ ಮಾಡುವುದರಿಂದ ಮತ್ತಷ್ಟು ಪಾಪದ ಕೆಲಸವನ್ನು ಮಾಡಿದಂತಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ನಾವೂ ಕೂಡ ಗೋಶಾಲೆಯನ್ನು ಪ್ರಾರಂಭ ಮಾಡಿದ್ದೇವೆ. ಗೋಶಾಲೆಗೆ ಬರುತ್ತಿರುವ ದನಕರುಗಳಲ್ಲಿ ಕೆಲವು ಒಳ್ಳೆಯ ದನಕರುಗಳೂ ಬರುತ್ತದೆ. ಕೆಲವು ರೋಗಗ್ರಸ್ತ ದನಕರುಗಳೂ ಬರುತ್ತವೆ. ನಮ್ಮ ನಾಗೇಂದ್ರಗಡ ರಾಜೇಂದ್ರ ಗಡದ ಒಂದು ಭಾಗ. ಅಲ್ಲಿ ಒಂದು ಗೋಶಾಲೆಯನ್ನು ನಾವು ಮಾಡಿದ್ದೇವೆ. ತಾವುಗಳೆಲ್ಲರೂ ಅಲ್ಲಿಗೆ ಹೋಗಿ ನೋಡಿಕೊಂಡು ಬನ್ನಿ. ಸುತ್ತಲೂ ಹಸಿರು

ನಡುವೆ ಗುಡ್ಡ ಇದ್ದು, ನೀರಿನ ಸೌಕರ್ಯ ಇದೆ. ಸುಮಾರು ಒಂದು ಸಾವಿರ ದನಗಳನ್ನು ಸರ್ಕಾರ ಆ ಗೋಶಾಲೆಯಲ್ಲಿ ಸಾಕುತ್ತಿದೆ. ಅಲ್ಲಿರುವಂತಹ ಪ್ರತಿಯೊಂದು ದನಕರಗಳ ಮೇಲೂ ವಿಮೆಯನ್ನು ಮಾಡಿಸಿದ್ದೇವೆ. ಅವುಗಳನ್ನು ರಕ್ಷಣೆ ಮಾಡುವುದಕ್ಕಾಗಿ ಸಾಕಷ್ಟು ಕಾಳಜಿಯನ್ನು ವಹಿಸಿದ್ದೇವೆ. ಆದರೂ ಕೂಡ ರೈತರು ಏನು ಇದ್ದಾರೆ ಅವರೂ ಕೂಡ ಇದನ್ನು ವಿಚಾರ ಮಾಡಬೇಕಾಗುತ್ತದೆ. ಎಷ್ಟೋ ಮಂದಿ ರೈತರು ತಮ್ಮ ಹೊಲಗಳಲ್ಲಿ ಮೇವನ್ನು ಬೆಳೆಯುತ್ತಿಲ್ಲ. ಯಾರ ಮನೆಯ ಹತ್ತಿರವೂ ದನಗಳಿಗೆ ಬೇಕಾದಂತಹ ಮೇವು ಹಾಗೂ ಹೊಟ್ಟನ್ನು ಇಟ್ಟುಕೊಂಡಿಲ್ಲ. ಎಲ್ಲರೂ ತಮ್ಮ ದನಕರುಗಳನ್ನು ಗೋಶಾಲೆಗೆ ಹೊಡೆದು ಸುಮ್ಮನೆ ಕೈಕಟ್ಟಿಕೊಂಡು ಕುಳಿತಿದ್ದಾರೆ. ಇಂತಹ ಗೋಶಾಲೆಗಳನ್ನು ತೆರೆದರೂ ಎಲ್ಲಿಯವರೆಗೆ ಅವುಗಳಿಗೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯ ? ನಾಳೆಯಾದರೂ ಅವರು ತಮ್ಮ ತಮ್ಮ ದನಕರುಗಳನ್ನು ಅವರವರ ಮನೆಗಳಿಗೆ ಹೊಡೆದುಕೊಂಡು ಹೋಗಬೇಕು. ಆದರೆ ಎಲ್ಲೆಲ್ಲಿ ನೀರಾವರಿ ಸೌಕರ್ಯ ಇದೆ ಅಲ್ಲೆಲ್ಲಾ ದನಕರುಗಳಿಗೆ ಮೇವನ್ನು ಬೆಳೆಯುವುದಕ್ಕೆ ಯಾವ ರೈತರೂ ಪ್ರಯತ್ನ ಮಾಡಿಲ್ಲ. ಹುಲ್ಲನ್ನು ಯಾರು ಬೆಳೆಯಬೇಕು ? ರೈತರು ತಮ್ಮ ತಮ್ಮ ಹೊಲಗಳಲ್ಲಿ ಹುಲ್ಲನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆಯೋ ಎಂದು ನಾನು ಕೇಳುತ್ತಿದ್ದೇನೆ. ಇದನ್ನು ನೋಡುವ ಸಲುವಾಗಿ ಮಲಪ್ರಭಾ ನದಿಯ ದಡದವರೆಗೂ ನಾನು ಹೋಗಿದ್ದೆ. ಅಲ್ಲಿ ಕೇವಲ ಹತ್ತಿಯನ್ನು ಹಾಕಿದ್ದಾರೆಯೇ ವಿನಃ ಮೇವನ್ನು ಬೆಳೆಯುವುದಕ್ಕೆ ಯಾರೂ ಪ್ರಯತ್ನ ಮಾಡಿಯೇ ಇಲ್ಲ. ಇದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ರೈತರು ಇಷ್ಟು ಎಕರೆಯಲ್ಲಿ ಕಡ್ಡಾಯವಾಗಿ ದನಕರುಗಳಿಗೆ ಬೇಕಾದಂತಹ ಹುಲ್ಲನ್ನು ಬೆಳೆಯಲೇಬೇಕೆಂಬ ಕಾನೂನನ್ನು ಮಾಡಿ. ಅಥವಾ ಅವರ ಮೇಲೆ ಆ ರೀತಿಯ ಒತ್ತಾಯವನ್ನಾದರೂ ತನ್ನಿ. ನಂತರ ಆ ಮೇವನ್ನು ಬೆಳೆಯುವುದಕ್ಕೆ ಬೇಕಾದಂತಹ ಬೀಜವನ್ನು ಕೊಡುವಂತಹ ವ್ಯವಸ್ಥೆಯನ್ನೂ ಸರ್ಕಾರ ಮಾಡಬೇಕಾಗುತ್ತದೆ. ದನಕರುಗಳಿಗೆ ಬೇಕಾದಂತಹ ಹುಲ್ಲನ್ನು ಬೆಳೆಯುವಂತಹದ್ದು ನಮ್ಮ ಮೇಲೆ ಬಿದ್ದಿದೆ ಎಂಬುದನ್ನು ರೈತರು ತಿಳಿದುಕೊಳ್ಳಬೇಕು. ಮನುಷ್ಯರು ಬದುಕಬೇಕಾದರೆ ದನಗಳನ್ನು ತಿಂದಾದರೂ ಬದುಕಬಹುದು. ಆದರೆ ದನಗಳು ಮೇವನ್ನೇ ತಿಂದು ಬದುಕಬೇಕಾಗುತ್ತದೆ. ಆ ದನಗಳು ಮನುಷ್ಯರನ್ನು ತಿಂದು ಬದುಕುವುದಕ್ಕಾಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ರೋಣಕ್ಕೆ ಬಂದಿದ್ದರು. ಆದರೆ ನಾನು ಅಂದು ಗಜೇಂದ್ರಗಡಕ್ಕೆ ಹೋಗಿದ್ದೆ, ಅಂದು ಅವರನ್ನು ಭೇಟಿ ಮಾಡುವುದಕ್ಕೆ ಪ್ರಯತ್ನಪಟ್ಟೆ. ವಿರೋಧಪಕ್ಷದ ನಾಯಕರನ್ನು ಭೇಟಿಯಾಗಬೇಕು, ಅವರ ಜೊತೆಯಲ್ಲೇ ಮಾತನಾಡಿ ಈ ವಿಚಾರವನ್ನು ಹೇಳೋಣ ಅಂತ ಮಾಡಿದ್ದೆ. ನಾನು ನಾಗೇಂದ್ರಗಡದಿಂದ ಬರುವುದರೊಳಗೆ ೫ ನಿಮಿಷದಲ್ಲಿ ತಮ್ಮ ಬರಗಾಲ ಪ್ರವಾಸವನ್ನು ಮುಗಿಸಿ ಅಲ್ಲಿಂದ ಹೋಗಿ ಬಿಟ್ಟಿದ್ದರು.

ಶ್ರೀ ಬಿ. ಬಸವಲಿಂಗಪ್ಪ.—ಎಷ್ಟು ಜನ ಸೇರಿದ್ದರು ಅಲ್ಲಿ ?

ಶ್ರೀ ಜಿ. ಎಸ್. ದೊಡ್ಡಮೇಟಿ.—ಬಹುತೇಕ ಜನ ಸೇರಿದ್ದಲ್ಲ. ಸಭೆಯ ವ್ಯವಸ್ಥೆಯನ್ನು ಯಾರೂ ಮಾಡಿಕೊಟ್ಟಿರಲಿಕ್ಕಿಲ್ಲ ಅವರ ಕಂಪನಿಯವರು. ಅದು ನಿಮ್ಮ ಒಳಗಿನ ಕಂಪನಿಯದು. ಅದನ್ನು ಇಲ್ಲಿ ಕೆದಕುವುದು ಸರಿಯಲ್ಲ. ಬರಗಾಲ ಅಂದಾಕ್ಷಣ, ಆ ಬಗ್ಗೆ ಭಾಷಣ ಮಾಡಿದಾಕ್ಷಣ ನಮಗೆ ಹುಲ್ಲು ದೊರೆಯಬಲ್ಲದೆ ? ಮೇವು ಮೇವು ಎಂದು ಕಲ್ಪನೆ ಮಾಡಿಕೊಂಡು ಮನೆಯಲ್ಲಿ ಮಂಡಕ್ಕಿ ತಿನ್ನುತ್ತಾ ಕೂತರೆ ಮಾಡುವವರು ಯಾರು ?

ಮತ್ತೆ ನಮ್ಮ ಪಕ್ಕದ ಗದಗ್ ಕ್ಷೇತ್ರದ ಹಿರಿಯ ಶಾಸಕರಾದ ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ಮಾತನಾಡುವಾಗ ಕೆಲವು ವಿಚಾರಗಳ ಬಗ್ಗೆ ಹೇಳಿದರು. ಅದನ್ನು ನಾನು ಹೇಳಬೇಕಾಗುತ್ತದೆ. ಏಕೆಂದರೆ ಅವರು ಪ್ರತಿಯೊಂದಕ್ಕೂ ನನ್ನನ್ನು ಸಾಕ್ಷಿಯಾಗಿಟ್ಟು ಹೇಳಿದ್ದಾರೆ. ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ತಮ್ಮ ಪ್ರೀತಿಯ ಮಾತುಗಳ ನಡುವೆ ಕಂದಾಯ ಮಂತ್ರಿಗಳಾದ ಶ್ರೀ ಬೊಮ್ಮಾಯಿಯವರ ಮೇಲೆ ಎರಗಿದ್ದೂ ಎರಗಿದ್ದೆ. ಅದರಲ್ಲಿ ಅವರು ಎಷ್ಟರ ಮಟ್ಟಿಗೆ ಜಳಕ ಮಾಡಿದರೋ ನನಗಂತೂ ಗೊತ್ತಿಲ್ಲ. ಇದರಲ್ಲಿ ಒಂದು ಮಾತನ್ನು ಹೇಳುವುದಾದರೆ, ಗದಗಿಗೆ ಮಾನ್ಯ ಕಂದಾಯ ಸಚಿವರು ಹೋಗಿದ್ದಾಗ ಅದನ್ನು ಪ್ರಕಟಣೆ ಮಾಡಿರಲಿಲ್ಲ. ಏಕೆಂದರೆ ಕೆಲವು ಕಡೆ ಅಧಿಕಾರಿಗಳಿಗೆ ಈ ವಿಚಾರವನ್ನು ತಿಳಿಸಿದರೆ, ಎಲ್ಲವನ್ನು ಸರಿಪಡಿಸಿ, ಯಾವಾಗಲೂ ಈ ರೀತಿಯಲ್ಲೇ ಕೆಲಸ ನಡೆಯುತ್ತಿದೆಯೇನೋ ಎನ್ನುವ ರೀತಿಯಲ್ಲಿ ವ್ಯವಸ್ಥೆ ಮಾಡಿಬಿಡುತ್ತಾರೆ. ಇದು ಎಲ್ಲರೂ ಒಪ್ಪತಕ್ಕ ಮಾತು. ಎಲ್ಲೆಲ್ಲಿ ಕೆಲಸಗಳನ್ನು ತೆಗೆದುಕೊಂಡಿದ್ದಾರೆಂಬುದರ ಬಗ್ಗೆ ಪ್ರಕಟಣೆ ಮಾಡಬೇಕೆಂದು

ಸರ್ಕಾರ ಆದೇಶವನ್ನು ಹೊರಡಿಸಿದೆ. ಆ ರೀತಿ ಪ್ರಕಟಣೆ ಹೊರಡಿಸಿದ ಮೇಲೆ ಆ ಸ್ಥಳಗಳಲ್ಲಿ ನಿಜವಾಗಿಯೂ ಕೆಲಸ ನಡೆಯುತ್ತಿದೆಯೋ ಎಂಬುದನ್ನು ನೋಡುವ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಂಡಿದೆ. ಮಾನ್ಯ ಕಂದಾಯ ಸಚಿವರು ಅಧಿಕಾರಿಗಳಿಗೆ ಬರಗಾಲದ ಸಮಯದಲ್ಲಿ ಕ್ರಿಯಾತ್ಮಕವಾಗಿ ಜನರಿಗೆ ಕೆಲಸವನ್ನು ದೊರಕಿಸಿಕೊಡುವ ಕೆಲಸವನ್ನು ಮಾಡಬೇಕಾಗಿದೆ ಎಂಬುದನ್ನು ತಿಳಿಸಿದ್ದಾರೆ. ಎಲ್ಲವನ್ನೂ ಅವರೇ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಕಡೆ ವಾರಕ್ಕೆ ನಾಲ್ಕು ದಿವಸ ಕೆಲಸವನ್ನು ಕೊಟ್ಟಿರಬಹುದು. ಕೆಲವು ಕಡೆ ೫ ದಿವಸ ಕೆಲಸವನ್ನು ಕೊಟ್ಟಿರಬಹುದು. ಕೆಲವು ಕಡೆ ಸರಿಯಾಗಿ ಕೆಲಸ ಮಾಡಿಲ್ಲದಿರುವುದೂ ಇರಬಹುದು. ನಾನು ಇಲ್ಲ ಅಂತ ಹೇಳುತ್ತಿಲ್ಲ. ಕೆಲಸ ಮಾಡುವವರೂ ಹೇಗೆ ಮಾಡುತ್ತಾರೆಂಬುದನ್ನೂ ಕೂಡ ನೋಡಬೇಕು, ನಿಯಮದ ಪ್ರಕಾರ ಅವರು ದಿವಸದಲ್ಲಿ ೭ ರಿಂದ ೮ ಗಂಟೆಯವರೆಗೆ ಕೆಲಸ ಮಾಡಬೇಕು. ಆದರೆ ಅವರು ಕೆಲಸವನ್ನು ಆ ರೀತಿ ಮಾಡುತ್ತಿಲ್ಲ, ಬರಗಾಲ ಇರುವುದರಿಂದ, ಗುದ್ದಲಿ ಹಿಡಿದುಕೊಂಡು ಕೆಲಸ ನಡೆಯುವಂತಹ ಸ್ಥಳದಲ್ಲಿ ಹೋಗಿ ಕುಳಿತರೆ ಸಾಕು, ಅದೂ ಇಲ್ಲದಿದ್ದರೆ, ಗುದ್ದಲಿಯನ್ನು ತೆಗೆದುಕೊಂಡು ಹೋಗಿ ಕೆಲಸ ನಡೆಯುವ ಸ್ಥಳದಲ್ಲಿ ಹಾಕಿ ಮನೆಯಲ್ಲಿದ್ದರೂ ಕೂಲಿ ಸಿಕ್ಕುತ್ತದೆ ಎನ್ನುವ ತಪ್ಪು ಕಲ್ಪನೆ ಜನಸಾಮಾನ್ಯರಲ್ಲಿ ಬಂದುಬಿಟ್ಟಿದೆ. ಕೆಲಸ ಮಾಡುವಂತಹವರಿಗೆ ಕೂಲಿ ಜಾಸ್ತಿಯಾಗಬೇಕು. ನಾವೂ ಕೂಡ ಬೇಡ ಅಂತ ಹೇಳುವುದಿಲ್ಲ.

೩-೦೦ ಪಿ.ಎಂ.

ಕೂಲಿಯನ್ನು ಜಾಸ್ತಿ ಮಾಡುವುದರ ಬಗ್ಗೆ ಹೇಳುವುದಾದರೆ, ಕೂಲಿಯನ್ನು ಜಾಸ್ತಿ ಮಾಡಿದರೆ ಅದಕ್ಕೆ ತಕ್ಕ ಹಾಗೆ ಕೆಲಸವನ್ನು ತೆಗೆದುಕೊಳ್ಳಬೇಕು, ದುಡ್ಡನ್ನು ತಿಂಗಳು ತಿಂಗಳು ಜಾಸ್ತಿ ಮಾಡುತ್ತಿರುತ್ತಾರೆ. ಆದರೆ ಸಮಸ್ಯೆಗಳು ಬಗೆಹರಿದಿವೆಯೋ ಎಂದರೆ ಇಲ್ಲ, ದಿವಸಕ್ಕೆ ೧೦ ರೂಪಾಯಿ ಕೂಲಿ ಕೊಟ್ಟರೆ ಕೂಲಿಗಾರರ ಸಮಸ್ಯೆ ಬಗೆಹರಿಯುತ್ತದೆಯೋ ಎಂಬುದನ್ನು ನೋಡಬೇಕು. ನೀವು ರೊಕ್ಕ ಕೊಡುವುದು ಬೇಡ. ಜೋಳ ಕೊಡಿ, ಗೋಧಿ ಕೊಡಿ ಎಂದು ಕೇಳುತ್ತಾರೆ. ೧೦ ರೂಪಾಯಿ ಬೇಡ, ೫ ರೂಪಾಯಿ ಕೊಡಿ, ಆದರೆ ಅಗ್ಗದ ದರದಲ್ಲಿ ಹೊಟ್ಟೆಗೆ ಕೂಳು ಹಾಕಿ ಎಂದು ಕೇಳಿದ ಜನರ ಬಗ್ಗೆ ಗಮನ ಕೊಡಬೇಕು. ದುಡ್ಡು ಸಮಸ್ಯೆಗಳನ್ನು ಸೃಷ್ಟಿ ಮಾಡುವ ಸಾಧನವಾಗಿದೆಯೋ ಹೊರತು ಸಮಸ್ಯೆಗಳನ್ನು ಪರಿಹರಿಸುವುದು ಅಲ್ಲ. ರೊಕ್ಕ ನೈತಿಕ ಅಧ:ಪತನಕ್ಕೆ ನಾಂದಿ ಹಾಡುತ್ತದೆ. ನೀರಾವರಿ ಪ್ರದೇಶಗಳಲ್ಲಿ ಎಲ್ಲ ಅನುಕೂಲಗಳು ಇರುತ್ತವೆ. ಆದರೆ ಬರಗಾಲ ಪ್ರದೇಶಗಳಲ್ಲಿರತಕ್ಕ ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕೆಂದನ್ನು ವಿಚಾರ ಮಾಡಬೇಕು. ಬೃಹತ್ ನೀರಾವರಿ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳೆಂದು ಪರಿಗಣಿಸಿ ಕೇಂದ್ರ ಸರ್ಕಾರ ಅದಕ್ಕೆ ಪೂರ್ಣ ಹಣಕಾಸಿನ ನೆರವನ್ನು ಕೊಡುವಂತೆ ಅಗ್ರಹ ಪಡಿಸಬೇಕು. ಒಕ್ಕಲುತನದ ಆಧಾರದ ಮೇಲೆ ಕೈಗಾರಿಕೆಗಳನ್ನು ಬೆಳಸಬೇಕು. ಸಣ್ಣ ನೀರಾವರಿ ಯೋಜನೆಗಳನ್ನು ಹೆಚ್ಚು ಮಾಡಬೇಕು. ಇದಕ್ಕೆಲ್ಲ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇನ್ನೂ ಹೇಳುವುದು ಬೇಕಾದಷ್ಟು ಇತ್ತು. ಅದನ್ನೆಲ್ಲ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸುವ ಕಾಲಕ್ಕೆ ಹೇಳುತ್ತೇನೆ. ಇದುವರೆಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಾಬುರೆಡ್ಡಿ ವಿ, ತುಂಗಳ್ (ಬಿಳಗಿ).—ಮಾನ್ಯ ಅಧ್ಯಕ್ಷರೆ, ರಾಜ್ಯದ ಅಭಾವ ಪರಿಸ್ಥಿತಿಯ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಕೊಟ್ಟಿರುವ ವರದಿ ಸದನದ ಮುಂದಿದೆ. ಅವರ ವರದಿ ಬಹಳ ಪ್ರಾಮಾಣಿಕವಾದದ್ದು. ಅದೇನು ಮುಚ್ಚಿಡುವಂಥದ್ದಲ್ಲ. ನಾನು ಅಂಕಿ ಅಂಶಗಳ ಬೆನ್ನು ಹತ್ತಿ ಹೋಗುವುದಿಲ್ಲ. ಕಂದಾಯ ಮಂತ್ರಿಗಳು ಸದನದ ಮುಂದಿಟ್ಟಿರುವ ವರದಿಯಲ್ಲಿ ಸಕಲ ಅಂಕಿ ಅಂಶಗಳು ಇವೆ. ಎಷ್ಟು ಜನರು, ಎಷ್ಟು ಜಿಲ್ಲೆಗಳು, ಎಷ್ಟು ತಾಲ್ಲೂಕುಗಳು. ಎಷ್ಟು ಮಂದಿ ಚಿಕ್ಕ ರೈತರು ಮತ್ತು ಅತಿ ಚಿಕ್ಕ ರೈತರು ಅಭಾವ ಪೀಡಿತರಾಗಿದ್ದಾರೆಂಬ ಚಿತ್ರವನ್ನು ಇಟ್ಟಿದ್ದಾರೆ. ೧೮ ಜಿಲ್ಲೆಗಳ ೧೪೬ ತಾಲ್ಲೂಕುಗಳಲ್ಲಿ ಬರಗಾಲ ಆವರಿಸಿದೆ. ೧೯೭೨-೭೩ ರಲ್ಲಿ ಕೂಡ ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ತಲೆದೋರಿತ್ತು, ಆದರೆ ಆ ಕಾಲಕ್ಕೂ ಈ ಕಾಲಕ್ಕೂ ಬಹಳ ವ್ಯತ್ಯಾಸ ಇದೆ. ಆಗ ಕರ್ನಾಟಕದ ಉತ್ತರ ಜಿಲ್ಲೆಗಳಲ್ಲಿ ಮಾತ್ರ ಬರಗಾಲ ಇತ್ತು. ಇವತ್ತು ದಕ್ಷಿಣ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳನು ಬಿಟ್ಟರೆ ಸರ್ವವ್ಯಾಪಿಯಾಗಿ ಬರಗಾಲ ಭೀಕರವಾಗಿದೆ. ನಮ್ಮ ರಾಜ್ಯದ

ಹಣಕಾಸಿನ ವ್ಯವಸ್ಥೆಯನ್ನು ಕೂಡ ಆಲೋಚಿಸುವಂಥ ಭೀಕರ ಬರಗಾಲ ತಲೆದೋರಿದೆ. ನಮ್ಮ ಜಿಲ್ಲೆಯ ಕೆಲವು ಭಾಗಗಳಲ್ಲಿ ಏನಾಗಿದೆ ಎಂದರೆ ನಮ್ಮ ಜಿಲ್ಲೆಯ ಉತ್ತರ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಮೇವು ಇಲ್ಲದೆ ರೈತರು ೪ ವರ್ಷಗಳಿಂದ ಕಂಗಾಲಾಗಿದ್ದಾರೆಂದರೆ ಅತಿಶಯೋಕ್ತಿಯಲ್ಲ ಅಥವಾ ಉತ್ಪ್ರೇಕ್ಷೆ ಅಲ್ಲ. ದನಗಳ ಮೇವಿಗಾಗಿ ಪ್ರಾಣಿಗಳನ್ನು ನೂರು ರೂಪಾಯಿಗೆ ಮಾರಿಕೊಳ್ಳುವ ಪ್ರಸಂಗ ಬಂದಿದೆ. ಈ ಪರಿಸ್ಥಿತಿಯನ್ನು ನಾವು ಇವತ್ತು ಎದುರಿಸಬೇಕಾಗಿದೆ. ಇದರಲ್ಲಿ ಯಾವುದೇ ಕಾರಣದಿಂದಲೂ ರಾಜಕೀಯ ಪ್ರವೇಶ ಮಾಡಬಾರದು ಮತ್ತು ಇದನ್ನು ರಾಜಕೀಯ ದೃಷ್ಟಿಯಿಂದಲೂ ನೋಡ ಬಾರದು. ಇಡೀ ರಾಜ್ಯದಲ್ಲಿ ದುರ್ಭರ ಪರಿಸ್ಥಿತಿ ಬಂದಿದೆ. ಹೀಗಿರುವಾಗ ನಾವು ಯಾವುದೇ ಪಕ್ಷ ಭೇದವಿಲ್ಲದೆ ಬರಗಾಲವನ್ನು ಎದರಿಸಬೇಕಾಗಿದೆ. ಜನರಿಗಿ ತುರ್ತಾಗಿ ಉದ್ಯೋಗ ಮತ್ತು ಜಾನುವಾರುಗಳಿಗೆ ಮೇವು ಕೊಡಬೇಕಾಗಿದೆ. ಮಾನ್ಯ ಬಂಗಾರಪ್ಪನವರು ಬಹಳ ಜವಾಬ್ದಾರಿಯುತವಾದ ವ್ಯಕ್ತಿಗಳು. ಅವರು ತಮ್ಮ ಪ್ರವಾಸ ಕಾಲದಲ್ಲಿ ಧಾರವಾಡ ಬೆಳಗಾಂ ಎಲ್ಲ ಕಡೆ ಹೋಗಿ ಬಂದಿದ್ದೇನೆ. ಆದರೆ ಎಲ್ಲೂ ಗೋಶಾಲೆಗಳು ಕಣ್ಣಿಗೆ ಬೀಳಲಿಲ್ಲವೆಂದು ಹೇಳಿದ್ದಾರೆ. ಬಂಗಾರಪ್ಪನವರು ನಮ್ಮ ನಾಯಕರಾಗಿದ್ದರು. ನಾವು ಅವರು ಒಂದೇ ಪಕ್ಕದಲ್ಲಿ ಸುಮಾರು ೨೦ ವರ್ಷಗಳ ಕಾಲ ಕೆಲಸ ಮಾಡಿದವರು. ಅವರಿಗೆ ನಾನು ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗಿದೆ. ನಮ್ಮ ಕ್ಷೇತ್ರದ ಕುಂಬಾರಳ್ಳಿಯಲ್ಲಿ ಒಂದು ಗೋಶಾಲೆ ಇದೆ. ಅಲ್ಲಿ ೪೪೮ ದನಗಳು ಇವೆ. ಅವುಗಳಿಗೆ ನೀರಿನ ವ್ಯವಸ್ಥೆ ದೀಪದ ವ್ಯವಸ್ಥೆ, ಹುಲ್ಲಿನ ವ್ಯವಸ್ಥೆ ಎಲ್ಲ ಇದೆ. ಅಲ್ಲಿ ಒಂದು ವಿದ್ಯುತ್ ಚಾಲಿತ ಯಂತ್ರ ಕೂಡ ಇದೆ. ಅಲ್ಲಿ ಬೇಕಾದ ವ್ಯವಸ್ಥೆಯನ್ನೆಲ್ಲ ಮಾಡಿ ಒಂದು ಬಸ್ ಸ್ಟಾಪನ್ನು ಕೂಡ ಮಾಡಿದ್ದಾರೆ. ಇಷ್ಟೆಲ್ಲ ವ್ಯವಸ್ಥೆ ನಮ್ಮ ಗೋಶಾಲೆಯಲ್ಲಿದೆ. ಗೊಲ್ಲರಳ್ಳಿಯಲ್ಲಿ ಸಾವಿರ ದನಗಳಿಗೆ ಸರ್ಕಾರ ವ್ಯವಸ್ಥೆ ಮಾಡಿದೆ. ಆದರೆ ಬಂಗಾರಪ್ಪನವರು ಹೋದಲ್ಲೆಲ್ಲ ಗೋಶಾಲೆ ಇಲ್ಲವೆಂದು ಹೇಳಿದರು. ಇದು ಜವಾಬ್ದಾರಿಯುತವಾದ ಮಾತಲ್ಲವೆಂದು ಹೇಳುತ್ತೇನೆ. ಇಷ್ಟು ಗೋಶಾಲೆಗಳನ್ನು ಮಾಡಿದರೂ ಸಮಾಧಾನವಾಗಿಲ್ಲ. ಇನ್ನೂ ಹೆಚ್ಚು ಗೋಶಾಲೆಗಳನ್ನು ತೆರೆಯಬೇಕು. ಬರಗಾಲ ಅಥವಾ ಅಭಾವ ಪರಿಸ್ಥಿತಿ ಎಂದರೆ ಬಹಳಷ್ಟು ಜನರು ಮತ್ತು ಅಧಿಕಾರಿಗಳು ಏನು ತಿಳಿದುಕೊಂಡಿದ್ದಾರೆಂದರೆ ರಸ್ತೆ ಕೆಲಸ ಮಾಡಿಸುವುದು ಎಂದು. ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕಳೆದ ೫೬ ವರ್ಷಗಳ ಇತಿಹಾಸದಲ್ಲಿ ಬಿಜಾಪುರ ಜಿಲ್ಲೆಗೆ ಈ ವರ್ಷ ತಲೆದೋರಿರುವ ಬರಗಾಲ ೩೩ನೇ ಬರಗಾಲ, ಅಲ್ಲಿ ಮುಂಗಾರು ಅಥವಾ ಹಿಂಗಾರು ಮಳೆ ಹೋದರೂ ಹೆದರುವುದಿಲ್ಲ. ಆದರೆ ಸತತವಾಗಿ ೪ ವರ್ಷಗಳಿಂದ ಬರಗಾಲ ಸಂಭವಿಸಿದೆ. ದುರ್ದೈವದಿಂದ ಈ ರೀತಿ ಆಗಿದೆ. ಇದರ ಬಗ್ಗೆ ಯಾರ ಮೇಲೂ ಆರೋಪ ಮಾಡುವ ಹಾಗಿಲ್ಲ. ಈಗ ನನ್ನದೊಂದು ಸಲಹೆ ಏನೆಂದರೆ, ಬಿಜಾಪುರ ಜಿಲ್ಲೆಯಲ್ಲಿ ೪ ನದಿಗಳು ಹರಿಯುತ್ತವೆ. ತುಂಗಭದ್ರ, ಘಟಪ್ರಭ, ಮಲಪ್ರಭ, ಭೀಮಾ– ಈ ನದಿಗಳಿಂದ ಬರ ಪ್ರದೇಶಕ್ಕೆ ನೀರನ್ನು ಸರಬರಾಜು ಮಾಡುವ ವ್ಯವಸ್ಥೆ ಮಾಡಬೇಕಾಗಿತ್ತು. ಇದರ ಬಗ್ಗೆ ಹಿಂದಿನ ಸರ್ಕಾರವನ್ನು ಹೆಚ್ಚಿಗೆ ದೂಷಣೆ ಮಾಡುವುದಿಲ್ಲ ಬರಗಾಲ ಬಂದಾಗ ರಸ್ತೆಗಳನ್ನು ಮಾತ್ರ ಮಾಡದೆ ಜನರಿಗೆ ಕೆಲಸ ಕೊಡಬೇಕು. ನೀರು ಒದಗಿಸಬೇಕು ಜೊತೆಗೆ ಶಾಶ್ವತ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಹೆಚ್ಚು ಗಮನ ಕೊಟ್ಟು ಜಿಲ್ಲೆ ಪೂರ್ತಿ ಸರ್ವೆ ಮಾಡಬೇಕು. ಜಿಲ್ಲೆಯಲ್ಲಿ ಏತ ನೀರಾವರಿ ಏನಿದೆ ಅದರ ಶಕ್ತಿಯನ್ನು ವಿಸ್ತರಿಸಬೇಕು. ಇದಕ್ಕೆ ನಿದರ್ಶನವಾಗಿ ಹೇಳುವುದಾದರೆ, ನಮ್ಮ ಬಿಳಗಿ ಕ್ಷೇತ್ರದ ಜಮಖಂಡಿ ತಾಲ್ಲೂಕಿನಲ್ಲಿ ೩೩ ಹಳ್ಳಿಗಳಿಗೆ, ಬಿಳಗಿ ತಾಲ್ಲೂಕಿನಲ್ಲಿ ೮ ನೀರಾವರಿ ಯೋಜನೆಗಳಿವೆ. ಇಲ್ಲಿ ನನ್ನ ಪ್ರಾರ್ಥನೆ ಇಷ್ಟೆ. ಇರತಕ್ಕ ಏತ ನೀರಾವರಿ ಯೋಜನೆಗಳನ್ನು ವಿಸ್ತರಿಸಬೇಕು. ಹೊಸ ಏತ ನೀರಾವರಿ ಯೋಜನೆಗಳನ್ನು ಮಾಡಬೇಕು. ಸಂಪರ್ಕ ಬಾವಿಗಳನ್ನು ತೋಡಬೇಕು, ಕೆರೆಗಳ ಹೂಳು ತೆಗೆಸಬೇಕು, ದನಗಳಿಗೆ ಮೇವು ದೊರೆಯುವ ವ್ಯವಸ್ಥೆ ಆಗಬೇಕು. ರೈತರು ನದಿಗೆ ಅಡ್ಡಲಾಗಿ ಕಟ್ಟಿದರೆ ಎಕರೆಗೆ ೫೦೦ ರೂಪಾಯಿ ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ನಿಮ್ಮ ಕ್ಷೇತ್ರಕ್ಕೆ ೧೫ ಲಕ್ಷ ರೂಪಾಯಿ ಕೊಡುತ್ತೇವೆಂದು ಮುಖ್ಯ ಮಂತ್ರಿಗಳು ಜಮಖಂಡಿಗೆ ಬಂದಾಗ ಅದಕ್ಕೆ ಚಾಲೆಂಜ್ ಆಗಿ ಹೇಳಿದ್ದಾರೆ. ಯಾರು ಸರ್ಕಾರದಿಂದ ಸಹಾಯವನ್ನು ಅಪೇಕ್ಷೆ ಮಾಡುತ್ತಾರೋ ಅಂಥ ರೈತರು ಶಾಶ್ವತ ಯೋಜನೆಯನ್ನು ಶುರು ಮಾಡಿದರೆ ೧೫ ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ರೈತರು ೧೫ ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದಾರೆ. ರೈತರು ಸ್ವಯಂಸ್ಫೂರ್ತಿಯಿಂದ ಮುಂದೆ ಬಂದಾಗ ಯಾವ ಸರ್ಕಾರವೂ ಅದನ್ನು ನಿರಾಕರಿಸಬಾರದು, ನಿರಾಕರಿಸಲಾರರು. ನಮ್ಮ ಜಿಲ್ಲೆಯಲ್ಲಿ ಹೆಚ್ಚು ಹೆಚ್ಚು ಏತ ನೀರಾವರಿ ಯೋಜನೆಗಳನ್ನು ಆರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಪ್ರಯೋಗಾರ್ಥವಾಗಿ ಏತ ನೀರಾವರಿ ಯೋಜನೆಗಳನ್ನು ಮಾಡಿ ಇದೇ ಯೋಜನೆಯನ್ನು ಉಳಿದ ಜಿಲ್ಲೆಗಳಿಗೂ ವಿಸ್ತರಿಸಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದೇ ಕಾಲದಲ್ಲಿ ಇನ್ನೊಂದು ಕೆಲಸ ಆಗಬೇಕೆಂದು ಹೇಳುತ್ತೇನೆ. ಜನತಾ ಸರ್ಕಾರದ ಕಾಲದಲ್ಲಿ ಅದರಲ್ಲೂ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿರುವ ಕಾಲದಲ್ಲಾದರೆ ಜನ ನೆನೆಸಿಕೊಳ್ಳುತ್ತಾರೆ. ನನ್ನ ಕ್ಷೇತ್ರದಲ್ಲಿ ಬರಗಾಲ ಕಾಮಗಾರಿ ಅಂಗವಾಗಿ ಅಡಿಹಾಳ ಏತ ನೀರಾವರಿ ಯೋಜನೆ ಮಂಜೂರಾಗುವ ಮಟ್ಟದಲ್ಲಿದೆ. ಈ ಏತ ನೀರಾವರಿ ಯೋಜನೆಯನ್ನು ತೆಗೆದುಕೊಂಡು ಜೊತೆಗೆ ಲಿಂಗಪುರ ಏತ ನೀರಾವರಿ ಯೋಜನೆ, ಹಿಡ್ಕಲ್ ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯ ಜಮಖಂಡಿ ಬೀಳಗಿ, ಬಾಗಲಕೋಟೆ ತಾಲ್ಲೂಕುಗಳು ಕೃಷ್ಣಾ ನದಿ ಮೇಲೆ ಅವಲಂಬಿತವಾಗಿದೆ. ಕೃಷ್ಣಾ ನದಿಯಲ್ಲಿ ಈಗ ನೀರು ಬತ್ತುತ್ತಿದೆ. ಆದ್ದರಿಂದ ಮುಂಬರುವ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಕೊಯ್ನಾ ನದಿಯಿಂದ ಕೃಷ್ಣ ನದಿಗೆ ನೀರು ಬಿಡಿಸುವ ವ್ಯವಸ್ಥೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ: ಬರಗಾಲದ ಸಂಪೂರ್ಣ ಜವಾಬ್ದಾರಿ ಹೊತ್ತಿರತಕ್ಕ ಕಂದಾಯ ಮಂತ್ರಿಗಳು ಮಹಾರಾಷ್ಟ್ರ ಸರ್ಕಾರದ ಜೊತೆ ಮಾತನಾಡಿ ಕೊಯ್ನಾ ನದಿಯಿಂದ ಕೃಷ್ಣಾಗೆ ನೀರು ಬಿಡಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದರೂ ಅದು ಸಮಾಧಾನಕರವಾಗಿಲ್ಲ. ಸರ್ಕಾರದ ಅಧಿಕಾರಿಗಳು ತಪ್ಪು ವರದಿಯನ್ನು ಕೊಡುತ್ತಿರುತ್ತಾರೆ. ಮಂತ್ರಿಗಳಿಗೆ ಮತ್ತು ಸದನಕ್ಕೆ ಅವರು ತಪ್ಪು ವರದಿಯನ್ನು ಕೊಡುತ್ತಿರುತ್ತಾರೆ. ಮುಂದಿನ ಮಳೆಗಾಲದವರೆಗೆ ಅಭಾವ ಪರಿಹಾರ ಕಾಮಗಾರಿ ಮುಂದುವರಿಸುತ್ತೇವೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆ ರೀತಿ ಹೇಳುವುದು ತಪ್ಪು. ಮುಂದಿನ ಮುಂಗಾರಿನವರೆಗೆ ರೈತರ ಪರಿಸ್ಥಿತಿ ಸುಧಾರಿಸುವವರೆಗೆ ಬರಗಾಲ ಕಾಮಗಾರಿಯನ್ನು ಮುಂದುವರೆಸುತ್ತೇವೆ ಎಂದು ಹೇಳಬೇಕು. ನಮ್ಮಂತೆಯೇ ರಾಜಾಸ್ಥಾನದಲ್ಲೂ ಅಭಾವವಿದೆ. ಅಲ್ಲೂ ಕೂಡ ಕೇಂದ್ರ ಸರ್ಕಾರ ಸಹಾಯ ಮಾಡಿದೆ ಮಾನ್ಯ ಅಬ್ದುಲ್ ನಜೀರ್ ಸಾಬ್ ಅವರು ದೂರಾಲೋಚನೆಯಿಂದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ಒಟ್ಟಾರೆ ಕರ್ನಾಟಕ ರಾಜ್ಯ ಸರ್ಕಾರ ಅಭಾವವನ್ನು ನೀಗಿಸುವ ಸಲುವಾಗಿ ಕೇವಲ ತಾತ್ಕಾಲಿಕವಾದ ಕಾರ್ಯಕ್ರಮಗಳನ್ನು ಮಾಡದೆ ವಿಶೇಷವಾಗಿ ಬಿಜಾಪುರ ಜಿಲ್ಲೆಯನ್ನು ಬರಗಾಲದ ದವಡೆಯಿಂದ ವಿಮೋಚನೆ ಮಾಡುವ ಸಲುವಾಗಿ ನಾಲ್ಕು ನದಿಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ಮಾಡಿ ಬರಗಾಲದ ದವಡೆಯಿಂದ ವಿಮುಕ್ತಿಗೊಳಿಸುತ್ತೀರೆಂಬ ಭರವಸೆಯಿಂದ ಕಂದಾಯ ಮಂತ್ರಿಗಳನ್ನು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಜಿ. ನಂಜಯ್ಯನಮಠ್. (ಗುಳೇದಗುಡ್ಡ).— ಮಾನ್ಯ ಅಧ್ಯಕ್ಷರೆ, ಬರಗಾಲದ ವಿಷಯವಾಗಿ ಹಲವಾರು ಸದಸ್ಯರು ಮಾತನಾಡುವುದರ ಜೊತೆಗೆ ಸಲಹೆ ಸೂಚನೆಗಳನ್ನು ಮತ್ತು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ನಾನು ಮಾತನಾಡುವಾಗ ಪ್ರತಿಪಕ್ಷದ ಸರ್ಕಾರ ಇದೆ ಎಂಬ ದೃಷ್ಟಿಯಿಂದಾಗಲೀ, ಕೇವಲ ಟೀಕೆ ಮಾಡಬೇಕೆಂಬ ದೃಷ್ಟಿಯಿಂದಾಗಲೀ ಮಾತನಾಡುವುದಿಲ್ಲ. ಇದ್ದ ಪರಿಸ್ಥಿತಿಯನ್ನು ಸದನಕ್ಕೆ ತಿಳಿಸುವುದರ ಜೊತೆಗೆ ಯಾವ ಕ್ರಮವನ್ನು ತೆಗೆದುಕೊಂಡರೆ ಒಳಿತಾಗುತ್ತದೆ ಎಂಬ ಯೋಚನೆಯನ್ನು ಅವರ ಮುಂದಿಡುತ್ತೇನೆ. ಪ್ರಕೃತಿ ವಿಕೋಪಗೊಂಡಾಗ ಯಾವ ಸರ್ಕಾರವೇ ಇರಲಿ ಎದುರಿಸಲೇಬೇಕು. ಅವರು ಮುಖ್ಯಮಂತ್ರಿಯಾಗಿದ್ದಾರೆ ಆದ್ದರಿಂದ ಪ್ರಕೃತಿ ವಿಕೋಪ ಉಂಟಾಗಿದೆ ಎಂಬತಕ್ಕಂಥ ಅವಹೇಳನಕಾರಿಯಾದ ಮಾತನ್ನು ನಾನು ಹೇಳುವುದಿಲ್ಲ. ಆದರೆ ಪ್ರಕೃತಿ ವಿಕೋಪಗೊಂಡಾಗ ದೇವರ ಮೇಲೆ ಭಾರ ಹಾಕಿ ಕೂತರೆ ಜವಾಬ್ದಾರಿಯಿಂದ ನುಣುಚಿಕೊಂಡು ಕೂತಿದ್ದಾರೆ ಎಂದು ಹೇಳಬೇಕಾಗುತ್ತದೆ. ದೇವರ ಮೇಲೆ ಭಾರ ಹಾಕಿ ನುಣುಚಿಕೊಳ್ಳುವ ಪ್ರಯತ್ನ ಮಾಡಿ ಜವಾಬ್ದಾರಿಯನ್ನು ಮರೆಯುವುದಕ್ಕಿಂತ ಪರಿಶ್ರಮ ಹಾಗೂ ನಿರಂತರ ಪ್ರಯತ್ನದಿಂದ ಎದುರಿಸಿದರೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಭೀಕರ ಬರಗಾಲ ರಾಜ್ಯದಲ್ಲಿದ್ದರೂ

ಕೂಡ ನಾನು ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲವಾರು ಮಾತುಗಳನ್ನು ಹೇಳಬಯಸುತ್ತೇನೆ. ಈ ಹಿಂದೆ ಸದನದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರಿಪೋರ್ಟ್ ಕೊಟ್ಟಾಗ ಹಲವು ತಾಲ್ಲೂಕುಗಳ ಕೃಷಿ ಅವಲಂಬಿತ ಕಾರ್ಮಿಕರ ಸಂಖ್ಯೆಯನ್ನು ಕೊಟ್ಟಿದ್ದರು. ಎರಡೂವರೆ ಲಕ್ಷ ಕೃಷಿ ಕಾರ್ಮಿಕರು ಬರಗಾಲ ಪರಿಸ್ಥಿತಿಗೆ ಬಲಿಯಾಗಿದ್ದಾರೆ ಎಂಬುದು ಸ್ಪಷ್ಟ. ಇವತ್ತಿನ ಮಟ್ಟಿಗೆ ಕೂಲಿಕಾರರಿಗೆ ಮಾಡಿರುವ ವ್ಯವಸ್ಥೆ ಸಮರ್ಪಕವಾಗಿಲ್ಲ ಎಂಬುದು ನನ್ನ ಹೇಳಿಕೆ. ಒಂದು ತಾಲ್ಲೂಕಿನಲ್ಲಿ ಎರಡು ಮೂರು ಸಾವಿರದ ವರೆಗೆ ಕೃಷಿ ಕಾರ್ಮಿಕರಿಗೆ ಕೆಲಸ ಒದಗಿಸಿದರೆ ಸಾಕಾಗುವುದಿಲ್ಲ. ಒಂದು ತಾಲ್ಲೂಕಿನಲ್ಲೇ ೨೦-೨೫ ಸಾವಿರ ಜನ ಕೃಷಿ ಕಾರ್ಮಿಕರು ಇದ್ದು ಅವರಿಗೆ ಉದ್ಯೋಗದ ವ್ಯವಸ್ಥೆ ಮಾಡಿದರೆ ಸಮರ್ಪಕವಾಗಿ ಪರಿಸ್ಥಿತಿಯನ್ನು ಎದುರಿಸಿದ್ದಾರೆ ಎಂದು ಹೇಳಬಹುದು. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹುನಗುಂದದಲ್ಲಿ ೪೨, ಬಾದಾಮಿಯಲ್ಲಿ ೩೯ ಮತ್ತು ಬಾಗಲಕೋಟೆಯಲ್ಲಿ ೯ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿದ್ದು ಸಮರ್ಪಕವಾದ ವ್ಯವಸ್ಥೆ ಮಾಡಿಲ್ಲ. ಸಾಕಷ್ಟು ಜನರಿಗೆ ಉದ್ಯೋಗ ಒದಗಿಸಿಲ್ಲ. ಉದ್ಯೋಗಾವಕಾಶವನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಂಡರೆ ಹಣದ ಅಭಾವವನ್ನು ತೋರಿಸುತ್ತಾರೆ. ಈ ದೃಷ್ಟಿಯಿಂದ ನೋಡಿದಾಗ ಎಷ್ಟು ಅಗತ್ಯವಾದ ಕ್ರಮವನ್ನು ಕೈಗೊಳ್ಳಬೇಕಾಗಿತ್ತೋ ಅದನ್ನು ಕೈಗೊಂಡಿಲ್ಲ ಎಂದು ಹೇಳಿ ಇನ್ನು ಮುಂದಾದರೂ ಮಾಡಿ ಎಂದು ಹೇಳುತ್ತೇನೆ. ಈ ಸರ್ಕಾರ ಏನೂ ಮಾಡಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಮಾಡಬೇಕಾದಷ್ಟು ಇನ್ನೂ ಮಾಡಿಲ್ಲ ಎಂದು ಹೇಳುತ್ತೇನೆ. ಈ ಕೆಲಸವನ್ನು ಇನ್ನೂ ಹೆಚ್ಚು ಮಾಡಲಿ ಎಂಬ ದೃಷ್ಟಿಯಿಂದ ಅವರ ಗಮನಕ್ಕೆ ತರುತ್ತೇನೆ. ಟೀಕೆ ಮಾಡಬೇಕೆಂಬ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿಲ್ಲ. ನನ್ನ ಜಿಲ್ಲೆ ಮಟ್ಟಿಗೆ ಹೇಳುವುದಾದರೆ ಬಿಜಾಪುರ ಐತಿಹಾಸಿಕವಾಗಿ ಎಷ್ಟು ಪ್ರಸಿದ್ಧಿಯಾಗಿದೆಯೋ ಅದರ ಹಿಂದೆಯೇ ಬರಗಾಲಕ್ಕೂ ಪ್ರಸಿದ್ಧಿಯಾಗಿದೆ. ಮೂರು ನಾಲ್ಕು ವರ್ಷಗಳಿಂದ ನಾವು ಭೀಕರ ಬರಗಾಲವನ್ನು ಎದುರಿಸುತ್ತಿದ್ದೇವೆ. ಮುಂಗಾರು ಹಿಂಗಾರು ಇಲ್ಲದೆ ರೈತರು ಕಷ್ಟ ಪರಿಸ್ಥಿತಿಯಲ್ಲಿ ಇದ್ದಾರೆ. ಹಿಂದಿನವರು ಶಾಶ್ವತವಾದ ಯೋಜನೆಗಳನ್ನು ಎಷ್ಟು ತೆಗೆದುಕೊಳ್ಳಬೇಕಾಗಿತ್ತೋ ಅಷ್ಟು ತೆಗೆದುಕೊಳ್ಳದೇ ಇರುವುದರಿಂದ ಈ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ ಎಂಬ ಮಾತನ್ನು ಯುವ ಶಾಸಕನಾಗಿ ಹೇಳುತ್ತಿದ್ದೇನೆ. ಮುಂದೆ ಕೂಡ ನನ್ನಂಥ ಶಾಸಕ ಈ ರೀತಿಯ ಆಪಾದನೆ ಮಾಡಬಾರದು ಎಂಬ ದೃಷ್ಟಿಯಿಂದ ಇವತ್ತಾದರೂ ಶಾಶ್ವತ ಬರಗಾಲ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ತಿಳಿಸಬಯಸುತ್ತೇನೆ.

ಏಕೆಂದರೆ, ನಾಲ್ಕು ನದಿ ಹರಿದರೂ ಕೂಡಾ "ನೇಕಾರನ ಹೆಂಡತಿ ಬೆತ್ತಲೆ'' ಎನ್ನುವ ಹಾಗೆ ಅಲ್ಲಿ ಬರಗಾಲ ಇದೆ. ಹಿಂದಿನವರಾಗಲೀ ಈಗಿನವರಾಗಲೀ ೧೦-೧೨ ಕಿಲೋಮೀಟರ್‌ಗೆ ಬ್ಯಾರೇಜ್ ಮಾಡಿದ್ದರೂ ಕೂಡಾ ಇದು ಬರುತ್ತಾ ಇರಲಿಲ್ಲ. ಇವತ್ತು ಮಳೆಗಾಲ ಇಲ್ಲ ಹಾಗೂ ನೀರೂ ಇಲ್ಲ. ಆ ಒಂದು ಯೋಜನೆಯನ್ನು ಕೈಗೊಂಡಿದ್ದರೆ ಈ ವರ್ಷ ಬರಗಾಲವನ್ನು ಎದುರಿಸುವುದಕ್ಕೆ ಸಾಧ್ಯವಾಗುತ್ತಾ ಇತ್ತು. ಹಾಗೂ ಸಮಾಧಾನದಿಂದ ಬಾಳುವುದಕ್ಕೆ ಆಗುತ್ತಾ ಇತ್ತು. ಇನ್ನು ಮುಂದಾದರೂ ಏನು ಸಣ್ಣ ನೀರಾವರಿ ಯೋಜನೆಗಳ ಪ್ಲಾನ್ ಎಸ್ಟಿಮೇಟ್‌ಗಳು ಧೂಳು ತಿನ್ನುತ್ತಿವೆ ಅವನ್ನು ಹೊರಗೆ ತೆಗೆದು ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಮೊಕಲ್ಲೂರು ಏತ ನೀರಾವರಿ ಯೋಜನೆ ೧೯೭೭-೭೮ರಲ್ಲಿ ಬಡ್ಜೆಟ್‌ನಲ್ಲಿ ಬಂದಿದ್ದು ಇದರಿಂದ ೧೮ ನೂರು ಎಕರೆ ನೀರಾವರಿಯಾಗುತ್ತಿತ್ತು. ಇವತ್ತು ರಾಮದಾಳ್ ಹತ್ತಿರ ಬರುವ ಯೋಜನೆ ಮಲಪ್ರಭಾ ನದಿಗೆ ಸಂಬಂಧಪಟ್ಟಿದ್ದು. ಇದು ಕಾರ್ಯಗತವಾಗಿದ್ದರೆ ೧೯೮೦ರಲ್ಲೇ ಮುಗಿಯುತ್ತಿತ್ತು. ಇನ್ನೊಂದು ಸುಗ್ಗೇಪಾಡ ನೀರಾವರಿ ಯೋಜನೆ. ಇದರಿಂದ ೬೦೦ ಎಕರೆ ನೀರಾವರಿಯಾಗುತ್ತಿದ್ದು ಇದಕ್ಕೆ ಮಂಜೂರಾತಿ ಸಿಕ್ಕಿ ಪೂಜೆ ಕೂಡಾ ಮಾಡಲಾಗಿತ್ತು. ಆದರೆ ರಾಜಕೀಯ ಕಾರಣದಿಂದಾಗಿ ಮಾಡಿದ ಪೂಜೆ ಇನ್ನೂ ಹಾಗೇ ಇದೆ. ಅಲ್ಲಿ ಕೆಲಸ ಪ್ರಾರಂಭವಾಗಿಲ್ಲ. ಇಂತಹ ಹಲವಾರು ಯೋಜನೆಗಳನ್ನು ಹಾಗೂ ಇನ್ನು ಯಾವ ಯಾವ ನೀರಾವರಿ ಕೆಲಸಕಾರ್ಯಗಳನ್ನು ಹಾಗೇ ಮೂಲೆಗೆ ಸೇರಿಸಿದ್ದಾರೆ ಅವುಗಳ ವರದಿಯನ್ನು ತರಿಸಿಕೊಂಡು ಆ ಕೆಲಸಗಳನ್ನು ಕೈಗೊಂಡರೆ ಮಾತ್ರ ಶಾಶ್ವತವಾಗಿ ಬರಗಾಲವನ್ನು ಪರಿಹರಿಸುವುದಕ್ಕೆ ಸಾಧ್ಯವಾಗುತ್ತದೆಯೇ ವಿನಃ ಬೇರೆ ಯಾವುದೇ ಯೋಜನೆಗಳಿಂದ ಸಾಧ್ಯವಾಗುವುದಿಲ್ಲ. ಏಕೆಂದರೆ, ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಂಡಾಗ ಹೇರಳ ಹಣ ಮತ್ತು ಸಮಯ ಬೇಕಾಗುತ್ತದೆ. ಮಧ್ಯದಲ್ಲಿ ಈ ಯೋಜನೆಗಳಿಗೆ ಹಣ ಕಡಿಮೆಯಾದಾಗ ಯೋಜನೆಯ ಸಮಯ ಹೆಚ್ಚು ಆಗುತ್ತಾ ಆಗಲವಾಗುತ್ತಾ, ೧೦೦ ಕೋಟಿ ರೂಪಾಯಿಗಳ ಯೋಜನೆಗಳು ೧೦೦೦ ಕೋಟಿ ರೂಪಾಯಿಗಳಾಗಿ ಎಷ್ಟೋ ವರ್ಷಗಳ ಕಾಲ ತಡವಾಗುತ್ತವೆ. ಸಣ್ಣ ಸಣ್ಣ ಯೋಜನೆಗಳಿಗೆ ಸಣ್ಣ ಪ್ರಮಾಣದ ಹಣಕಾಸು

ಬೇಕಾಗಿದ್ದು ನೇರವಾಗಿ ರೈತರಿಗೆ ಇವುಗಳ ಸಹಾಯ ಸ್ವಲ್ಪ ಸಮಯದಲ್ಲಿ ಸಿಗುವುದರಿಂದ ಇವುಗಳನ್ನು ಕೈಗೊಂಡಂತೆ ಅನುಕೂಲವಾಗುತ್ತದೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಕಳೆದ ವಿಧಾನಸಭೆಯ ಅಧಿವೇಶನದಲ್ಲಿಯೇ ಮುಂದೆ ಭೀಕರವಾದ ಪರಿಸ್ಥಿತಿ ಬರುತ್ತದೆ, ಮೇವಿನ ವ್ಯವಸ್ಥೆ ಮಾಡಿಕೊಳ್ಳಿ ಎಂದು ತಿಳಿಸಿದ್ದೆವು. ಆದರೂ ಕೂಡಾ ಎಷ್ಟು ಪ್ರಮಾಣದಲಿ ಮೇವಿನ ಸಂಗ್ರಹಣೆ ಮಾಡಬೇಕೋ, ಮುಂದಿನ ಭೀಕರತೆಯನ್ನು ಅರಿತುಕೊಳ್ಳಬೇಕೋ ಅದು ಸಾಧ್ಯವಾಗಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಬೇರೆ ಕಡೆಯ ಗೋ ಶಾಲೆಗಳ ವಿಷಯ ನನಗೆ ತಿಳಿದಿಲ್ಲ. ಆದರೆ ನನ್ನ ಕ್ಷೇತ್ರದಲ್ಲಿ ಗೋಶಾಲೆಗಳು ಚೆನ್ನಾಗಿ ಇವೆ ಎಂದು ಹೇಳುತ್ತೇನೆ. ಕೆಲವು ಗೋಶಾಲೆಗಳಲ್ಲಿ ದನಗಳು ಸತ್ತವು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಕೆಲವಾರು ಜಿಲ್ಲೆಗಳ ಗೋಶಾಲೆಗಳಲ್ಲಿ ಮೇವೇ ಇಲ್ಲವೆಂದು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಎರಡು ಕಡೆ ಗೋಶಾಲೆಗಳು ಇದ್ದು ರಾಮತಾಳದ ಶಿವಯೋಗಿ ಮಂದಿರದಲ್ಲಿ ನಡೆಯುತ್ತಿರುವ ಗೋಶಾಲೆಯಲ್ಲಿ ಕೆಲಸ ಸಮರ್ಪಕವಾಗಿ ನಡೆಯುತ್ತಾ ಇದೆ ಎಂದು ನಾನು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳುತ್ತಿದ್ದೇನೆ. ಪ್ರತಿಬಾರ ಗೋಶಾಲೆಗಳಿಗೆ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ನೋಡಿರುವುದರಿಂದ ಹಾಗೂ ಅಲ್ಲಿ ಸಾಕಷ್ಟು ಮೇವು ಇರುವುದರಿಂದ, ರೆವಿನ್ಯೂ ಅಧಿಕಾರಿಗಳು ನೀರಿನ ಮತ್ತು ಮೇವಿನ ವ್ಯವಸ್ಥೆ ಮಾಡಿರುವುದರಿಂದ, ಹಾಗೂ ಗೋವುಗಳಿಗೆ ಏನಾದರೂ ಕಾಯಿಲೆ ಬಂದಾಗ ಪಶುಸಂಗೋಪನಾ ಇಲಾಖೆಯ ತಜ್ಞರು, ಡಾಕ್ಟರುಗಳು ಬಂದು ಆ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಿರುವುದರಿಂದ ನನ್ನ ಕ್ಷೇತ್ರದಲ್ಲಿನ ಎರಡೂ ಗೋಶಾಲೆಗಳು ಸಮರ್ಪಕವಾಗಿ ಕೆಲಸ ಮಾಡುತ್ತಾ ಇವೆ ಎಂದು ಈ ಸಮಯದಲ್ಲಿ ಹೇಳದೇ ಹೋದರೆ ಸತ್ಯವನ್ನು ಮರೆಮಾಚಿದಂತಾದೀತು ಎಂದು ಹೇಳುತ್ತಿದ್ದೇನೆ. ಇನ್ನು ನೀರಾವರಿ ವ್ಯವಸ್ಥೆ ಬಗ್ಗೆ ಹೇಳುವುದಾದರೆ ಒಂದೊಂದು ಕಡೆ ಒಂದೊಂದು ರೀತಿ ಕೆಲಸ ಮಾಡುವುದಾದರೆ ಬರಗಾಲ ಮುಂದೆ ಸಾಗುತ್ತಾ ಹೋಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಕಾವೇರಿ ನೀರಿನ ಯೋಜನೆಗೆ ಒಂದು ಸಾವಿರ ಕೋಟಿ ರೂಪಾಯಿಗಳು ಬೇಕಾದರೆ, ಕೃಷ್ಣ ನದಿ ಯೋಜನೆಗೆ ೫ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಪ್ರತಿ ವರ್ಷ ಜಾಗತಿಕ ಬ್ಯಾಂಕ್‌ನಿಂದ, ಕೇಂದ್ರ ಸರ್ಕಾರದ ನೆರವಿನಿಂದ ಹಣ ಪಡೆದು ಅತಿ ಕಡಿಮೆ ಸಮಯದಲ್ಲಿ ಕಾವೇರಿ ನದಿ ಯೋಜನೆಗೆ ಸಂಬಂಧಪಟ್ಟಹಾಗೆ ೧ ರೂಪಾಯಿ ಕೊಟ್ಟರೆ ಹಾಗೂ ಕೃಷ್ಣ ನದಿ ಯೋಜನೆಗೆ ಸಂಬಂಧಪಟ್ಟಹಾಗೆ ೫ ರೂಪಾಯಿ ಕೊಟ್ಟರೆ ಮಾತ್ರ ಸರ್ಕಾರ ಎಲ್ಲರನ್ನೂ ಸಮಾನವಾಗಿ ನೋಡಿದಂತಾಗುತ್ತದೆ. ಆದರೆ ೧ ಸಾವಿರ ಕೋಟಿ ಯೋಜನೆಗೆ ೧೦ ರೂಪಾಯಿ ಕೊಟ್ಟು ೫ ಸಾವಿರ ಕೋಟಿ ಯೋಜನೆಗೆ ೧ ರೂಪಾಯಿ ಕೊಟ್ಟರೆ ಅದು ಮಲತಾಯಿ ಧೋರಣೆಯಾದೀತು ಎಂದು ಹೇಳುತ್ತೇನೆ. ಇಂತಹ ಒಂದು ವ್ಯವಸ್ಥೆಯನ್ನು ಮಾಡಬೇಡಿ, ಎಲ್ಲ ಜನತೆಯನ್ನು ಒಂದೇ ದೃಷ್ಟಿಯಿಂದ ನೋಡಿ ಎಂದು ಹೇಳುತ್ತೇನೆ. ಮುಂಬರುವ ದಿವಸಗಳಲ್ಲಿ ಪ್ರಕೃತಿ ಯಾವ ಸಮಯದಲ್ಲಿ ಕೈಕೊಡುತ್ತದೋ ಗೊತ್ತಿಲ್ಲ. ಆ ದೃಷ್ಟಿಯಿಂದ ಬರಗಾಲವನ್ನು ಸಮರ್ಪಕ ರೀತಿಯಿಂದ ಶಾಶ್ವತವಾಗಿ ಓಡಿಸಬೇಕಾಗಿದೆ. ಕೃಷ್ಣ ನದಿ ಯೋಜನೆ ಪ್ರದೇಶದಲ್ಲಿ ಮೇಲಿಂದ ಮೇಲೆ ಬರಗಾಲ ಬರುತ್ತಿರುವುದರಿಂದ ೫ ಸಾವಿರ ಕೋಟಿ ರೂಪಾಯಿ ಯೋಜನೆಗೆ ಹೆಚ್ಚಿನ ಹಣವನ್ನು ಕೊಟ್ಟು ಕಡಿಮೆ ಹಣಕಾಸು ಬೇಕಾಗಿರುವ ಹಾಗೂ ಹೆಚ್ಚು ಬರಗಾಲಕ್ಕೆ ತುತ್ತಾಗದ ಪ್ರದೇಶಗಳ ಯೋಜನೆಗಳಿಗೆ ಕಡಿಮೆ ಹಣವನ್ನು ಕೊಟ್ಟರೆ ಈ ಹೆಚ್ಚು ಹೆಚ್ಚು ಬರಗಾಲಕ್ಕೆ ತುತ್ತಾಗುತ್ತಿರತಕ್ಕ ಪ್ರದೇಶಗಳ ಯೋಜನೆಗಳು ಪೂರ್ತಿಯಾಗಬಹುದು ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದೇನೆ. ಈಗ ಏನು ರಸ್ತೆ ಕೆಲಸ ಹಾಗೂ ಇನ್ನಿತರ ಕೆಲಸ ತೆಗೆದುಕೊಂಡಿದ್ದೀರಿ ಅದು ಅಶಾಶ್ವತ. ಇನ್ನು ಮುಂದಾದರೂ ಯುದ್ಧೋಪಾದಿಯಲ್ಲಿ ಈ ಕೆಲಸವನ್ನು ಮಾಡಬೇಕು. ಇವತ್ತು ಏನು ಇಷ್ಟೊಂದು ಹಣ ಖರ್ಚಾಗುತ್ತಿದೆ ಇದರಿಂದ ಶಾಶ್ವತ ಕಾರ್ಯಕ್ರಮಗಳಿಗೆ ಅಡ್ಡಿ ಆಗಬಹುದು. ಇವತ್ತು ಜನಪ್ರಿಯ ಯೋಜನೆಗಳನ್ನು ಮಾತ್ರ ತಂದು ಮೆಚ್ಚು ಮಾಡವುದು ಬೇಡ. ಇವತ್ತು ಜನರು ಕೊಳ್ಳುವಂತೆ ಮಾಡಬೇಕೇ ಹೊರತು ಭಿಕ್ಷೆ ಕೇಳುವ ಸ್ಥಿತಿಗೆ ಅವರನ್ನು ತರಬಾರದು. ಸರ್ಕಾರಿ ಯೋಜನೆಗಳನ್ನು ಮನೆ ಬಾಗಿಲಿಗೆ ದೊರಕಿಸುವ ಅಡಂಬರದ ಯೋಜನೆಗಳಿಗೆ ಖರ್ಚು ಮಾಡದೇ ನಿರಂತರವಾಗಿ ಜನರನ್ನು ಸ್ವಾವಲಂಬಿಯಾಗುವುದಕ್ಕೆ ಹಚ್ಚುವ ಯೋಜನೆಗಳಿಗೆ ಖರ್ಚು ಮಾಡಿ ಅವರನ್ನು ಉದ್ಧಾರ ಮಾಡಬೇಕು. ಕೇವಲ ತಾಳಿ ಕೊಡುವ ಯೋಜನೆ ಬಗ್ಗೆ ಗಮನ ಕೊಡದೆ ಅವರು ದುಡಿಮೆಯಿಂದ ಜೀವನ ನಡೆಸುವಹಾಗೆ ಮಾಡಬೇಕು. ಇವತ್ತು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಇವತ್ತು ಅನೇಕ ಹಳ್ಳಿಗಳಲ್ಲಿ ಬೋರ್‌ವೆಲ್‌ಗಳು ರಿಪೇರಿಯಾಗಬೇಕಾಗಿವೆ ಇವುಗಳ ರಿಪೇರಿಗೆ ಏನು

ಯೋಚನೆ ಮಾಡಲಾಗಿದೆ ಎಂಬುದರ ಬಗ್ಗೆ ನೋಡಬೇಕು. ಇವತ್ತು ಒಂದೊಂದು ಡಿವಿಜನ್‌ನಲ್ಲಿ ಎರಡೆರಡು ರಿಪೇರಿ ಮಾಡುವ ವೆಹಿಕಲ್ಸ್ ಇದ್ದರೆ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ದಿವಸಕ್ಕೆ ೨೦ ರಿಂದ ೨೫ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಬಹುದು. ಆದ್ದರಿಂದ ಈ ದಿನ ಏನು ನಾಲ್ಕು ತಾಲ್ಲೂಕುಗಳ ಮಧ್ಯೆ ಒಂದೆರಡು ವೆಹಿಕಲ್ಸ್ ಇದ್ದರೆ ಎಷ್ಟು ರಿಪೇರಿ ಮಾಡಲು ಸಾಧ್ಯ ? ಇಂತಹ ಸಮಯದಲ್ಲಿ ಇನ್ನೂ ಹೆಚ್ಚಿನ ಸಿಬ್ಬಂಧಿಯನ್ನು ಒದಗಿಸುವುದರ ಜೊತೆಗೆ ಇವತ್ತು ತಾಲ್ಲೂಕಿನಲ್ಲಿ ಎರಡೆರಡು ರಿಪೇರಿ ಮಾಡುವ ವೆಹಿಕಲ್ಸ್ ವ್ಯವಸ್ಥೆಯಾಗಬೇಕು. ಇವತ್ತು ಭೂಮಿಯಲ್ಲಿ ಪ್ರತಿನಿತ್ಯ ನೀರು ಕೆಳಕ್ಕೆ ಹೋಗುತ್ತಿದೆ. ಹಿಂದೆ ೧೦ ಸಾರಿ ಪಂಪ್ ಮಾಡಿದರೆ ಬರುತ್ತಿದ್ದ ನೀರು ಇವತ್ತು ೫೦ ಸಾರಿ ಪಂಪ್ ಮಾಡಿದರೂ ಕೂಡಾ ಬರುತ್ತಾ ಇಲ್ಲ. ಇವತ್ತು ಭೂಮಿಯಲ್ಲಿ ನೀರು ಕೆಳಕ್ಕೆ ಹೋಗುತ್ತಾ ಇರುವ ಬಗ್ಗೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಹೆಚ್ಚು ಆಳಕ್ಕೆ ಬೋರ್‌ವೆಲ್‌ಗಳನ್ನು ಹಾಕಬೇಕಾಗಿರುವುದರಿಂದ ಹೆಚ್ಚು ಶಕ್ತಿಶಾಲಿಯು ಸೈಕ್ಲೋನ್ ರಿಗ್ಸ್‌ಗಳು ಬೇಕಾಗುತ್ತವೆ. ಇಂತಹ ರಿಗ್ಸ್‌ಗಳನ್ನು ಜಿಲ್ಲೆಗೆ ಒಂದೆರಡರಂತೆ ಇವತ್ತು ಕಳುಹಿಸಿಕೊಡಬೇಕು. ನಾವು ಜೂನ್ ೧೫ರವರೆಗೆ ಬರಗಾಲವನ್ನು ಎದುರಿಸಬೇಕು. ಇವತ್ತು ಭೂಮಿಯಲ್ಲಿ ನೀರು ಬತ್ತಿ ಕೆಳಕ್ಕೆ ಹೋಗಿರುವುದರಿಂದ ಸೈಕ್ಲೋನ್ ರಿಗ್ಸ್ ಬೇಕೇಬೇಕು. ಇನ್ನು ೬ ತಿಂಗಳ ಒಳಗೆ ಭೀಕರ ಪರಿಸ್ಥಿತಿಯನ್ನು ಎದುರಿಸಲು ನಾವು ಅವಶ್ಯಕತೆಗಳನ್ನು ಪೂರೈಸಲು ಹೆಚ್ಚಿನ ವೇಗದಲ್ಲಿ ಕೆಲಸ ಮಾಡದೇ ಇದ್ದರೆ ಈಗ ಏನು ದನಗಳಿಗೆ ಮೇವಿಲ್ಲದೆ ಸಾಯುವ ಪರಿಸ್ಥಿತಿ ಬಂದಿದೆ ಅಂತಹ ಪರಿಸ್ಥಿತಿ ಜನಗಳಿಗೂ ಬಂದೀತು ಎಂದು ಹೇಳುತ್ತೇನೆ. ಮಲಪ್ರಭಾ ನದಿಗೆ ಅವಲಂಬಿತವಾಗಿರುವ ಕುಡಿಯುವ ನೀರಿನ ಯೋಜನೆಯು ಬತಿ ಹೋಗಿರುವುದರಿಂದ ನೀರು ಬಂದ್ ಆಗಿದೆ. ಅಂತಹ ಕಡೆ ೨೦ ಬೋರ್‌ವೆಲ್‌ಗಳನ್ನು ಕಳುಹಿಸಿದ್ದರೂ ಕೂಡಾ ಇದುವರೆವಿಗೂ ಒಳಚರಂಡಿ ವ್ಯವಸ್ಥೆ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಿದ್ದಾರೆಯೇ ಹೊರತು, ಪ್ರಪೋಸಲ್ ಆಗುತ್ತಿದೆಯೇ ಹೊರತು ಇನ್ನೂ ಕೂಡಾ ಕಾರ್ಯಗತ ಆಗಿಲ್ಲ. ಆದ್ದರಿಂದ ನದಿ ನೀರಿನಿಂದ ಬರುತ್ತಿದ್ದ ಪ್ರದೇಶದಲ್ಲಿನ ಕುಡಿಯುವ ನೀರಿನ ವ್ಯವಸ್ಥೆ ನಿಂತಿರುವುದರಿಂದ ಆ ಪ್ರದೇಶಕ್ಕೆ ಆದಷ್ಟು ಬೇಗ ಸೈಕ್ಲೋನ್ ರಿಗ್ಸ್‌ಗಳನ್ನು ಕಳುಹಿಸಿ ಆ ನಗರದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂಬ ವಿಷಯವನ್ನು ಸರ್ಕಾರಕೆ ತರುತ್ತಿದ್ದೇನೆ. ಇನ್ನು ಕೂಲಿಯ ವ್ಯವಸ್ಥೆ ಬಗ್ಗೆ ಹೇಳುತ್ತೇನೆ. ಏನು ಈಗ ರೂ. ೭.೮೦ರಂತೆ ಕೂಲಿ ಕೊಡುತ್ತಿದ್ದಾರೆ ಅದು ಸಾಲುವುದಿಲ್ಲ. ಅದನ್ನು ಇನ್ನೂ ಹೆಚ್ಚು ಮಾಡಬೇಕೆಂದು ನಾನು ಹೇಳುತ್ತೇನೆ.

೩.೩೦ ಪಿ.ಎಂ.

ಈಗ ಏನು ೭ ರೂಪಾಯಿ ಕೂಲಿ ಕೊಡುತ್ತಿದ್ದೀರಿ ಅದನ್ನು ಕನಿಷ್ಟ ೧೦ ರೂಪಾಯಿ ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳುತ್ತೇವೆ. ಇವತ್ತು ಹಲವಾರು ಸಾರ್ವಜನಿಕ ಸಂಘಸಂಸ್ಥೆಗಳು, ಸ್ವತ : ಮುಂದೆ ಬಂದು ಗೋಶಾಲೆಗಳನ್ನು ತೆರೆದಿದ್ದಾರೆ, ಅದೇ ರೀತಿ ಹಲವಾರು ಸಂಘ ಸಂಸ್ಥೆಗಳು ಮುಂದೆ ಬಂದು ನೀರಾವರಿ ಯೋಜನೆಗಳಿಗೆ ಹಣವನ್ನು ಕೊಡಲು ಸಿದ್ಧವಾಗಿದ್ದಾರೆ. ಇದನ್ನು ನಾವು ನೋಡುತ್ತಿದ್ದೇವೆ. ನನ್ನ ಜಿಲ್ಲೆಯಲ್ಲಿ ಪಡಸಲಗಿ ಎಂಬ ಒಂದು ಪ್ರಾಜೆಕ್ಟ್ ಇದ್ದು ಅದನ್ನು ಆದಷ್ಟು ಬೇಗ ಮುಗಿಸಬೇಕೆಂದು ಸಾರ್ವಜನಿಕರು ಮುಂದೆ ಬಂದು ೧೫ ಲಕ್ಷ ರೂಪಾಯಿಗಳನ್ನು ನಾವು ಕೂಡಿಸಿ ಕೊಡುತ್ತೇವೆ. ಉಳಿದುದನ್ನು ಸರ್ಕಾರದವರು ಹಾಕಿಕೊಂಡು ಇದನ್ನು ಪೂರ್ತಿ ಮಾಡಬೇಕೆಂದು ಸರ್ಕಾರದ ಮೇಲೆ ಒತ್ತಾಯವನ್ನು ತರುತ್ತಿದ್ದಾರೆ. ಅಲ್ಲಿ ಜನರಿಗೆ ತಿನ್ನಲು ಅನ್ನವಿಲ್ಲ, ಕುಡಿಯಲು ನೀರಿಲ್ಲ. ಇಂಥ ಪರಿಸ್ಥಿಯಲ್ಲೂ ಕೂಡ ಅಲ್ಲಿಯ ಜನರು ತಾವು ೧೫ ಲಕ್ಷ ರೂಪಾಯಿಗಳನ್ನು ಕೂಡಿಸಿ ಕೊಡುತ್ತೇವೆಂದು ಮುಂದೆ ಬಂದಿರುವುದರಿಂದ ಅದರ ಜೊತೆಗೆ ಸರ್ಕಾರದವರೂ ಇನ್ನಷ್ಟು ಹಣವನ್ನು ಒದಗಿಸಿ ಈ ಪ್ರಾಜೆಕ್ಟನ್ನು ಮುಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಂದಿನ ಜೂನ್ ಅಥವಾ ಜುಲೈ ವರೆಗೂ ಮಳೆ ಬರುವ ಸೂಚನೆ ಇಲ್ಲದಿರುವುದರಿಂದ ನಾವು ನೀರಿನ ಕ್ಷಾಮವನ್ನು ಎದುರಿಸಬೇಕಾಗುತ್ತದೆ. ಈ ಮನೆಯ ಮಾನ್ಯ ಹಿರಿಯ ಸದಸ್ಯರೊಬ್ಬರು ಮಾತನಾಡುತ್ತಾ, ನಮ್ಮ ಸರ್ಕಾರ ಕೋಟಿಗಟ್ಟಲೆ ಹಣವನ್ನು ಈ ಬರಗಾಲ ಕಾಮಗಾರಿಗೋಸ್ಕರ ಬಿಡುಗಡೆ ಮಾಡಿದೆಯೆಂದು ಹೇಳಿದರು. ನಮ್ಮ ಕ್ಷೇತ್ರದಲ್ಲಿ ಬರಗಾಲ ಕಾಮಗಾರಿಗೆ ಸಂಬಂಧಪಟ್ಟಂತೆ ಇಂಥ ಕೆಲಸವನ್ನು ಮಾಡಿಸಿ ಎಂದು ನಾವು ಅಧಿಕಾರಿಗಳಿಗೆ ಹೇಳಿದರೆ, ನಮ್ಮಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ. ಅಂದರೆ ಹಣವೇ ಬಂದಿಲ್ಲವೆಂದು ಹೇಳುತ್ತಾರೆ. ನಿಮ್ಮನ್ನು ಕೇಳಿದರೆ, ನಾವು ಹಣವನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ, ಅಲ್ಲಿ

ಅಧಿಕಾರಿಗಳನ್ನು ಕೇಳಿದರೆ ನಮಗೆ ಹಣ ಬಂದಿಲ್ಲ ಆದ್ದರಿಂದ ನಾವು ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಹಾಗಾದರೆ ನಾವು ಯಾರ ಮಾತನ್ನು ನಂಬಬೇಕು ? ಕೋಟಿಗಟ್ಟಲೆ ಹಣ ಜಿಲ್ಲಾಧಿಕಾರಿಯವರ ಮುಖಾಂತರ ತಹಸೀಲ್ದಾರ್, ಬಿ. ಡಿ. ಒ. ರವರಿಗೆ ಹೋಗಿ ಅಲ್ಲಿಂದ ಬರಗಾಲ ಕಾಮಗಾರಿಗೆ ಖರ್ಚಾಗಬೇಕಾಗಿದೆ. ಆದರೆ ನೀವು ಹಣವನ್ನೇ ಇನ್ನೂ ಕೊಟ್ಟಿಲ್ಲ. ಬರುವ ಜೂನ್ ಅಥವಾ ಜುಲೈ ತಿಂಗಳವರೆಗೆ ಬರಗಾಲ ಕಾಮಗಾರಿಗೋಸ್ಕರ ಎಷ್ಟು ಹಣ ಬೇಕೋ ಅಷ್ಟನ್ನು ಕೊಡಿ. ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಎಷ್ಟು ಹಣದ ಅವಶ್ಯಕತೆ ಇದೆ ಅಷ್ಟನ್ನು ಕೇಳಿ ತೆಗೆದುಕೊಳ್ಳಿ. ಈಗ ಕೇಂದ್ರದವರು ಎಷ್ಟು ಕೊಟ್ಟಿದ್ದಾರೆ ಅದರ ಜೊತೆಗೆ ಇನ್ನೂ ಹೆಚ್ಚಿಗೆ ಹಣವನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡಿ. ಇದಕ್ಕೆ ನಮ್ಮ ಸಂಪೂರ್ಣ ಸಹಕಾರ, ಬೆಂಬಲ ನಿಮಗೆ ಇದೆ. ಆದರೆ ಅವರಿಂದ ಹಣವನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಅಣ್ಣ-ತಮ್ಮಂದಿರಂತೆ ಮಧುರ ಬಾಂಧವ್ಯದಿಂದ ತೆಗೆದುಕೊಳ್ಳಬೇಕೇ ಹೊರತು ಅವರ ವಿರುದ್ಧ ಕಾಲು ಕೆರೆದುಕೊಂಡು ಜಗಳ ಮಾಡಿಕೊಂಡು, ಅವರನ್ನು ಸಿಟ್ಟಿಗೆಬ್ಬಿಸಿ ಕೇಳುವುದಕ್ಕೆ ಹೋಗಬೇಡಿ. ಬರುವ ಜುಲೈ ತಿಂಗಳವರೆಗೂ ನಮ್ಮ ರಾಜ್ಯದಲ್ಲಿ ಹಲವಾರು ಸಮಸ್ಯೆಗಳ ಉದ್ಭವವಾಗುತ್ತದೆ. ಅವುಗಳನ್ನು ನಾವು, ನೀವು ಧೈರ್ಯದಿಂದ ಎದುರಿಸಬೇಕಾಗುತ್ತದೆ. ಈ ದಿಸೆಯಲ್ಲಿ ನಮ್ಮ ಸಹಾಯ, ಸಹಕಾರ, ಬೆಂಬಲ ನಿಮಗೆ ಖಂಡಿತವಾಗಿಯೂ ಇದೆಯೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟ ಮಾನ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇದುವರೆಗೆ ಬರಗಾಲದ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಇದರಲ್ಲಿ ಇನ್ನೂ ಕೆಲವು ಮಾನ್ಯ ಸದಸ್ಯರು ಮಾತನಾಡುವವರಿದ್ದರು. ಆದರೆ ಕಾಲಾವಕಾಶ ಇಲ್ಲದಿರುವುದರಿಂದ ಮುಂದೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಮಾತನಾಡುವಾಗ ಅವರಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತೇನೆ. ಇದುವರೆಗೆ ಎಲ್ಲ ಪಕ್ಷದ ಸದಸ್ಯರಿಗೂ ಮಾತನಾಡಲು ಅವಕಾಶವನ್ನು ಕೊಟ್ಟಿರುವುದರಿಂದ ಬರಗಾಲದ ಬಗೆಗಿನ ಚರ್ಚೆ ಇಲ್ಲಿಗೆ ಮುಕ್ತಾಯವಾಗಿದೆ. ಬರುವ ಸೋಮವಾರದಂದು ಮಾನ್ಯ ಕಂದಾಯ ಮಂತ್ರಿಯವರು ಉತ್ತರವನ್ನು ಕೊಡುವವರಿದ್ದಾರೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಮಾತನಾಡತಕ್ಕ ಸದಸ್ಯರು ಕೆಲವೇ ಮಂದಿ ಇರುವುದರಿಂದ ಅವರಿಗೂ ಅವಕಾಶವನ್ನು ಕೊಟ್ಟಿದ್ದರೆ ಚೆನ್ನಾಗಿತ್ತು......

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ, ಇದುವರೆಗೂ ಮಾತನಾಡಿದ ಎಲ್ಲ ಮಾನ್ಯ ಸದಸ್ಯರಿಗೂ ಕೇವಲ ಗೋಶಾಲೆಗಳನ್ನು ತೆರೆಯಬೇಕೆಂದು ಹೇಳಿದರೆ ಹೊರತು ಕುರಿಗಳ ಬಗ್ಗೆ ಯಾರೂ ಮಾತನಾಡಲಿಲ್ಲ, ನನ್ನ ಕ್ಷೇತ್ರದಲ್ಲಿ ಸುಮಾರು ೫೦ ಲಕ್ಷ ಕುರಿಗಳು ನೀರು ಮೇವು ಇಲ್ಲದೇ ಸಾಯುತ್ತಿವೆ. ಆದರಿಂದ ಇದಕ್ಕೂ ಕೂಡ ಹಣನ್ನೊದಗಿಸಿ ಗೋಶಾಲೆಗಳಂತೆ ಕುರಿ ಶಾಲೆಗಳನ್ನೂ ತೆರೆಯಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಾದರೆ ಗೋಶಾಲೆಗೆ ಕೊಟ್ಟಂಥ ೨ ಟ್ರಕ್ ಹುಲ್ಲನ್ನು ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರ್ ತನ್ನ ಮನೆಗೆ ಒಯ್ದಿದ್ದಾನೆ, ಈ ಕೂಡಲೇ ತಾವು ತಮ್ಮ ಅಧಿಕಾರಿಗಳಿಗೆ ಆದೇಶ ನೀಡಿ ಆ ಹುಲ್ಲನ್ನು ವಶಪಡಿಸಿಕೊಂಡು ರೆವಿನ್ಯೂ ಇನ್‌ಸ್ಪೆಕ್ಟರನ ವಿರುದ್ಧ ತೀವ್ರ ಕ್ರಮ ತೆಗೆದುಕೊಂಡು ಅವನನ್ನು ಸಸ್ಪೆಂಡ್ ಮಾಡಬೇಕು ಇಲ್ಲವೇ ಡಿಸ್‌ಮಿಸ್ ಮಾಡಬೇಂದು ಅಗ್ರಹಪೂರ್ವಕವಾಗಿ ಹೇಳಬಯಸುತ್ತೇನೆ.

ಅಧ್ಯಕ್ಷರು.—ಅದನ್ನು ಮಾನ್ಯ ಕಂದಾಯ ಮಂತ್ರಿಯವರಿಗೆ ಕಳುಹಿಸಿಕೊಡಿ. ಇಂದಿನ ಸಭೆಯನ್ನು ಇಲ್ಲಿಗೆ ಮುಕ್ತಾಯಮಾಡಿ ಮತ್ತೆ ಸದನವು ಸೋಮವಾರ ೧೧ ಗಂಟೆ ಸೇರತಕ್ಕದ್ದು.

(ಸದನವು ಸಂಜೆ ೩ ಗಂಟೆ ೩೫ ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ೨೭ನೇ ತಾರೀಖು ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳುವುದೆಂದು ತೀರ್ಮಾನಿಸಿತು.)